
ಗೀತಾ ಪರಿಚಯ



ಗ್ರಂಥಕರ್ತ : ತ್ರಿಮತ ಏಕೈಕ ಗುರುವು

ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, (82) ದಶ ಅಷ್ಟಾಧಿಕ ಗ್ರಂಥಕರ್ತ

ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ

ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು

www.thraithashakam.org



ಗೀತಾ ಪರಿಚಯ

ರಚಿತ

ತ್ರಿಮತ ಏಕೈಕ ಗುರುವು

ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, (82) ದಶ ಅಷ್ಟಾಧಿಕ ಗ್ರಂಥಕರ್ತ

ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಿತ, ತ್ರೈತ ಸಿದ್ಧಾಂತ ಆದಿಕರ್ತ

ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು

ತೆಲುಗುನಿಂದ ಕನ್ನಡಕ್ಕೆ ಅನುವಾದ

ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ

ಗ್ರಂಥ ಮುದ್ರಣ

ಇಂದೂ ಜ್ಞಾನ ವೇದಿಕೆ (Regd. No : 168/2004)

(Estd. in 1978 - Regd.No.: 168/2004)

ತ್ರೈತ ಶಕ : 38 ಪ್ರಥಮ ಮುದ್ರಣ : ನವೆಂಬರ್ –2016

ಪ್ರತಿಗಳು : 1000 **ಬೆಲೆ. 50/–**

ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆ-ಉತ್ತರಗಳು.
03. ಧರ್ಮ-ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ-ಅಸತ್ಯವಾ?)
06. ದೆವ್ವಗಳಹಾಗೂ-ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಣಾ ಕಥೆ.
08. ಮಂತ್ರ-ಮಹಿಮೆ (ಸತ್ಯವಾ-ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ- ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ-ಗೀತ (ಹಾಡುಗಳ ಜ್ಞಾನ).
22. ತತ್ತ್ವಾರ್ಥ ಗೊಂಬೆಗಳ ಜ್ಞಾನ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ-ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾಮಂಜರಿ.
29. ತ್ರೈತಾರಾಧನೆ.
30. ಸಮಾಧಿ.
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧ ಬೋಧನೆ.
34. ಸುಪ್ರಸಿದ್ಧಬೋಧನೆ.
35. ಸಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು-963.
38. ಮತ-ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು-ಆಸ್ತಿಕರು.
44. ಹೇತುವಾದ-ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ರೂಪ ಬದಲಾದ ಗೀತೆ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.

ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ರಚನೆಗಳು

ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.
63. ವಾರ್ತಕನು–ವರ್ತಕನು.
64. ದೇವರ ಚಿಹ್ನೆ.
65 ಯಾವುದು ನಿಜವಾದ ಜ್ಞಾನ?
66. ಪ್ರತಿಮೆ X ವಿಗ್ರಹ – ದೈವ X ದೆವ್ವ.
67. ಮರಣದ ನಂತರ ಜೀವನ.
68. ಯಾವ ಮತದಲ್ಲಿ ಎಷ್ಟು ಮತ ದ್ವೇಷ.
69. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
70. ಮಧ್ಯಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
71. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
72. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು (ಎರಡನೇ ಭಾಗ)
73. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
74. ಒಂದು ಮಾತು ಮೂರು ಗ್ರಂಥಗಳು.
75. ಲೂ ಎಂದರೇ ಏನು? (ತೆಲುಗು)
76. ಆದಿತ್ಯ.
77. ಗಿಡ ಮೊದಲಾ! ಬೀಜ ಮೊದಲಾ?
78. ಒಬ್ಬನೇ ಇಬ್ಬರು.
79. ಸಾಯಿಬಾಬಾ ದೇವರಾ! ಅಲ್ಲವಾ!
80. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
81. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
82. ವಿಶ್ವ ವಿದ್ಯಾಲಯ
83. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
84. ಒರೆಗಲ್ಲು (ಗೀಟುರಾಯಿ)
85. ಮೂರು ದೈವ ಗ್ರಂಥಗಳು–ಮೂರು ಪ್ರಥಮ ವಾಕ್ಯಗಳು
86. ಹೇತುವಾದ ಪ್ರಶ್ನೆಗಳು–ಸತ್ಯವಾದ ಉತ್ತರಗಳು
87. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ



04

ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

DVD's

01. ಸಂತಕಮು.
02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ.
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ.
09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಠಿ–ಸೃಷ್ಠಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ.
20. ಭಗವಂತುಡು.
21. ದ್ರಾವಿಡುಲು – ಆರ್ಯುಲು.
22. ಪ್ರಭುವು – ಪ್ರಭುತ್ವಂ.
23. ಭೂತಂ – ಮಹಾಭೂತಂ.
24. ಪ್ರಭು – ಪ್ರಜ.
25. ಯಾದವ್.
26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು.
28. ಪ್ರಕೃತಿ–ವಿಕೃತಿ.
29. ಮಾಟ–ಮಂದು.
30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ದ್ವಿತೀಯುಡು.
39. ಎದಮೀದಮುದ್ರ– ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ– ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ– ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು– ಮಾಯ ಮಹತ್ಯಮು.
46. ಸಮಾಧಿ.
47. ತಲ್ಲಿ ತಂಡ್ರಿ – ಗುರುವು ದೈವಮು.
48. ಕಲಿಯುಗಮು.
49. ಮತಮು–ಪಥಮು.
50. ದಿವ್ಯಖುರಾನ್–ಹದೀಸು.
51. ತಲ್ಲಿ.
52. ಪುಟ್ಟುಟ – ಗಿಟ್ಟುಟ.
53. ಗೋರು – ಗುರು.
54. ಆತ್ಮ.
55. ಕರ್ಮ ಮರ್ಮಮು.
56. ತಾತ.
57. ಗುರುಪೌರ್ಣಮಿ.
58. ಯೋಗೀಶ್ವರುಲ ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು – ಹಿಂದುವು.
61. ಸ್ತ್ರೀ–ಪು/ಲಿಂಗಮು.

ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

DVD's

62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ – ದೇಹಂ ಮೋಹಂ.
65. ಜೀರ್ಣ+ಆಶಯಮು.
66. ಮೇಘಂ ಒಕಭೂತಂ– ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ ಮರಣಂ
69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ – ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು– ರೆಂಡು ಜಾಗಾಲು.
75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ.
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು– ಕರ್ಮಉನ್ನ ಕೃಷ್ಣುಡು.
79. ಭಯಂ.
80. ಸುಖಮು–ಆನಂದಮು.
81. ದಶ–ದಿಶಲು.
82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು– ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ ಮಹೇಂದ್ರಜಾಲ, ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ (ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು–ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು?
88. ತೆಲುಗುಲೋ ಮೂಡು– ಆರು–ತೊಮ್ಮಿದಿ
89. 6–3=6
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!
92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ–ಭಯಮು.
99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು–ಅಪಾರ್ಥಮು.
102. ತೋಲೇವಾಡು.
103. ಗುರು ಚಿಹ್ನಂ.
104. ಭಕ್ತಿ–ಶ್ರದ್ಧಲು.
105. ದೇವುಡು ಇದ್ದರಾ! ಒಕ್ಕರಾ!!
106. ಪುರುಷೋತ್ತಮ.
107. ಮತದ್ವೇಷಮು.
108. ನೀ ವೆನುಕ ವಾಡು.
109. ಗ್ರಂಥಮು – ಬೋಧ.
110. ಆಟ – ದೊಬೂಚುಲಾಟ.
111. ಪ್ರಜಲು – ಮಾನವುಲು.
112. ಆಸ್ತಿ – ದೋಸ್ತಿ
113. ದಂತಮು–ಅಂತಮು.
114. ಮಾಯ ಮರ್ಮಮು–ಆತ್ಮ ಧರ್ಮಮು
115. ಶ್ರೀಕೃಷ್ಣುಡು ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ ಪ್ರಥಮವಾಕ್ಯಮುಲು
117. ಅದುರು–ಬೆದುರು
118. ಆಧ್ಯಾತ್ಮಿಕ ಪ್ರಶ್ನಲು–ಜವಾಬುಲು.

ಸೂಚನೆ : ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಲಾಗದ ಪದಗಳು ಹಾಗೆಯೇ ಮುದ್ರಿಸಲಾಗಿದೆ.

ಇಂದೂ ಜ್ಞಾನವೇದಿಕೆ ಪುಸ್ತಕಗಳು ದೊರೆಯುವ ವಿಳಾಸ

ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)

ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P

Cell : ಲಕ್ಷ್ಮಿನಾರಾಯಣಾಚಾರಿ–09440556968. ವೆಂಕಟೇಶ್–08096816963.

(ಇಂದೂ ಜ್ಞಾನ ವೇದಿಕೆ ಸದಸ್ಯರು)

ಎ. ರಾಘವೇಂದ್ರ ಶ್ರೇಷ್ಠಿ
ಹೊಸಪೇಟೆ, ಬಳ್ಳಾರಿ (ಜಿಲ್ಲೆ). K. A
Cell : 9611133635,
9731816452, 09440645005

ಜಿ. ರಾಧಾಕೃಷ್ಣಾ ರೆಡ್ಡಿ
ಪ್ರಬೋಧಾ ನಿಲಯ. ರಿಂಗ್ ರೋಡ್,
ಮರಲೂರು, ತುಮಕೂರು (ಜಿ).
ಪಿನ್–572150, Cell : 9448177812

ಶಿವರಾಜ
(ಸಾ)(ಕಿ) ಕುಕನೂರು, ಚಿಕ್ಕಸೂಗುರು (ತಾ),
ರಾಯಚೂರು (ಜಿ), Cell:98443 69516

R.S. ವೀರಾಚಾರಿ
ಕತ್ತರಗುಪ್ಪೆ, ಬೆಂಗಳೂರು–560085
Cell : 9036892829

G. ಮನೋಹರ್
ಮಲ್ಲಸಂದ್ರ, ಟಿ. ದಾಸರಹಳ್ಳಿ
ಬೆಂಗಳೂರು–560057
Cell : 7411459912, 9448452963.

B. ವಾತ್ಸಲ್ಯ
ರೈಲ್ವೇ ಸ್ಟೇಷನ್ ಹತ್ತಿರ,
ಪಿ.ಬಿ.ರೋಡ್, ದಾವಣಗೆರೆ–577002
Cell : 9901534677, 8880666529

ಯೋಗೇಶ್.B
ವಡ್ಡೇಪಾಲ್ಯಂ (ಗ್ರಾ),
ಕುಂದುರ್ಪಿ(ಮಂ),ಅನಂತಪುರ(ಜಿಲ್ಲಾ)
ಸೆಲ್: 9620193341, 9739228639

ಬಸವರಾಜ ಅಂಗಡಿ
(ಸಾ) ಪೋತ್ನಾಳ, (ತಾ) ಮಾನವಿ,
ರಾಯಚೂರು (ಜಿ)
Cell : 9632418716

ಸೂರ್ಯ ಪ್ರಕಾಶ
ಟೈಪ್ 'ಸಿ' (ಸಾ) (ಪೊ) ಶಕ್ತಿನಗರ
(ತಾ), ರಾಯಚೂರು (ಜಿ)
Cell : 9611183107, 9164886981

ಲೀಲಾವತಿ
ಜನತಾ ನಗರ, ತೊಣಚಿಕೊಪ್ಪಲ್,
ಮೈಸೂರ್–547097
Cell : 9141109799, 9986369118

T.V. ರಮಣ
NGR ಲೇಔಟ್, ರೂಪೇನಾ
ಅಗ್ರಹಾರ, ಬೆಂಗಳೂರು–560068.
Cell : 08970772028, 07411459912, 07406039453

M. ನಾರಾಯಣರೆಡ್ಡಿ
(Bsc census department retired supervisor)
ರಾಮಗುಂಡನಲ್ಲಿ ಪೋಸ್ಟ್, ವೈಟ್
ಫೀಲ್ಡ್ ರೋಡ್, ಬೆಂಗಳೂರು–066
Cell : 9482516023

ಯೋಗೇಶ್
ಸೂಲನಾಯಕನಹಳ್ಳಿ (ಗ್ರಾಮ),
ತುಮಕೂರು (ಜಿಲ್ಲೆ).
ಸೆಲ್:8762523963,9740744424

ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.
2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.
3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.
4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.
5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.
6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.
7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.
8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.
9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.
10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.
11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.
12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲಿಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

ಮೊದಲ ಪರಿಚಯ

ಪೂರ್ವ ಕಾಲದಲ್ಲಿ ಎಲ್ಲಾ ಮತಗಳಿಗಿಂತ ಮೊದಲು ಹುಟ್ಟಿರುವುದು, ಎಲ್ಲಾ ಮತಗಳಿಗಿಂತ ದೊಡ್ಡದು ಒಂದು ಇಂದೂಮತವೇ ಎಂದೂ ಹೇಳುವುದರಲ್ಲಿ ಸಂಶಯವಿಲ್ಲ. ಕೃತಯುಗದಿಂದಲೇ ಇಂದೂಮತ ಇದೆ. ಪೂರ್ವದಲ್ಲಿ ಯಾವ ಇತರ ಮತಗಳು ಇಲ್ಲದ ಕಾಲದಲ್ಲಿ ಇಂದೂಮತ ಪ್ರಪಂಚ ವ್ಯಾಪ್ತವಾಗಿತ್ತು. ಪ್ರಪಂಚದಲ್ಲಿ ಮೊದಲ ದೇವಾಲಯ ಆಕಾರವಿಲ್ಲದ ಗುಂಡನ್ನು ದೇವರಾಗಿ ಪ್ರತಿಷ್ಠಿಸಿ ಆರಾಧಿಸಲ್ಪಟ್ಟಿದೆ. ಪ್ರಪಂಚದಲ್ಲಿ ಮೊದಲ ಬೋಧನೆ ಭಗವದ್ಗೀತೆ ಸಾರಾಂಶ. ಭಗವದ್ಗೀತೆ ದ್ವಾಪರಯುಗದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಹೇಳುವುದಲ್ಲದೆ ಸೃಷ್ಠಿ ಆದಿಯಲ್ಲಿಯೇ ದೇವರು ಸೂರ್ಯನಿಗೆ ತಿಳಿಸಿರುವುದು. ಗೀತೆ ಆದಿಯಲ್ಲಿಯೇ ಹೇಳಿರುವಾಗ ಆದಿಯಿಂದ ಇಂದೂಮತ ಇದೆ. ಕಾಲಕ್ರಮವಾಗಿ ಇಂದೂಮತ ಅನೇಕ ಮತಗಳಾಗಿ ಸೀಳಿಹೋಗಿದೆ. ಇಂದೂಮತ ಎಂದರೆ ದೇವರ ವಿಷಯವನ್ನು ತಿಳಿಸುವ ಮತವೆಂದು ಅರ್ಥ. "ಇಂದೂ" ಎಂದರೆ ದೇವರ ಜ್ಞಾನವೆಂದು ಅರ್ಥ. ಇದರ ಪ್ರಕಾರ ಪ್ರಸ್ತುತ ಕಾಲದಲ್ಲಿ ಕ್ರೈಸ್ತ, ಇಸ್ಲಾಮ್ ಮತಗಳಿದ್ದರೂ ಅವೆಲ್ಲವೂ ಸೃಷ್ಠಿಕರ್ತನಾದ ದೇವರನ್ನು ಕುರಿತು ತಿಳಿಸುವವೇ ಆದ್ದರಿಂದ ಆ ಮತಗಳು ಸಹ ಇಂದೂ ಮತದಲ್ಲಿನ ಅಂತರ್ ಭಾಗಗಳೆಂದೇ ಹೇಳಬಹುದು. ಹಾಗೆಯೇ ಕ್ರೈಸ್ತ, ಇಸ್ಲಾಮ್ ಮತಗಳಲ್ಲಿನ ಬೋಧನೆಗಳು ರೂಪನಾಮಗಳು ಇಲ್ಲದ ಸರ್ವವ್ಯಾಪಿ ಆದ ದೇವರನ್ನು ಕುರಿತು ತಿಳಿಸಿರುವವೇ ಆದ್ದರಿಂದ ಅವೂ ಸಹ ಗೀತೆಯಲ್ಲಿನ ಅಂತರ್ ಭಾಗಗಳೆಂದೇ ಹೇಳಬಹುದು.

ಇತರ ಮತಗಳಲ್ಲಿನ ಅರ್ಥ, ಆರಾಧನಾ ಜ್ಞಾನವನ್ನು ಹೊಂದಿರುವುದೆ ಭಗವದ್ಗೀತೆ. ಎಲ್ಲಾ ಮತಗಳ ಸಾರಾಂಶ ಇಂದೂಮತದಲ್ಲಿರುವಾಗ, ಎಲ್ಲಾ ಮತಗಳ ಜ್ಞಾನ ಭಗವದ್ಗೀತೆಯಲ್ಲಿ ಇದೆ. ಸರ್ವಮತ ಜ್ಞಾನ ಹೊಂದಿದ ಗೀತೆ ಈ ದಿನ ಇಂದೂಮತದಲ್ಲಿ ಇದ್ದರೂ ಇಂದೂಮತದಲ್ಲಿ ಜ್ಞಾನ ತಿಳಿಯದ ಪ್ರಜೆಗಳು ತಮ್ಮ ಮತವೊಂದರ ಔನ್ನತ್ಯವನ್ನು ತಿಳಿಯದೆ ತಮ್ಮ ಮತದ ಹೆಸರನ್ನೇ ಮರೆತುಹೋಗಿ ಕೊನೆಗೆ ಹಿಂದೂಗಳಾಗಿದ್ದಾರೆ. ಹಿಂದೂಗಳು ಸಹ ಇಂದೂ

ಮತದಲ್ಲಿನ ಭಾಗಸ್ವಾಮಿಗಳೇ ಆದರೂ ಉಳಿದ ಮತಗಳಿಗಿಂತ ಹಿಂದುಳಿದಿರುವುದು, ಜ್ಞಾನಹೀನಿಗಳಾಗಿರುವುದರಿಂದ ಹಿಂದೂಮತ ಕ್ಷೀಣಿಸುವುದಕ್ಕೆ ಕಾರಣವಾಗಿದೆ. ಈದಿನ ಭಾರತ ದೇಶದಲ್ಲಿ ಹಿಂದೂಗಳಾಗಿರುವವರು ಎಷ್ಟೋ ಜನ ಕ್ರೈಸ್ತರಾಗಿ, ಮುಸ್ಲಿಮರಾಗಿ ಬದಲಾಗುವುದು ನಡೆಯುತ್ತಿದೆ ಎಂದು ಒಪ್ಪಿಕೊಳ್ಳದೆ ತಪ್ಪುವುದಿಲ್ಲ. ಒಂದು ಕಾಲದಲ್ಲಿ ದೈವಮಾರ್ಗದಲ್ಲಿ ಎಲ್ಲರಿಗೂ ಮಾರ್ಗದರ್ಶಕವಾದ ಇಂದೂಮತ ಈ ದಿನ ಹಿಂದೂಮತವಾಗಿ ಬದಲಾಗಿ ಜ್ಞಾನಮಾರ್ಗದಲ್ಲಿ ಹಿಂದುಳಿದಿರುವುದು, ಹಿಂದೂಮತ ಗುರುಗಳಲ್ಲಿ ಐಕ್ಯತೆಯಿಲ್ಲದೆ ಭಗವದ್ಗೀತೆಗೆ ಅನ್ಯವಾಗಿ ಬೋಧಿಸುವುದರಿಂದಲೂ, ಹಿಂದೂ ಮತದಲ್ಲಿನ ಪ್ರಜೆಗಳಿಗೆ ತಮಗೆ ಮೂಲಗ್ರಂಥ ಯಾವುದೋ ತಿಳಿಯದೆ ಗೀತೆಯನ್ನು ಬಿಟ್ಟು ಭಾರತ ರಾಮಾಯಣ ಪುರಾಣಗಳನ್ನು ಆಶ್ರಯಿಸಿರುವುದರಿಂದಲೂ ಹಿಂದೂ ಮತ ಕ್ಷೀಣಿಸುವುದಕ್ಕೆ ಅವಕಾಶ ಏರ್ಪಟ್ಟಿದೆ.

ಕ್ರೈಸ್ತರಿಗೆ ನಾವು ಕ್ರೈಸ್ತರೆಂದು ತಿಳಿದಿದೆ, ಅವರಿಗೆ ಮೂಲಗ್ರಂಥ "**ಪರಿಶುದ್ಧ ಬೈಬಲ್**" ಎಂದು ತಿಳಿದಿದೆ. ಮಹ್ಮದೀಯರಿಗೆ ನಾವು ಮುಸ್ಲಿಮರೆಂದು ತಿಳಿದಿದೆ, ಅವರ ಮೂಲ ಗ್ರಂಥ "**ಪವಿತ್ರ ಖುರಾನ್**" ಎಂದು ತಿಳಿದಿದೆ. ಹಿಂದೂಗಳಲ್ಲಿ ಕೆಲವರಿಗೆ ಹೊರತುಪಡಿಸಿ ಬಹಳ ಜನರಿಗೆ ಅವರದು ಹಿಂದೂಮತ ಎಂದಾಗಲಿ, ಅವರಿಗೆ ಮೂಲಗ್ರಂಥ "**ಭಗವದ್ಗೀತೆ**" ಎಂದಾಗಲಿ ತಿಳಿದಿಲ್ಲ. ಕ್ರೈಸ್ತರು ಬೈಬಲನ್ನು, ಮುಸ್ಲಿಮರು ಖುರಾನ್‌ನನ್ನು ಎಷ್ಟೋ ಪವಿತ್ರವಾಗಿ ಹೇಳಿಕೊಳ್ಳುತ್ತಾರೆ. ಆ ಗ್ರಂಥಗಳನ್ನು ಮೀರಿರುವುದು ಇಲ್ಲವೆಂದು ಅವರು ಹೇಳಿಕೊಳ್ಳುತ್ತಿರುವಾಗ, ಅವರ ಹೃದಯಗಳಲ್ಲಿ ಅವರ ಮೂಲ ಗ್ರಂಥಗಳಿಗೆ ಉನ್ನತ ಸ್ಥಾನ ಇರುವಾಗ, ಹಿಂದೂಗಳಲ್ಲಿ ಭಗವದ್ಗೀತೆಗೆ ಉನ್ನತ ಸ್ಥಾನ ಇಲ್ಲದಂತೆ ಹೋಗಿದೆ. ಎಲ್ಲಾ ಮತಗಳಿಗೆ ಮೂಲಗ್ರಂಥವಾದ ಭಗವದ್ಗೀತೆಯನ್ನು ಪಕ್ಕಕ್ಕಿಟ್ಟು ಭಾಗವತವನ್ನು ದೊಡ್ಡದಾಗಿ ಹೇಳಿಕೊಳ್ಳುವವರು ಹಿಂದೂಗಳಲ್ಲಿ ಬಹಳ ಜನರು ಇದ್ದಾರೆ. ಇಂದೂಮತದಲ್ಲಿನ ಗುರುಗಳು ಭಗವದ್ಗೀತೆಗಿಂತ ಹೆಚ್ಚಾಗಿ ಪುರಾಣಗಳನ್ನು ಹೇಳುವುದರಿಂದ, ಗೀತೆಗೆ ಕೊಟ್ಟಿರುವ ಸ್ಥಾನವನ್ನೇ ಕಲ್ಪಿತ ಕಥೆಗಳಿಗೆ,

ಪುರಾಣಗಳಿಗೆ ಕೊಡುವುದರಿಂದಲೂ ಎಲ್ಲದರಲ್ಲಿ ಗೀತೆಯೂ ಸಹ ಒಂದಾಗಿಹೋಗಿದೆ. ಭಗವದ್ಗೀತೆಗೆ ಹಿಂದೂ ಮತದಲ್ಲಿ ಪ್ರತ್ಯೇಕ ಸ್ಥಾನ ಇಲ್ಲದೆ ಹೋಗಿರುವುದರಿಂದ, ಹಿಂದೂ ಮತಕ್ಕೆ ಮೇಲೆ **ಆಧಾರ,** ಕೆಳಗೆ **ಬುನಾದಿ** ತಿಳಿಯದಂತೆ ಹೋಗುವು ದರಿಂದ ಹಿಂದೂಮತ ಕ್ಷೀಣಿಸುವ ಅವಕಾಶ ಏರ್ಪಟ್ಟಿದೆ.

ಭಗವದ್ಗೀತೆ ಸರ್ವ ಮಾನವರಿಗೂ, ಎಲ್ಲಾ ಮತದವರಿಗೂ ತಿಳಿಸಿದ ಹದ್ದು ಎಂದು, ಮಾನವರಿಗೂ, ಮಾಯೆಗೂ ಮಧ್ಯದಲ್ಲಿ ಗೀಚಿದ ಗೀತೆಯೆಂದು, ಒಂದು ಹಿಂದೂ ಮತದಲ್ಲಿರುವವರೆಗೇ ಅಲ್ಲದೆ, ಎಲ್ಲಾ ಮತಗಳಲ್ಲಿನ ಇಂದೂಗಳಿಗೆಂದು (ಜ್ಞಾನಿಗಳಿಗೆಂದು) ತಿಳಿಯುವಂತೆ ಬರೆಯಲ್ಪಟ್ಟಿರುವುದೇ ತ್ರೈತ ಸಿದ್ಧಾಂತ ಭಗವದ್ಗೀತೆ! ಎಲ್ಲರಿಗೂ ಸಂಬಂಧಿಸಿದ ಭಗವದ್ಗೀತೆ ಎಂದರೆ ಏನೋ ತಿಳಿಯಬೇಕೆಂದರೆ ಮುಂಚೆ ಈ "ಗೀತಾ ಪರಿಚಯ" ಓದಬೇಕಾದ್ದೇ!! ಗೀತಾ ಪರಿಚಯ ಮೊದಲು ಓದುವುದರಿಂದ ಎಲ್ಲಾ ಮತದವರಿಗೂ ಗೀತೆಯೊಂದರ ಸ್ವರೂಪವೇನೋ ತಿಳಿಯಬಲ್ಲದು. ಗೀತಾ ಪರಿಚಯದಲ್ಲಿ ಅನೇಕ ಸಂಶಯಗಳು, ಅನೇಕ ಪ್ರಶ್ನೆಗಳು ಸೃಷ್ಟಿಸಲ್ಪಟ್ಟು, ಭಗವದ್ಗೀತೆಯಲ್ಲಿ ಅವುಗಳಿಗೆ ಉತ್ತರಗಳನ್ನು ತಿಳಿಸಲಾಗಿದೆ. **ಆದ್ದರಿಂದ ದೃಷ್ಟಿ ಗೀತಾಪರಿಚವಾಗಿದ್ದು, ದೃಶ್ಯ ಭಗವದ್ಗೀತೆ ಆಗಿದೆ**. ಒಂದು ವಿಷಯ ತಿಳಿಯುವುದಕ್ಕೆ ಮೊದಲು, ತಿಳಿಯುವವನು, ನಂತರ ತಿಳಿಯಲ್ಪಡುವುದು ಎರಡೂ ಅಗತ್ಯವೆನ್ನುವಂತೆ ಗೀತೆಯ ವಿಷಯ ತಿಳಿಯುವುದಕ್ಕೆ, **ಮೊದಲು ಗೀತಾಪರಿಚಯವನ್ನು ನಂತರ ತ್ರೈತ ಸಿದ್ಧಾಂತ ಭಗವದ್ಗೀತೆ ಅಗತ್ಯ**. ಈ ಎರಡು ತಿಳಿದರೆ ಭೂಮಿ ಮೇಲೆ ಮತಗಳೆಂದರೆ ಏನೋ, ಮನುಷ್ಯರೆಂದರೆ ಏನೋ ತಿಳಿಯುತ್ತದೆ. ನಂತರ ಎಲ್ಲದಕ್ಕೂ ಮೂಲ ಪುರುಷನಾದ **ದೇವರು** ತಿಳಿಯುತ್ತಾನೆ.

ಭೂಮಿ ಮೇಲಿರುವ ಜೀವರಾಶಿಗಳಲ್ಲಿ ಮನುಷ್ಯ ಎಲ್ಲದಕ್ಕಿಂತಲೂ ಹೆಚ್ಚು ಬುದ್ಧಿಶಕ್ತಿ ಇರುವವನು. ಬುದ್ಧಿಯಲ್ಲಿ ಎಲ್ಲದಕ್ಕಿಂತ ಮಹಾನ್ವಿತನಾದ ಮಾನವನು, ಎಲ್ಲಾ ರಂಗಗಳಲ್ಲಿಯೂ ಅತಿ ಸೂಕ್ಷ್ಮಾತಿ ಸೂಕ್ಷ್ಮವಾಗಿ ಯೋಚನೆ ಮಾಡುತ್ತಿದ್ದಾನೆ. ಆದರೆ ಒಂದೇ ಒಂದು ಆಧ್ಯಾತ್ಮಿಕ ರಂಗದಲ್ಲಿ ಮಾತ್ರ ಹೀನಾತಿ ಹೀನವಾಗಿ ಹಿಂದುಳಿದಿದ್ದಾನೆ. ಉದಾಹರಣೆಗೆ ಒಬ್ಬ ನ್ಯಾಯವಾದಿ (ಅಡ್ವಕೇಟ್) ಇದ್ದಾನೆಂದುಕೊಳ್ಳೋಣ. ಆತನು ಅನ್ಯಾಯಪರನ ಕಡೆ ವಾದಿಸುವುದಕ್ಕೆ ಒಪ್ಪಿಕೊಂಡು, ತನ್ನ ಬುದ್ಧಿಯಿಂದ ಅನ್ಯಾಯವನ್ನು, ನ್ಯಾಯವಾಗಿ ವರ್ಣಿಸಿ, ತನ್ನ ಕ್ಲೈಂಟ್ ಮಾಡಿರುವುದು ನ್ಯಾಯವೆನಿಸಿ ಶಿಕ್ಷೆಯಿಂದ ತಪ್ಪಿಸುತ್ತಿದ್ದಾನೆ. ಹಾಗೆಯೇ ಒಬ್ಬ ಡಾಕ್ಟರ್ ತನ್ನ ಹತ್ತಿರಕ್ಕೆ ಬಂದಿರುವ ರೋಗಿಯೊಬ್ಬನ ಭಯಂಕರ ರೋಗವನ್ನು ಸಹ, ತನ್ನ ತಿಳುವಳಿಕೆಯಿಂದ ಚಿಕಿತ್ಸೆ ಮಾಡಿ ಗುಣಪಡಿಸುತ್ತಾನೆ. ಹೋಲಿಕೆ ಇಲ್ಲದ ಹೊಸ ರೋಗವನ್ನು ಬುದ್ಧಿಯಿಂದ ಯೋಚಿಸಿ ಗುಣಪಡಿಸಿದ ವೈದ್ಯನಾಗಲಿ, ಅನ್ಯಾಯವನ್ನು ನ್ಯಾಯವೆನ್ನುವಂತೆ ವಾದಿಸಿ ಗೆದ್ದ ನ್ಯಾಯವಾದಿಯಾಗಲಿ, ಇನ್ನೂ ಎಷ್ಟೋ ತಿಳುವಳಿಕೆ ಇರುವವರಾಗಲಿ, ದೈವಸಂಬಂಧವಾದ ವಿಷಯಗಳ ಹತ್ತಿರ ಮಾತ್ರ ಪೂರ್ತಿ ತಿಳುವಳಿಕೆ ಇಲ್ಲದವರಾಗಿ, ಯಾವುದನ್ನೂ ಗ್ರಹಿಸದವರಾಗಿ ಹೋಗುತ್ತಿದ್ದಾರೆ. ಪ್ರಾಪಂಚಿಕ ವಿಷಯಗಳಲ್ಲಿ ವಿಕಾಸ ಹೊಂದಿದ ಬುದ್ಧಿ, ಪರಮಾತ್ಮ ವಿಷಯಗಳಲ್ಲಿ ಮಾತ್ರ ಸಂಕುಚಿತ ಹೊಂದುತ್ತಿದೆ. ಮಾನವನು ಪ್ರಪಂಚದ ವಿಷಯಗಳಲ್ಲಿ ಎಷ್ಟೋ ಅಭಿವೃದ್ಧಿ ಹೊಂದುತ್ತಾ ಪೂರ್ವದಲ್ಲಿ ಇಲ್ಲದಿರುವ, ಯಾರಿಗೂ ತಿಳಿಯದಿರುವವಾದ ಎಷ್ಟೋ ಹೊಸ ಸಿದ್ಧಾಂತಗಳನ್ನು, ಹೊಸ ಯಂತ್ರಗಳನ್ನು ಕಂಡುಹಿಡಿಯುತ್ತಿದ್ದರೂ, ಆಧ್ಯಾತ್ಮಿಕ ವಿಷಯಗಳಲ್ಲಿ ಮಾತ್ರ ಪೂರ್ವದಲ್ಲಿರುವವು ಮತ್ತು ಪೂರ್ವದಲ್ಲಿ ಎಲ್ಲರಿಗೂ ತಿಳಿದಿರುವ ವಿಷಯಗಳನ್ನು ಗ್ರಹಿಸಲಾರದೆ ಹೋಗುತ್ತಿದ್ದಾನೆ. ಪ್ರಪಂಚದ ವಿಷಯಗಳನ್ನು ಎಷ್ಟೋ ತಿಳಿದವನಾದರೂ, ಪರಮಾತ್ಮ ವಿಷಯಗಳನ್ನು ಏಕೆ ತಿಳಿಯಲಾರದೆ ಹೋಗುತ್ತಿದ್ದಾನೋ ಗ್ರಹಿಸಲಾರದೆ, ದೈವ ವಿಷಯಗಳಲ್ಲಿ ಪೂರ್ತಿಯಾಗಿ ಗೊಂದಲಕ್ಕೊಳಗಾಗುತ್ತಿದ್ದಾನೆ. ಅಕ್ಷರಗಳನ್ನು ಕಲಿತ ಮಾತ್ರಕ್ಕೆ ಎಲ್ಲ ಯೋಗ್ಯತಾ

ಪತ್ರಗಳು ಬಂದಂತೆ ಎಂದು ತಿಳಿದವನಾಗಿ, ತನಗಿರುವ ಸ್ವಲ್ಪ ಭಕ್ತಿಯಿಂದಲೇ ತನಗೆ ಪೂರ್ತಿ ಜ್ಞಾನ ತಿಳಿದಿದೆ ಎಂದುಕೊಳ್ಳುತ್ತಿದ್ದಾನೆ.

ಇಂದಿನ ಮಾನವನ ಬುದ್ಧಿಗೆ ಆಧ್ಯಾತ್ಮಿಕ ವಿಷಯಗಳಲ್ಲಿ ಪೂರ್ಣ ಮಟ್ಟದ ಅವಗಾಹನೆ ಇಲ್ಲದಂತೆ ಹೋಗುತ್ತಿದೆ. ಉದಾಹರಣೆಗೆ ಒಂದು ದಾರಿಯಲ್ಲಿ ಇಬ್ಬರು ಸ್ತ್ರೀಯರು ಹೋಗುತ್ತಿದ್ದಾರೆ. ಅದೇ ದಾರಿಯಲ್ಲಿಯೇ ಮೂವರು ವ್ಯಕ್ತಿಗಳು ಕುಳಿತುಕೊಂಡಿದ್ದಾರೆ. ಸ್ವಲ್ಪ ದೂರದಲ್ಲಿ ಬರುತ್ತಿರುವ ಇಬ್ಬರು ಸ್ತ್ರೀಯರಲ್ಲಿ ಒಬ್ಬರು ಸ್ತ್ರೀ ಆಗಿದ್ದು, ಒಬ್ಬರು ನಪುಂಸಕನಾಗಿದ್ದನು. ಸೀರೆ, ರವಕೆ ತೊಡುವುದರಲ್ಲಿಯೂ, ವೇಷಧಾರಣೆಯಲ್ಲಿಯೂ, ಅಲಂಕಾರ ದಲ್ಲಿಯೂ ನಪುಂಸಕನು ಸ್ತ್ರೀಯೊಂದಿಗೆ ಸಮಾನವಾಗಿರುವುದರಿಂದ ದೂರದಿಂದ ನೋಡಿದಾಗ ಇಬ್ಬರನ್ನೂ ಸ್ತ್ರೀಯರೆಂದುಕೊಳ್ಳುವುದರಲ್ಲಿ ತಪ್ಪಿಲ್ಲ. ಮೊದಲು ಇಬ್ಬರನ್ನು, ಸ್ತ್ರೀಯರೆಂದೇ ದಾರಿ ಪಕ್ಕದಲ್ಲಿ ಕುಳಿತುಕೊಂಡವರು ಅಂದುಕೊಂಡರು. ಆ ಸ್ತ್ರೀಯರು ಸ್ವಲ್ಪ ಹತ್ತಿರವಾಗುತ್ತಲೇ ಮೂವರಲ್ಲಿ ಮೊದಲನೆಯವನು, ಅವರ ನಡತೆ, ಮುಖ ವರ್ಚಸ್ಸು ಸ್ವಲ್ಪ ಮಟ್ಟಿನ ವ್ಯತ್ಯಾಸದಿಂದ ಬರುತ್ತಿರುವುದು ಇಬ್ಬರು ಸ್ತ್ರೀಯರಲ್ಲ, ಅವರಲ್ಲಿ ಒಬ್ಬರು ಮಾತ್ರ ಸ್ತ್ರೀಯಾಗಿದ್ದು ಒಬ್ಬರು ನಪುಂಸಕನೆಂದು ಹೇಳಿದನು. ಆ ಮಾತನ್ನು ಕೇಳಿದ ಎರಡನೆಯವನು, ಮೂರನೆಯವನು ಅವರ ವ್ಯತ್ಯಾಸವನ್ನು ತಿಳಿದುಕೊಳ್ಳದೆ, “ಅಲ್ಲ ಇಬ್ಬರೂ ಸ್ತ್ರೀಯರೇ” ಎಂದರಂತೆ. ಹಾಗೆ ಅವರಂದುಕೊಂಡ ಸ್ವಲ್ಪ ಸಮಯಕ್ಕೆ ದಾರಿಯಲ್ಲಿ ಹೋಗುವ ಆ ಇಬ್ಬರು ಹತ್ತಿರಕ್ಕೆ ಬಂದರು. ಹತ್ತಿರದಿಂದ ನೋಡಿದ ಎರಡನೆಯವನಿಗೆ ಸ್ವಲ್ಪ ಅರ್ಥವಾಗಿ ಒಬ್ಬರು ನಪುಂಸಕನೆಂದು ನಿರ್ಧಾರಕ್ಕೆ ಬಂದನು, ಆದರೆ ಮೇಲ್ನೋಟಕ್ಕೆ ಒಪ್ಪಿಕೊಳ್ಳಲಿಲ್ಲ. ಇಷ್ಟೊತ್ತು ಅಲ್ಲವೆಂದು ಈಗ ಒಪ್ಪಿಕೊಂಡರೆ ನನಗೆ ಬೆಲೆ ಇರುವುದಿಲ್ಲ ಎಂದುಕೊಂಡನು. ಮೂರನೆಯವನು ಮಾತ್ರ ತಿಳುವಳಿಕೆ ಕಡಿಮೆ ಇವವನಾಗಿ ಆಗಲೂ ಸಹ ಅವನಿಗೆ ಅರ್ಥವಾಗಲಿಲ್ಲ. ಅವರಲ್ಲಿನ ವ್ಯತ್ಯಾಸವನ್ನು ಕಂಡುಕೊಳ್ಳದೆ ಹೋದನು. ಮೊದಲನೆಯವನು ಎಷ್ಟೋ ವ್ಯತ್ಯಾಸಗಳನ್ನು ಹೇಳುತ್ತಿದ್ದರೂ, ಮೂರನೆಯವನಿಗೆ

ಸ್ವಲ್ಪವೂ ಅರ್ಥವಾಗಲಿಲ್ಲ. ಮೇಲ್ನೋಟಕ್ಕೆ ಕಾಣಿಸುವ ಆಕಾರಗಳೇ ಮುಖ್ಯವೆಂದುಕೊಂಡಿದ್ದನು. ಒಳಗಿರುವ ಲಿಂಗಬೇಧವನ್ನು ಗ್ರಹಿಸಲಾರದೆ ಹೋಗಿದ್ದನು. ಕೊನೆಗೆ ಈ ವಿಧವಾಗಿ "ಏನು ಹೇಳಿದರೂ ಒಪ್ಪಿಕೊಳ್ಳುವುದಿಲ್ಲ, ಪ್ರತ್ಯಕ್ಷವಾಗಿ ಸೀರೆ ಉಟ್ಟುಕೊಂಡ ಹೆಂಗಸರು ಕಾಣಿಸುತ್ತಿದ್ದರೆ ಹೇಗೆ ಇಲ್ಲ ಅನ್ನಬೇಕು? ನಾನು ನಂಬುವುದಿಲ್ಲ ಖಂಡಿತ ನಂಬುವುದಿಲ್ಲ. ಕಿವಿಗಳಿಗೆ ಓಲೆಗಳು, ಕೈಗಳಿಗೆ ಬಳೆಗಳು, ಕಾಲುಗಳಿಗೆ ಕಾಲುಂಗರಗಳು, ಕೊರಳಲ್ಲಿ ಮಂಗಳಸೂತ್ರ ಎಲ್ಲಾ ಇದ್ದರೆ ಹೆಂಗಸು ಅಲ್ಲ ಎನ್ನುತ್ತೀಯ ನಿನಗೆ ಬುದ್ಧಿಯಿಲ್ಲಹೋಗು" ! ಎಂದನು. ಎರಡನೆಯವನು ಮಾತ್ರ ಮೊದಲನೆಯವನ ಮಾತನ್ನು ಒಳಗೆ ಒಪ್ಪಿಕೊಂಡರೂ, ಹೊರಗೆ ಮಾತ್ರ ಮೂರನೆಯವನು ಹೇಳಿರುವುದೇ ನಿಜವೆಂದಿದ್ದಾನೆ. ಅವರ ವಾದವನ್ನು ನೋಡಿ ಮೊದಲನೆಯವನು ಇವರು ಬಹಳ ತಿಳುವಳಿಕೆ ಇಲ್ಲದವರೆಂದು, ಇವರ ಹತ್ತಿರ ವಾದಿಸುವುದಕ್ಕಿಂತ ಸುಮ್ಮನಿರುವುದು ಒಳ್ಳೆಯದು ಎಂದುಕೊಂಡನು.

ಈ ವಿಧವಾಗಿಯೇ ಜಗತ್ತಿನಲ್ಲಿ ಮೂರು ವಿಧದ ಮನುಷ್ಯರಿದ್ದಾರೆ. ಸತ್ಯವನ್ನು ಗ್ರಹಿಸಿದವರು ಒಂದು ವಿಧ, ಸತ್ಯವನ್ನು ಗ್ರಹಿಸಿ ಮೇಲ್ನೋಟಕ್ಕೆ ಒಪ್ಪಿಕೊಳ್ಳದವರು ಎರಡನೆಯ ವಿಧ, ಸತ್ಯವನ್ನು ಗ್ರಹಿಸಲಾರದೆ, ತಾನು ಹಿಡಿದಿರುವ ಮೊಲಕ್ಕೆ ಮೂರೇ ಕಾಲೆನ್ನುವಂತೆ ಸ್ವಲ್ಪವಾದರೂ ಹಿಂತಿರುಗಿ ಆಲೋಚಿಸೋಣ ಎಂದುಕೊಳ್ಳದೆ, ತನಗೆ ತಿಳಿದಿರುವುದೇ ಸತ್ಯವೆಂದು ಮೂರ್ಖರಂತೆ ವಾದಿಸುವವರು ಮೂರನೇ ವಿಧ. ದೈವ ವಿಷಯದಲ್ಲಿ ಸತ್ಯವನ್ನು ತಿಳಿದವರು ಕೋಟಿಗೊಬ್ಬರು ಅಪರೂಪವಾಗಿರುವಾಗ, ಅಂತರಂಗದಲ್ಲಿ ಸತ್ಯವನ್ನು ಒಪ್ಪಿಕೊಂಡು ಹೊರಗೆ ಒಪ್ಪಿಕೊಳ್ಳದವರು ಕೆಲವರಿದ್ದಾರೆ. ಸತ್ಯವನ್ನು ಗ್ರಹಿಸಲಾರದೆ ಮೂರ್ಖರಂತೆ ವಾದಿಸುವವರು ಎಷ್ಟೋ ಜನ ಇದ್ದಾರೆ. ದೈವ ಮಾರ್ಗದಲ್ಲಿ ಸತ್ಯವನ್ನೇ ತಿಳಿಯಬೇಕೆಂಬ ಛಲವನ್ನು ಹೊಂದಿ ಸತ್ಯಾನ್ವೇಷಿಯಾಗಿ, ಸತ್ಯವನ್ನು ತಿಳಿದವನು ಕೋಟಿಗೊಬ್ಬನಿರುವುದು ಅಪರೂಪವಾದ ವಿಷಯ. ಭೂಮಿ ಮೇಲೆ ಸತ್ಯವನ್ನು ತಿಳಿದವನು ಅಪರೂಪವಾಗಿ ಯಾರೋ ಒಬ್ಬನಿರಬಹುದು.

ಅವನನ್ನು ದಾರಿಯಲ್ಲಿರುವ ಮೊದಲನೆ ವ್ಯಕ್ತಿಯಾಗಿ ಹೇಳಿಕೊಳ್ಳಬಹುದು. ಮೊದಲಿನಿಂದ ತಮಗೂ ಜ್ಞಾನ ತಿಳಿದಿದೆಯೆಂದು ಹೇಳಿಕೊಳ್ಳುತ್ತಾ ಗುರುಗಳಾಗಿ, ಸ್ವಾಮಿಗಳಾಗಿ, ಆಧ್ಯಾತ್ಮಿಕ ತಜ್ಞರಾಗಿ ಚಲಾವಣೆಯಾದವರಿಗೆ ದೇವರ ಮಾರ್ಗದಲ್ಲಿ ಸ್ವಲ್ಪ ತಿಳಿದಿರುವುದರಿಂದ ಕೊನೆಗೆ ತಮ್ಮ ಜ್ಞಾನ ತಪ್ಪೆಂದು, ಸತ್ಯಾನ್ವೇಷಿ ಹೇಳಿರುವ ಜ್ಞಾನವೇ ನಿಜವೆಂದು ತಿಳಿದು, ಮೇಲ್ನೋಟಕ್ಕೆ ಒಪ್ಪಿಕೊಂಡರೆ ಪ್ರಜೆಗಳಲ್ಲಿ ಇಲ್ಲಿಯವರೆಗಿದ್ದ ಗೌರವ ಕಡಿಮೆಯಾಗುತ್ತದೆ ಎಂದು, ಮೊದಲಿನಿಂದ ತಾವು ಹೇಳುತ್ತಿರುವುದೇ ಹೇಳುತ್ತಾರೆ. ತಮ್ಮಲ್ಲಿನ ತಪ್ಪು ಹೊರಬೀಳದಂತೆ, ತಾವು ಹೊರಬೀಳದಂತೆ ತಿಳಿದು ಸಹ ಅಸತ್ಯ ವಚನಗಳಾಡುತ್ತಾರೆ. ಇಂತಹವರು ದಾರಿಯಲ್ಲಿನ ಎರಡನೆ ವಿಧದವರು. ಸತ್ಯವನ್ನು ಯಾವ ಕಾರಣಕ್ಕೂ ಎಂದಿಗೂ ಗ್ರಹಿಸಲಾರದೆ ತಮಗಿರುವ ಸ್ವಲ್ಪ ಮಟ್ಟಿನ ಜ್ಞಾನವೇ ಮಹತ್ವವಾದುದೆಂದುಕೊಂಡು, ತಾವು ಮಾಡುವ ಆಚರಣೆಯೇ ಸರಿಯಾದುದೆಂದುಕೊಂಡು, ಯಾರೇನೇ ಹೇಳಿದರೂ ಕೇಳದವರಿದ್ದಾರೆ. ಇಂತಹವರನ್ನು ದಾರಿಯಲ್ಲಿನ ಮೂರನೆಯ ವಿಧದವರಾಗಿ ಲೆಕ್ಕಿಸಬಹುದು.

ದಾರಿಯಲ್ಲಿ ಬರುವವರು ವೇಷಭೂಷಣದಲ್ಲಿ ಸ್ತ್ರೀಯರೇ ಆದರೂ ಅವರ ಭೌತಿಕ ಶರೀರದಲ್ಲಿ ವ್ಯತ್ಯಾಸವಿದೆ. ಇಬ್ಬರಲ್ಲಿ ಒಬ್ಬರು ಸ್ತ್ರೀಯಾಗಿದ್ದು ಎರಡನೆಯವರು ನಪುಂಸಕನು. ನಪುಂಸಕನ ಶರೀರ ಪುರುಷಾಂಗವನ್ನು ಹೊಂದಿರುವುದರಿಂದ ನಪುಂಸಕನನ್ನು ಸ್ತ್ರೀ ಎನ್ನಲಾರೆವು. ಮೇಲ್ನೋಟಕ್ಕೆ ಕಾಣಿಸುವ ಎಲ್ಲಾ ವಿಧಗಳಲ್ಲಿ ಸ್ತ್ರೀಯಂತೆ ಇದ್ದರು ಒಳಗೆ ಮಾತ್ರ ಶರೀರ ಬೇರೆಯಾಗಿದೆ. ಮೊದಲು ದೂರದಿಂದ ನೋಡಿದಾಗ ಗುರುತಿಸಲಾರದೆ ಸ್ತ್ರೀಯರೆಂದುಕೊಂಡರೂ ಫರವಾಗಿಲ್ಲ ಆದರೆ, ಹತ್ತಿರಕ್ಕೆ ಬಂದ ನಂತರವೂ ಸಹ ಗುರುತಿಸದವರನ್ನು ತಿಳುವಳಿಕೆ ಇಲ್ಲದವರೆಂದು ಹೇಳಬಹುದು. ಅಷ್ಟೇ ಅಲ್ಲದೆ ಬಟ್ಟೆ ಬಿಚ್ಚಿ ನೋಡಿದರೂ ಸ್ತ್ರೀ ಪುರುಷರ ವ್ಯತ್ಯಾಸವನ್ನು ಗುರುತಿಸ ದವರನ್ನು ಬಹಳ ಮೂರ್ಖರೆಂದು ಹೇಳಬಹುದು. ದಾರಿಯಲ್ಲಿ ಬರುವ ಸ್ತ್ರೀಯರು ಕಾಣಿಸಿದಂತೆ, ಭೂಮಿಯ ಮೇಲೆ ಮೇಲ್ನೋಟಕ್ಕೆ ಕಾಣಿಸುವ

ಆಕಾರದಲ್ಲಿ ಒಂದೇ ಹೋಲಿಕೆ ಹೊಂದಿರುವ ಎರಡು ಬಗೆಯ ವ್ಯತ್ಯಾಸಗಳಿರುವ ಪುಸ್ತಕಗಳಿವೆ. ಅವುಗಳನ್ನು ನೋಡುವವರು ಸಹ ಮೂರು ವಿಧದವರಿದ್ದಾರೆ. ಪುಸ್ತಕಗಳು ಒಂದೇ ಆಕಾರಗಳಿದ್ದರೂ ಅವುಗಳೊಳಗೆ ವ್ಯತ್ಯಾಸಗಳಿವೆ ಎಂದು ಹೇಳುವ ಮೊದಲನೆಯ ವಿಧದವರು ಇದ್ದಾರೆ. ಹಾಗೆಯೇ ಆ ವ್ಯತ್ಯಾಸವನ್ನು ಮೊದಲು ಗುರುತಿಸದೆ ಹೋದರೂ ನಂತರ ಗುರುತಿಸಿ, ಆ ವಿಷಯವನ್ನು ಹೊರಗೆ ಒಪ್ಪಿಕೊಳ್ಳದೇ ಮೊದಲಿನಿಂದ ಹೇಳುವ ಮಾತನ್ನೇ ಹೇಳುವ ಎರಡನೇ ವಿಧದವರು ಇದ್ದಾರೆ. ಪುಸ್ತಕಗಳೆಲ್ಲ ಒಂದೇ ವಿಧವಾಗಿವೆ! ಎಂದು ಅವುಗಳ ವ್ಯತ್ಯಾಸವನ್ನು ಯಾವಕಾರಣಕ್ಕೂ ಒಪ್ಪಿಕೊಳ್ಳದ ಮೂರನೆ ವಿಧದ ಜನರೂ ಸಹ ಇದ್ದಾರೆ.

ಭೂಮಿ ಮೇಲೆ ಪುಸ್ತಕಗಳೆಲ್ಲ ಒಂದೇ ಆಕಾರ ಹೊಂದಿದ್ದರೂ ಅವುಗಳಲ್ಲಿನ ವಿಷಯಗಳನ್ನನುಸರಿಸಿ ಪುರಾಣಗಳು, ಶಾಸ್ತ್ರಗಳೆಂದು ಎರಡು ವಿಧಗಳಾಗಿ ವಿಭಜಿಸಬಹುದು. ನೋಡುವುದಕ್ಕೆ ಎಲ್ಲಾ ಪುಸ್ತಕಗಳೇ ಆದರೂ, ಅವುಗಳಲ್ಲಿನ ವಿಷಯಗಳನ್ನನುಸರಿಸಿ ಪುರಾಣಗಳೆಂದು, ಶಾಸ್ತ್ರಗಳೆಂದು ವಿಭಜಿಸಿಕೊಂಡು ಗುರುತಿಸುವ ಮೊದಲ ವಿಧದ ಮನುಷ್ಯರಿದ್ದಾರೆ. ಮೊದಲು ಎಲ್ಲಾ ಪುಸ್ತಕಗಳೇ ಅಲ್ಲವೆ! ಅದು ಶಾಸ್ತ್ರವಾದರೆ ಇದು ಏಕೆ ಶಾಸ್ತ್ರವಲ್ಲವೆಂದು ವಾದಿಸುತ್ತಾ, ಕೊನೆಗೆ ಅವುಗಳ ವ್ಯತ್ಯಾಸವನ್ನು ಗಮನಿಸಿ ಹೊರಬೀಳದೆ, ಹಿಂದಿನ ಮಾತನ್ನೇ ಮಾತನಾಡುವ ಎರಡನೆ ವಿಧದವರಿದ್ದಾರೆ. ಹಾಗೆಯೇ ಅವುಗಳ ವ್ಯತ್ಯಾಸವನ್ನು ಕಂಡುಕೊಳ್ಳದೆ ಎಲ್ಲಾ ಒಂದೇ ಅಲ್ಲವೆ! ಎಂದು ಮೂರ್ಖತ್ವದಿಂದ ವಾದಿಸುವ ಮೂರನೇ ವಿಧದವರೂ ಇದ್ದಾರೆ.

ಪುರಾಣಗಳಲ್ಲಿನ ವಿಷಯಗಳು ಬೇರೆ ಎಂದು, ಶಾಸ್ತ್ರಗಳಲ್ಲಿನ ವಿಷಯಗಳು ಬೇರೆ ಎಂದು ತೀರ್ಮಾನಿಸಿ ಹೇಳುವವರಿದ್ದರೂ, ಅವುಗಳ ವ್ಯತ್ಯಾಸವನ್ನು ವಿವರಿಸುತ್ತಿದ್ದರೂ, ಮೊದಲು ಅಲ್ಲವೆಂದು ಕೆಲವು ದಿನಗಳಿಗೆ ತಮ್ಮ ಮನಸ್ಸಿನಲ್ಲಿ ಸತ್ಯವನ್ನು ಗ್ರಹಿಸಿದವರು ಪುರಾಣಗಳನ್ನು ಬಿಡಲಾರದೆ ಮೇಲ್ನೋಟಕ್ಕೆ ಎಲ್ಲಾ ಒಂದೇ ದಾರಿ ತೋರಿಸುತ್ತಿವೆ, ಏನೂ ವ್ಯತ್ಯಾಸ ಇಲ್ಲವೆಂದು

ಹೇಳಿಕೊಳ್ಳುವವರಿದ್ದಾರೆ. ಪುರಾಣಗಳನ್ನು ಬೋಧಿಸುತ್ತಾ ಪುರಾಣಗಳಲ್ಲಿ ಬಹಳ ಹೆಸರುವಾಸಿ ಆದವರು, ಪುರಾಣಗಳು ಕಾಲಕ್ಷೇಪಕ್ಕೇ ಹೊರತು **ಕರ್ಮ ಕ್ಷೇಪಕ್ಕೆ ಕೆಲಸಕ್ಕೆ** ಬರುವುದಿಲ್ಲವೆಂದು, ಕೊನೆಗೆ ತಿಳಿದೂ ಸಹ ಮಧ್ಯದಲ್ಲಿ ಪುರಾಣಗಳ ಬಗ್ಗೆ ಕೇವಲವಾಗಿ ಹೇಳಿದರೆ, ಇಲ್ಲಿಯವರೆಗೂ ಉತ್ತಮವಾದವುಗಳೆಂದು ಹೇಳಿದ ತಮಗೆ ಬೆಲೆ ಇರುವುದಿಲ್ಲವೆಂದು, ಹೊರಗಡೆ ಅವುಗಳನ್ನು ದೊಡ್ಡದಾಗಿಯೇ ಹೇಳುತ್ತಾರೆ. ಸ್ವಲ್ಪ ಮನಸ್ಸಿನಲ್ಲಿ ಪುರಾಣಗಳಿಗಿಂತ ಶಾಸ್ತ್ರಗಳು ದೊಡ್ಡವೆಂದು ತೋಚುತ್ತಿದ್ದರೂ, ತಮ್ಮ ಹೊರಗಿನ ಗೌರವಕ್ಕಾಗಿ ಪುರಾಣಗಳನ್ನು ಬಿಡದವರು ಬಹಳ ಜನರಿದ್ದಾರೆ. ಮನುಷ್ಯರನ್ನು ಇಷ್ಟೊಂದು ತೊಂದರೆ ಯಲ್ಲಿಡುವ ಪುರಾಣಗಳನ್ನು, ಶಾಸ್ತ್ರಗಳನ್ನು ಕುರಿತು ತಿಳಿದುಕೊಳ್ಳೋಣ.

ಒಂದು ವಿಷಯವನ್ನು ಕುರಿತು ಹೇಳುವಾಗ ಬಾಯಿಂದ ಹೇಳಿದರೆ ಆ ಮಾತು ಆ ಸಮಯದಲ್ಲಿಯೇ, ಆ ಪ್ರಾಂತದಲ್ಲಿಯೇ ಕೇಳಿಸುತ್ತದೆ. ಹಾಗೆ ಅಲ್ಲದೇ ಹೇಳಿದ ವಿಷಯ ಎಂದಿಗೂ ಎಲ್ಲ ಪ್ರಾಂತಗಳಲ್ಲಿಯೂ ತಿಳಿಯಬೇಕೆಂದರೆ ಅದು ಗ್ರಂಥರೂಪವಾಗಬೇಕು. ಪುಸ್ತಕ ರೂಪವಾದ ವಿಷಯ ಪುಸ್ತಕ ಇರುವವರೆಗೂ ಇರುತ್ತದೆ. ಅಂತಹ ಪುಸ್ತಕಗಳಲ್ಲಿ ಎರಡು ವಿಧಗಳು ಇವೆ. ಅವುಗಳೇ ಪುರಾಣಗಳು ಮತ್ತು ಶಾಸ್ತ್ರಗಳು. ನಡೆಯಬೇಕಾದ ಕಾಲದಲ್ಲಿ ಮಾನವನು ಈ ವಿಧವಾಗಿ ನಡೆಯಬೇಕೆಂದು ಸಮಾಚಾರವನ್ನು ತಿಳಿಸುವ ಸಲುವಾಗಿ, ಬರೆಯಲ್ಪಟ್ಟ ಪುಸ್ತಕಗಳು ಕಲ್ಪಿತಗಳಿಂದ ಕೂಡಿಕೊಂಡಿರುವವು ಕೆಲವಾದರೆ, ಯಾವುದೇ ಕಲ್ಪಿತಗಳು ಇಲ್ಲದಿರುವವು ಕೆಲವು ಇವೆ. ಕಲ್ಪಿತಗಳಿಂದ ಕೂಡಿಕೊಂಡಿರುವವೇ ಪುರಾಣಗಳು. ಮಾನವನನ್ನು ಒಳ್ಳೆಯ ಮಾರ್ಗದಲ್ಲಿ ನಡೆಸಬೇಕೆಂಬುವುದು ಪುರಾಣಗಳಲ್ಲಿರುವ ಉದ್ದೇಶ ಒಳ್ಳೆಯದೇ, ಆದರೆ ತಿಳಿಸಿದ ವಿಷಯ ಕಲ್ಪಿತಗಳಿಂದ ಕೂಡಿಕೊಂಡಿರುವುದರಿಂದ ಹೇತುವಾದಿಗಳ ವಿಮರ್ಶೆಗಳಿಗೆ ನಿಲ್ಲಲಾರದೆ ಹೋಗುತ್ತಿವೆ. ವಿಮರ್ಶೆಗಳಿಗೆ ಉತ್ತರ ಕೊಡುವ ಸಾಮರ್ಥ್ಯ ಪುರಾಣಗಳಲಿಲ್ಲ. ವಾಸ್ತವ ಜ್ಞಾನ ಪುರಾಣಗಳಲ್ಲಿ ಇಲ್ಲದಿರುವುದರಿಂದ ಮಾನವನ ಕರ್ಮವನ್ನು ತೊಲಗಿಸುವ ಸಾಮರ್ಥ್ಯ ಅವುಗಳಲ್ಲಿ ಇಲ್ಲದಂತೆ

ಹೋಗಿದೆ. ಆದ್ದರಿಂದ ಅವುಗಳನ್ನು ತಿಳಿಯುವುದರಿಂದ ಕಾಲಕ್ಷೇಪವೇಹೊರತು ಕರ್ಮಕ್ಷೇಪ ಇಲ್ಲವೆಂದು, ಪೂರ್ವದಿಂದ ಅವುಗಳಿಗೆ ಗುರುತಿಗಾಗಿ ಒಂದು ಹೆಸರು ಇಟ್ಟಿದ್ದಾರೆ, ಅದನ್ನೇ ಪುರಾಣ ಕಾಲಕ್ಷೇಪ ಎಂದಿದ್ದಾರೆ. ಪುರಾಣ ಕಾಲಕ್ಷೇಪವೆಂಬ ಮಾತಿನಿಂದ ಅವುಗಳಿಂದ ಕಾಲ ವ್ಯರ್ಥ ಆಗುತ್ತದೆಂದು ಅರ್ಥ. ಹೊಸ ವಿಷಯಗಳನ್ನು ತಿಳಿಸುವುದರಲ್ಲಿ ಮಾನವನನ್ನೂ ಒಳ್ಳೆಯ ಮಾರ್ಗದಲ್ಲಿ ನಡೆಸುವುದಕ್ಕೆ ಉದ್ದೇಶಿಸಿದ ಪುರಾಣಗಳ ಪ್ರಯೋಗ ಮಾನವನನ್ನು ಪೂರ್ತಿ ಕರ್ಮವಿಮುಕ್ತನನ್ನಾಗಿ ಮಾಡಲಾರದೆ ಹೋಗಿವೆ. ಪುರಾಣಗಳಿಗೆ ಪೂರ್ತಿಯಾಗಿ ಅಂಟಿಕೊಂಡು ಹೋಗಿರುವವರಿಗೆ ಈ ವಿಷಯ ಸ್ವಲ್ಪ ದುಃಖವನ್ನುಂಟು ಮಾಡುವುದಾದರೂ ಅವರನ್ನು ಮಾತ್ರ ಪುರಾಣಗಳು ಮುಕ್ತರನ್ನಾಗಿ ಮಾಡಲಾರವು. **ಪುರಾಣಗಳಿಗೆ ಪೂರ್ವದಿಂದ ಪುಕ್ಕಡಿ ಪುರಾಣಗಳೆಂದು ಹೆಸರೂ ಸಹ ಇದೆ.** ನಿಜವಾದ ವಿಷಯಗಳು ಹೊಕ್ಕಳ ಹತ್ತಿರದಿಂದ ಬರುತ್ತವೆಂದು, ಕಲ್ಪಿತಗಳು, ಅಸತ್ಯಗಳು ಬಾಯಿ ಪುಕ್ಕಡಿಯಿಂದ ಬರುತ್ತವೆಂದು ಕೆಲವರ ಉದ್ದೇಶ. ನಾವು ಚಿಕ್ಕಂದಿನಲ್ಲಿ ಪಾಠಶಾಲೆಯಲ್ಲಿ ಇರುವಾಗ ನಿನ್ನೆಯ ದಿನ ಏಕೆ ಬರಲಿಲ್ಲ ಎಂದು ನಮ್ಮ ಮೇಷ್ಟ್ರು ಒಬ್ಬ ಹುಡುಗನನ್ನು ಕೇಳಿದಾಗ, ಆ ಹುಡುಗನು ನಿನ್ನೆಯ ದಿನ ನನಗೆ ತಲೆನೋವು ಇತ್ತು, ಅದಕ್ಕೆ ಬರಲಿಲ್ಲ ಎಂದನು. ಆ ಮಾತು ಕೇಳಿದ ಮೇಷ್ಟ್ರು "ನೀನು ಹೇಳುವ ಮಾತು ಹೊಕ್ಕಳ ಹತ್ತಿರದಿಂದ ಬರುತ್ತಿದೆಯಾ ಅಥವಾ ಪುಕ್ಕಟೆಯಿಂದ ಬರುತ್ತಿದೆಯಾ ಎಂದು ಕೇಳಿದನು." ಆ ಮಾತಿನಲ್ಲಿನ ಅರ್ಥ ನೀನು ಹೇಳಿದ ಮಾತು ನಿಜವಾ ಅಥವಾ ಸುಳ್ಳಾ ಎಂದು ಕೇಳುವುದು. ಇದರ ಪ್ರಕಾರವೇ ಪುಕ್ಕಡಿ ಪುರಾಣಗಳೆನ್ನುವುದರಲ್ಲಿ ಅಸತ್ಯದ ಪುರಾಣಗಳೆಂದು ಅರ್ಥವಾಗುತ್ತಿದೆ.

ಪುರಾಣಗಳು ಪುಕ್ಕಡಿಯಿಂದ ಬರುವವಾದರೆ, ಹೊಕ್ಕಳ ಹತ್ತಿರದಿಂದ ಬಂದಿರುವವು ಶಾಸ್ತ್ರಗಳೆಂದು ಹೇಳಬಹುದು. ಶಾಸ್ತ್ರಗಳೆಂದರೇ ಶಾಸನಗಳಿಂದ ಕೂಡಿಕೊಂಡಿರುವವೆಂದು ಹೇಳಬಹುದು. **"ಶಾಪ" ಎನ್ನುವ ಪದದಿಂದ ಹುಟ್ಟಿರುವುದು "ಶಾಸನ". ಶಾಸನ ಎಂದರೂ, ಶಾಪ ಎಂದರೂ ತಪ್ಪದೇ**

ನಡೆಯುವುದೆಂದು ಅರ್ಥ ಶಾಸನಗಳಿಂದ ಕೂಡಿಕೊಂಡಿರುವುದು ಶಾಸ್ತ್ರ. ಶಾಸ್ತ್ರಗಳಲ್ಲಿನ ಪ್ರತಿಯೊಂದು ವಿಷಯ ಸತ್ಯದಿಂದ ಕೂಡಿಕೊಂಡಿರುತ್ತದೆ. ಒಂದು ಬಾರಿ ಹೇಳಲ್ಪಟ್ಟ ಶಾಸ್ತ್ರ ವಿಷಯ ಎಂದಿಗೂ ಅಸತ್ಯ ಆಗುವುದಿಲ್ಲ. ಉದಾಹರಣೆಗೆ ಎಲ್ಲರಿಗೂ ತಿಳಿದ ಗಣಿತ ಶಾಸ್ತ್ರವನ್ನು ತೆಗೆದುಕೊಳ್ಳೋಣ. ಅದರಲ್ಲಿ 5x4=20 ಎನ್ನುವುದು ಶಾಸನ. ಇದು ಒಂದು ಬಾರಿ ಹೇಳಲ್ಪಟ್ಟಿರುವುದಾದರೂ ಚಿರಕಾಲ ಇರುವುದು. ಎಂದಿಗಾದರೂ ಎಲ್ಲಿಯಾದರೂ ನಡೆದುತೀರುವುದೇ ಶಾಸನ ಅಥವಾ ಶಾಸ್ತ್ರ ಎನ್ನುವಂತೆ, 5x4=20 ಎಂಬ ಮಾತು ಎಂದಿಗೂ ಬದಲಾವಣೆ ಯಾಗುವುದಿಲ್ಲ. ಈ ವಿಧವಾಗಿ ಇರುವವು ಶಾಸ್ತ್ರಗಳೆಂದು ತಿಳಿದುಕೊಂಡಿದ್ದೇವೆ. ಪುರಾಣಗಳು ಒಂದು ವಿಧವಾದ ಗ್ರಂಥಗಳು ಆಗಿದ್ದು, ಶಾಸ್ತ್ರಗಳು ಮತ್ತೊಂದು ವಿಧವಾದ ಗ್ರಂಥಗಳು. ಪ್ರಯಾಣ ಒಂದೇಯಾದರೂ ಪೂರ್ವ ಪಶ್ಚಿಮ ದಿಕ್ಕುಗಳು ಬೇರೆಯಾದಂತೆ, ಉದ್ದೇಶ ಒಂದೇಯಾದರೂ ಪುರಾಣಗಳು ಬೇರೆ, ಶಾಸ್ತ್ರಗಳು ಬೇರೆ. ಪೂರ್ವ, ಪಶ್ಚಿಮಕ್ಕೆ ಇರುವಷ್ಟು ವ್ಯತ್ಯಾಸ ಪುರಾಣಗಳಿಗೂ ಶಾಸ್ತ್ರಗಳಿಗೂ ಇದೆ. ಅವುಗಳ ವ್ಯತ್ಯಾಸವನ್ನು ಗ್ರಹಿಸಲಾರದೆ ಎಲ್ಲಾ ಪುಸ್ತಕಗಳೇ ಅಲ್ಲವೇ ಎಂದರೆ ಸ್ತ್ರೀಗೂ, ನಪುಂಸಕನಿಗೂ ವ್ಯತ್ಯಾಸ ತಿಳಿಯದಂತಾಗುತ್ತದೆ. ಆದ್ದರಿಂದ ಯಾವ ಪುಸ್ತಕ ಯಾವ ಗುಂಪಿಗೆ ಸೇರಿರುವುದೊ, ಶಾಸ್ತ್ರ ಯಾವುದೊ, ಪುರಾಣ ಯಾವುದೊ, ಅವುಗಳಿಗಿರುವ ವ್ಯತ್ಯಾಸವೇನೋ ತಿಳಿಯಬೇಕಾದ ಅವಶ್ಯಕತೆ ಬಹಳ ಮುಖ್ಯ. ಹಾಗಾಗದಿದ್ದರೆ ಕಾಲಿನ ಮೇಲೆ ಹಾಕಿಕೊಳ್ಳಬೇಕಾದ ಧೂಳನ್ನು ನೆತ್ತಿ ಮೇಲೆ, ನೆತ್ತಿ ಮೇಲೆ ಹಾಕಿಕೊಳ್ಳಬೇಕಾದ ನೀರನ್ನು ಕಾಲಿನ ಮೇಲೆ ಹಾಕಿಕೊಂಡಂತೆ ಇರುತ್ತದೆ. ಕಾಲಿಗೆ ಧೂಳಾದಾಗ ತಲೆ ಮೇಲೆ ನೀರು ಹಾಕಿಕೊಂಡರೆ ಶರೀರವೆಲ್ಲಾ ಒದ್ದೆಯಾಗಿ ಶುಭ್ರವಾಗುವುದಲ್ಲದೆ, ಕಾಲಿಗಿರುವ ಧೂಳು ಸಹ ನೀರಿನಲ್ಲಿ ಕೊಚ್ಚಿಕೊಂಡು ಹೋಗಿ ಕಾಲು ಸಹ ಶುಭ್ರವಾಗುತ್ತವೆ. ಹಾಗಲ್ಲದೆ ಕಾಲಿನ ಮೇಲೆ ನೀರು ಹಾಕಿಕೊಂಡು ತಲೆ ಮೇಲೆ ದೂಳು ಹಾಕಿಕೊಂಡರೆ ಅಲ್ಲಿಯವರೆಗೂ ಶುಭ್ರವಾಗಿರುವ ಶರೀರವೆಲ್ಲ ಅಶುಭ್ರವಾಗಿ ಬದಲಾಗುತ್ತದೆ. ಆ ವಿಧವಾಗಿಯೇ ಪುರಾಣಗಳು ಯಾವ ಗ್ರಹಿಕೆ ಇಲ್ಲದವರಿಗೆ ಪ್ರಾಥಮಿಕವಾಗಿ ತಿಳಿದುಕೊಳ್ಳುವುದಕ್ಕೆಂದು, ಸ್ವಲ್ಪ ಗ್ರಹಿಕೆ ಶಕ್ತಿ ಇರುವವರಿಗೆ

ಶಾಸ್ತ್ರಗಳ ಅವಶ್ಯಕತೆ ಇದೆಯೆಂದು ತಿಳಿಯಬೇಕು. ಹಾಗಲ್ಲದೆ ಗ್ರಹಿಕೆ ಇರುವವರು ಪುರಾಣಗಳು ಓದಿದರೂ, ಗ್ರಹಿಕೆ ಇಲ್ಲದವರು ಶಾಸ್ತ್ರಗಳು ಓದಿದರೂ ಸ್ವಲ್ಪವೂ ಅವರಿಗೆ ರುಚಿಸುವುದಿಲ್ಲ. ಈ ಕಾರಣದಿಂದಲೇ ಕೆಲವರು ಪುರಾಣಗಳನ್ನು ಅರ್ಥ ಮಾಡಿಕೊಂಡಂತೆ, ಶಾಸ್ತ್ರಗಳನ್ನು ಅರ್ಥಮಾಡಿಕೊಳ್ಳದೆ ಹೋಗುತ್ತಿದ್ದಾರೆ. ಮತ್ತೆ ಕೆಲವರು ಶಾಸ್ತ್ರಗಳನ್ನು ತಿಳಿದು ಪುರಾಣಗಳ ಸಹವಾಸಕ್ಕೆ ಹೋಗದಂತೆ ಇದ್ದಾರೆ.

ಈಗ ನಾವು ನೋಡುವ ಭಗವದ್ಗೀತೆ ನೂರಕ್ಕೆ ನೂರಪಾಲು ಶಾಸ್ತ್ರವಾದ್ದರಿಂದ ಪುರಾಣಗಳೊಂದಿಗೆ ಇದನ್ನು ಸೇರಿಸಬಾರದೆಂದು ಮೊದಲೇ ತಿಳಿಸುತ್ತಿದ್ದೇವೆ. ಇಲ್ಲಿ ಮುಖ್ಯವಾಗಿ ನಾವು ತಿಳಿಸಬೇಕಾದ ವಿಷಯ, ನೀವು ಕೇಳಬೇಕಾದ ವಿಷಯ ಮತ್ತೊಂದು ಇದೆ. ಅದೇನೆಂದರೆ! ಒಟ್ಟು ಪುರಾಣಗಳು ಅಷ್ಟಾದಶ ಪುರಾಣಗಳೆಂದು 18 ಇವೆ. ಅವು ಕ್ರಮವಾಗಿ 1) ಬ್ರಹ್ಮ ಪುರಾಣ 2) ಪದ್ಮ ಪುರಾಣ 3) ವಿಷ್ಣು ಪುರಾಣ 4) ಶಿವ ಪುರಾಣ 5) ಭಾಗವತ 6) ನಾರದ ಪುರಾಣ 7) ಮಾರ್ಕಂಡೇಯ ಪುರಾಣ 8) ಅಗ್ನಿ ಪುರಾಣ 9) ಭವಿಷ್ಯತ್ ಪುರಾಣ 10) ಬ್ರಹ್ಮಕೈವರ್ತನ ಪುರಾಣ. 11) ಲಿಂಗ ಪುರಾಣ 12) ವರಾಹ ಪುರಾಣ 13) ಸ್ಕಂಧ ಪುರಾಣ 14) ವಾಮನ ಪುರಾಣ 15) ಕೂರ್ಮ ಪುರಾಣ 16) ಮತ್ಸ್ಯ ಪುರಾಣ 17) ಗರುಡ ಪುರಾಣ 18) ಬ್ರಹ್ಮಾಂಡ ಪುರಾಣ.

ಈ ಹದಿನೆಂಟು ಪುರಾಣಗಳು ಪೂರ್ವದಿಂದ ಹೆಸರುವಾಸಿಯಾಗಿವೆ. ಶಾಸ್ತ್ರಗಳು, ಪುರಾಣಗಳಲ್ಲಿ ಮೂರನೆ ಭಾಗ ಮಾತ್ರ ಇವೆ. ಪುರಾಣಗಳು 18 ಆಗಿದ್ದು ಶಾಸ್ತ್ರಗಳು ಕೇವಲ 6 ಮಾತ್ರ. ಶಾಸ್ತ್ರಗಳಿಗಿಂತ ಪುರಾಣಗಳು ಸಂಖ್ಯೆಯಲ್ಲಿ ಮೂರರಷ್ಟು ದೊಡ್ಡವಾದರೂ ಬೆಲೆಯಲ್ಲಿ ಕಲ್ಲಿಗೂ ರತ್ನಕ್ಕೂ ಇರುವಷ್ಟು ವ್ಯತ್ಯಾಸ ಪುರಾಣಗಳಿಗೂ, ಶಾಸ್ತ್ರಗಳಿಗೂ ಇದೆ. 18 ಪುರಾಣಗಳಿಗೆ ಇಲ್ಲದ ಬೆಲೆ 6 ಶಾಸ್ತ್ರಗಳಿಗಿರುವುದರಿಂದ ಆ ವಿಷಯ ಪೂರ್ವದಲ್ಲಿ ಕೆಲವರಿಗೆ ಜೀರ್ಣಿಸಿಕೊಳ್ಳದಂತಾಯಿತು. ಪೂರ್ವದಲ್ಲಿ ಪುರಾಣಪ್ರಿಯರು ಹೆಚ್ಚಾಗಿ, ಶಾಸ್ತ್ರಪ್ರಿಯರು

ಕಡಿಮೆಯಾದಾಗ, ಅದೇ ಸಮಯದಲ್ಲಿ ಪುರಾಣಗಳಿಗೆ ಬೆಲೆಯನ್ನುಂಟು ಮಾಡಲು, ಶಾಸ್ತ್ರಗಳಿಗೆ ಬೆಲೆ ಇಲ್ಲದಂತೆ ಮಾಡುವುದಕ್ಕೆ, ದೊಡ್ಡ ಕುತಂತ್ರ ನಡೆದಿದೆ. ಶಾಸ್ತ್ರಗಳನ್ನು ಇಲ್ಲದಂತೆ ಮಾಡಿ, ಶಾಸ್ತ್ರಗಳ ಸ್ಥಾನಗಳಲ್ಲಿ ಮತ್ತೊಂದು ಆರು ವಿಧಾನಗಳನ್ನು ಪ್ರವೇಶಮಾಡಿ, ಅವುಗಳೇ ಶಾಸ್ತ್ರಗಳೆಂದು ಪ್ರಚಾರ ಮಾಡಿದ್ದಾರೆ. ಹಾಗೆ ಮೊದಲ ಆರು ಶಾಸ್ತ್ರಗಳು ಶಾಸ್ತ್ರಗಳಾಗಿ ಪ್ರಚಾರವಾಗದೇ, ಶಾಸ್ತ್ರಗಳಲ್ಲದ ಆರು ಶಾಸ್ತ್ರಗಳು ಪ್ರಚಾರವಾಗಿವೆ. ಅವು ಕ್ರಮವಾಗಿ ***1) ಶಿಕ್ಷ 2) ವ್ಯಾಕರಣ 3) ಛಂಧ 4) ನಿರುಕ್ತ 5) ಜ್ಯೋತಿಷ್ಯ 6) ಕಲ್ಪ***. ಈ ಕಾಲದಲ್ಲಿ ಇವು ಎಲ್ಲರಿಗೂ ತಿಳಿಯದಿದ್ದರೂ ವೇದಪರಿಚಯ ಇರುವವರಿಗೆ, ಪುರಾಣಗಳಲ್ಲಿ ಪೂರ್ತಿ ಮುಳುಗಿರುವವರಿಗೆ ಚೆನ್ನಾಗಿ ತಿಳಿಯುತ್ತದೆ. ಶಾಸ್ತ್ರಗಳ ಹೆಸರು ತಗಲಿಸಿಕೊಂಡ ಇವುಗಳಲ್ಲಿ ಉದಾಹರಣೆಯಾಗಿ ಒಂದನ್ನು ವಿವರಿಸಿಕೊಳ್ಳೋಣ.

1) ಶಿಕ್ಷ :– ಇದರಲ್ಲಿ ವೇದ ಶಬ್ಧಗಳೊಂದರ ಅಕ್ಷರಗಳ ಸ್ಥಾನ ಜ್ಞಾನಗಳನ್ನು, ಉದಾತ್ತ, ಅನುದಾತ್ತ, ಸ್ವರಿತ ಸ್ವರಗಳ ಜ್ಞಾನವನ್ನು ಹೇಳಲಾಗಿದೆ. ಉದಾತ್ತ ಎಂದರೆ ಉಚ್ಚ, ಅನುದಾತ್ತ ಎಂದರೆ ನೀಚ, ಸ್ವರಿತ ಎಂದರೆ ಸಮಾನವೆಂದು ತಿಳಿಯಬೇಕು. ಈ ಶಿಕ್ಷಾ ಶಾಸ್ತ್ರವನ್ನು ವ್ಯಾಸ ಶಿಕ್ಷ, ಭರದ್ವಾಜ ಶಿಕ್ಷ, ನಾರದ ಶಿಕ್ಷ ಎಂದು ಮೂರು ವಿಧಗಳಾಗಿ ಹೇಳುತ್ತಿದ್ದಾರೆ. ಇದು ಒಂದನೇ ಶಾಸ್ತ್ರವಾದ ಶಿಕ್ಷದಲ್ಲಿರುವ ಪದ್ಧತಿ, ವೇದಶಬ್ಧಗಳು ಹೀಗೆ ಹೇಳಬೇಕೆಂದು ಒಂದು ಕಡೆ ಜೋರಾಗಿ ಹೇಳುವುದು, ಒಂದು ಕಡೆ ನಿಧಾನವಾಗಿ ಹೇಳುವುದಕ್ಕೆ ಹೇಳಿರುವ ಪದ್ಧತಿಯನ್ನು ಶಾಸ್ತ್ರ ಎಂದಿದ್ದಾರೆ. ಅದು ಒಂದು ಶಾಸನ ರೂಪವಾಗಿದ್ದು ಇದು ನಾರದನ ಪದ್ಧತಿಯೆಂದು, ಇದು ವ್ಯಾಸನ ಪದ್ಧತಿಯೆಂದು, ಇದು ಭರದ್ವಾಜ ಪದ್ಧತಿಯೆಂದು ತಿಳಿಸಿದ್ದಾರೆ. ಅದನ್ನನುಸರಿಸಿ ವ್ಯಾಸನು ಹೇಳಿದಂತೆ ಭರಧ್ವಾಜನು ಹೇಳಲಿಲ್ಲವೆಂದು, ಭರಧ್ವಾಜನು ಹೇಳಿದಂತೆ ನಾರದನು ಹೇಳಲಿಲ್ಲವೆಂದು ತಿಳಿಯುತ್ತಿದೆ. "ಶಾಸ್ತ್ರ ಒಂದೇ ಪದ್ಧತಿ ಹೊಂದಿದ್ದು ಎಂದಿಗೂ ಬದಲಾಗುವುದಿಲ್ಲ" ಎಂಬ ಸೂತ್ರಕ್ಕೆ ಶಿಕ್ಷಾ ಶಾಸ್ತ್ರ ಬೆಲೆ ಇಲ್ಲದಂತೆ ಮಾಡಿದೆ. ಮಧ್ಯದಲ್ಲಿ ಕಲ್ಪಿಸಲಾದ ಇಂತಹ ಶಾಸ್ತ್ರಗಳನ್ನು ಬಿಟ್ಟು ನಿಜವಾದ ಶಾಸ್ತ್ರಗಳು ಯಾವುವು ಎಂದು ತಿಳಿದುಕೊಳ್ಳೋಣ.

ಪುರಾಣಗಳಿಗಿಂತ ಶಾಸ್ತ್ರಗಳು ಎಷ್ಟೋ ಮೊದಲು ಹುಟ್ಟಿವೆ. ಅವು ಕ್ರಮವಾಗಿ ಈ ವಿಧವಾಗಿ ಇವೆ **1) ಗಣಿತ ಶಾಸ್ತ್ರ 2) ಖಗೋಳ ಶಾಸ್ತ್ರ 3)ರಸಾಯನ ಶಾಸ್ತ್ರ 4) ಭೌತ ಶಾಸ್ತ್ರ 5) ಜ್ಯೋತಿಷ್ಯ ಶಾಸ್ತ್ರ 6) ಯೋಗ ಶಾಸ್ತ್ರ.** ಈ ಆರು ಶಾಸ್ತ್ರಗಳು ವಿನಹಾ ಇನ್ಯಾವ ಶಾಸ್ತ್ರಗಳು ಇಲ್ಲ. ಇಲ್ಲಿ ಕೆಲವರೊಂದು ಪ್ರಶ್ನೆ ಕೇಳಬಹುದು. ಅದೇನೆಂದರೆ! ಈ ಆರು ಶಾಸ್ತ್ರಗಳಿಗಿಂತ ಈದಿನ ಬಹಳ ಪ್ರಚಾರದಲ್ಲಿರುವುದು ವಾಸ್ತುಶಾಸ್ತ್ರ. ಮನೆ ಕಟ್ಟಿಸಿಕೊಳ್ಳುವವರೆಲ್ಲ ವಾಸ್ತುಶಾಸ್ತ್ರದ ಪ್ರಕಾರ ಕಟ್ಟಿಸಿಕೊಳ್ಳುತ್ತಿದ್ದಾರೆ. ಅದು ನಿಮ್ಮ ಲೀಸ್ಟಿನಲ್ಲಿ ಇಲ್ಲವೇ ಎಂದು ಕೇಳಬಹುದು. ಅದಕ್ಕೆ ನಮ್ಮ ಉತ್ತರ ಏನೆಂದರೆ! ನಾವು ಹೇಳಿದ ಆರು ಶಾಸ್ತ್ರಗಳು ತಿಳಿದವರು ಬಹಳ ಕಡಿಮೆ ಇದ್ದಾರೆ ಆದರೆ, ವಾಸ್ತುಶಾಸ್ತ್ರಜ್ಞರು ಮಾತ್ರ ಎಲ್ಲಿ ನೋಡಿದರೂ ತಯಾರಾಗಿದ್ದಾರೆ. ಇನ್ನು ಇದರ ವಿಷಯವನ್ನು ಕುರಿತು ಹೇಳಬೇಕೆಂದರೆ ಈಗಿರುವ ವಾಸ್ತುಶಾಸ್ತ್ರ ಎನ್ನುವುದು ಇಲ್ಲವೇ ಇಲ್ಲ. ವಾಸ್ತು ಪ್ರಕಾರ ಮನೆ ಕಟ್ಟಿಕೊಳ್ಳಬೇಕೆನ್ನುವುದು ಮತ್ತಷ್ಟು ವಿಚಿತ್ರವಾದ ಮಾತು. ವಾಸ್ತು ಪ್ರಕಾರ ಇಲ್ಲದ ಮನೆಯಲ್ಲಿ ಕಷ್ಟ, ನಷ್ಟಗಳು ಬರುತ್ತವೆನ್ನುವುದು ಯೋಗಶಾಸ್ತ್ರಕ್ಕೇ ವಿರುದ್ಧವಾದ ಮಾತು. ಮನುಷ್ಯನಿಗೆ ಲಭ್ಯವಾಗುವ ಮನೆ ಅವನು ಹುಟ್ಟಿದಾಗಲೇ ಪ್ರಾರಬ್ಧದಲ್ಲಿ ನಿರ್ಣಯಿಸಲ್ಪಟ್ಟಿರುತ್ತದೆ. ಮಧ್ಯದಲ್ಲಿ ಯಾರೂ ನಿರ್ಣಯಿಸಲಾರರು. ಒಬ್ಬರಿಗೆ ಎಂತಹ ಮನೆ ಜೀವನದಲ್ಲಿ ಸಿಗಬೇಕೆಂಬ ವಿಷಯ ಜ್ಯೋತಿಷ್ಯದಲ್ಲಿರುತ್ತದೆ. ಅಷ್ಟೇ ಹೊರತು ಮನೆಯನ್ನು ಕುರಿತು ಪ್ರತ್ಯೇಕವಾದ ಶಾಸ್ತ್ರ ಇಲ್ಲವೆಂದು ಗುರುತಿಸಬೇಕು.

ಶಾಸ್ತ್ರಗಳು ಆರು, ಪುರಾಣಗಳು ಹದಿನೆಂಟರ ಸಂಖ್ಯೆ ಎಂದಿಗೂ ಬದಲಾಗುವುದಿಲ್ಲ. ಆರು ಶಾಸ್ತ್ರಗಳಲ್ಲಿನ ಗಣಿತಶಾಸ್ತ್ರದೊಂದಿಗೆ ಜ್ಯೋತಿಷ್ಯಶಾಸ್ತ್ರ ಮುಡಿಹಾಕಲ್ಪಟ್ಟಿದೆ. ಆದ್ದರಿಂದ ಗಣಿತವಿಲ್ಲದೆ ಜ್ಯೋತಿಷ್ಯ ಇರುವುದಿಲ್ಲ. ಹಾಗೆಯೇ ಜ್ಯೋತಿಷ್ಯಶಾಸ್ತ್ರದೊಂದಿಗೆ ಖಗೋಳ ಶಾಸ್ತ್ರ ಮುಡಿಹಾಕಲ್ಪಟ್ಟಿದೆ. ಹಾಗೇ ಖಗೋಳ ಶಾಸ್ತ್ರದೊಂದಿಗೆ ರಸಾಯನಿಕ ಶಾಸ್ತ್ರ, ರಸಾಯನಿಕಶಾಸ್ತ್ರದೊಂದಿಗೆ ಭೌತಶಾಸ್ತ್ರ, ಭೌತಶಾಸ್ತ್ರದೊಂದಿಗೆ ಯೋಗಶಾಸ್ತ್ರ ಅನುಸಂಧಾನವಾಗಿವೆ. ಭೌತಿಕ ಎಂದರೆ

ಶರೀರಕ್ಕೆ ಸಂಬಂಧಿಸಿರುವುದು. ಮಾನವನು ಶರೀರ ಧರಿಸಿದ್ದಾನೆ. ಶರೀರದಲ್ಲಿ ಎಷ್ಟೋ ಭಾಗಗಳೊಂದಿಗೆ ನಿವಾಸ ಮಾಡುವ ಜೀವಾತ್ಮ, ಪರಮಾತ್ಮನೊಳಗೆ ಐಕ್ಯವಾಗುವುದಕ್ಕೆ ಯೋಗಶಾಸ್ತ್ರವನ್ನು ತಿಳಿಯಲೇಬೇಕು. ಗಣಿತ, ಜ್ಯೋತಿಷ್ಯ, ಖಗೋಳ, ರಾಸಾಯನಿಕ, ಭೌತ ಎನ್ನುವ ಐದು ಶಾಸ್ತ್ರಗಳು ಮಾನವನ ಮನುಗಡೆಯಲ್ಲಿ ಪ್ರಪಂಚ ಸಂಬಂಧವಾಗಿ ಉಪಯೋಗವಾಗುತ್ತಿವೆ. ಆರನೇ ಶಾಸ್ತ್ರವಾದ ಯೋಗಶಾಸ್ತ್ರ ಮಾತ್ರ ಮಾನವನಿಗೆ ಪ್ರಪಂಚಸಂಬಂಧವಾಗಿ ಅಲ್ಲದೇ ಪರಮಾತ್ಮ ಸಂಬಂಧವಾಗಿ ಉಪಯೋಗವಾಗುತ್ತಿದೆ. ಮಾನವನು ಪ್ರಪಂಚದಲ್ಲಿ ಬದುಕುವುದಕ್ಕೆ ಐದು ಶಾಸ್ತ್ರಗಳು ಬೇಕಾಗಿರುವಾಗ, ಪ್ರಪಂಚವನ್ನು ಬಿಟ್ಟು ಪರಮಾತ್ಮನಲ್ಲಿ ಐಕ್ಯವಾಗುವುದಕ್ಕೆ, ಆರನೆಯ ಶಾಸ್ತ್ರವಾದ ಯೋಗಶಾಸ್ತ್ರ ತಪ್ಪದೆ ಅಗತ್ಯವಾಗಿದೆ. ಮಾನವನಿಗೆ ತಪ್ಪದೆ ಅಗತ್ಯವಾದ ಯೋಗಶಾಸ್ತ್ರ ಎನ್ನುವುದು ಯಾವುದು? ಎಲ್ಲಿ ಇದೆಯೆಂದು ಕೆಲವರು ಕೇಳಬಹುದು. ಎಲ್ಲರಿಗೂ ಅಗತ್ಯವಾದ ಯೋಗಶಾಸ್ತ್ರವನ್ನು ಕುರಿತು, ಅದರ ಬೆಲೆಯನ್ನು ಕುರಿತು ಮೊದಲು ತಿಳಿದುಕೊಳ್ಳುವುದೂ ಸಹ ಮುಖ್ಯ.

ಮಾನವನಿಗೆ ಬಹಳ ಮುಖ್ಯವಾದ ಶಾಸ್ತ್ರ ಯೋಗಶಾಸ್ತ್ರ. ಯೋಗ ಶಾಸ್ತ್ರದಲ್ಲಿ ಮಾನವನ ಕರ್ಮವನ್ನು ರೂಪಬದಲಿಸುವ ವಿಧಾನ ಇದೆ. ಕರ್ಮನಿರ್ಮೂಲನಾ ಸೂತ್ರಗಳನ್ನು ಮಾನವನು ಬೋಧಿಸಲಾರನು, ಆದ್ದರಿಂದ ಸ್ವತಃವಾಗಿ ಪರಮಾತ್ಮನೇ ಈ ಶಾಸ್ತ್ರವನ್ನು ಭಗವಂತನ ರೂಪದಿಂದ ಬೋಧಿಸಿದ್ದಾನೆ. ಭಗವಂತನು ಬೋಧಿಸಿದ ಯೋಗಶಾಸ್ತ್ರ ಮೂರು ಭಾಗಗಳಾಗಿದೆ. ಭೂಮಿ ಮೇಲೆ ಕೆಲವು ದೇಶಗಳಲ್ಲಿ ಯೋಗಶಾಸ್ತ್ರದಲ್ಲಿನ ಒಂದು ಭಾಗವನ್ನು ಭಗವಂತನು ಹೆಚ್ಚಾಗಿ ಬೋಧಿಸಿದ್ದಾನೆ. ಯಾವ ದೇಶದಲ್ಲಿ, ಯಾವ ಭಾಗ ಅಗತ್ಯವೊ, ಯಾವ ಭಾಗವನ್ನು ಅಲ್ಲಿನ ಪ್ರಜೆಗಳು ಅರ್ಥ ಮಾಡಿಕೊಳ್ಳುತ್ತಾರೊ ಆ ಭಾಗವನ್ನೇ ಹೆಚ್ಚಾಗಿ ಬೋಧಿಸಿದ್ದಾನೆ. ಭಾರತ ದೇಶದಲ್ಲಿ ಮಾತ್ರ ಯೋಗಶಾಸ್ತ್ರದಲ್ಲಿನ ಮೂರು ಭಾಗಗಳನ್ನು ಬೋಧಿಸಿದ್ದಾನೆ. ಇಲ್ಲಿ ಮೂರು ಭಾಗಗಳಲ್ಲಿನ ಯಾವ ಭಾಗವನ್ನು ಅನುಸರಿಸಿದರೂ ಮೋಕ್ಷವನ್ನು

ಹೊಂದುವ ಅವಕಾಶವಿದೆ. ಭಾರತದೇಶ ಇಂದೂ ದೇಶ, ಎಂದರೆ ಜ್ಞಾನ ಹೊಂದಿದ ದೇಶ. ಜ್ಞಾನವನ್ನು ಅವಗಾಹನೆ ಮಾಡಿಕೊಳ್ಳುವ ಸಾಮರ್ಥ್ಯ ಇಂದೂಗಳಲ್ಲಿದೆ, ಆದ್ದರಿಂದ ಯೋಗಶಾಸ್ತ್ರವೊಂದರ ಮೂರು ಭಾಗಗಳನ್ನು ಸಂಪೂರ್ಣವಾಗಿ ಬೋಧಿಸಿದ್ದಾರೆ. ಯೋಗಶಾಸ್ತ್ರದಲ್ಲಿನ ಮೂರು ಭಾಗಗಳು ಕ್ರಮವಾಗಿ 1) ಜ್ಞಾನಯೋಗ ಅಥವಾ ಬ್ರಹ್ಮಯೋಗ. 2) ರಾಜಯೋಗ ಅಥವಾ ಕರ್ಮಯೋಗ. 3) ಭಕ್ತಿಯೋಗ ಅಥವಾ ವಿಶ್ವಾಸಯೋಗ ಎನ್ನುವವು ಇವೆ. ಮೂರು ಯೋಗ ಭಾಗಗಳು ಮೂರ್ತಿಭವಿಸಿದ ಯೋಗಶಾಸ್ತ್ರ ಭಾರತದೇಶ ದಲ್ಲಿಯೇ ಹೊರಬೀಳುವುದು ನಮ್ಮ ಅದೃಷ್ಟವೆಂದು ಹೇಳಬಹುದು. ಮೂರು ಯೋಗಭಾಗಗಳಲ್ಲಿ ಸ್ವತಃವಾಗಿ ಪರಮಾತ್ಮ ಅಂಶವಾದ ಭಗವಂತನಿಂದ ಹೇಳಲ್ಪಟ್ಟ ಯೋಗಶಾಸ್ತ್ರವೇ **ಭಗವದ್ಗೀತಾ ಗ್ರಂಥ.**

ಸ್ವಚ್ಛವಾದ ಯೋಗಶಾಸ್ತ್ರವಾದ **"ಭಗವದ್ಗೀತೆ"** ಗ್ರಂಥದಲ್ಲಿಯೇ ಉಳಿದ ದೇಶಗಳಲ್ಲಿರುವ ಇತರ ಮತ ಗ್ರಂಥರೂಪದಲ್ಲಿ ಹೇಳಲ್ಪಟ್ಟ ಸಾರಾಂಶವೂ ಸಹ ಇದೆ. ಆದ್ದರಿಂದ ಭಗವದ್ಗೀತೆಯನ್ನು ಯಾವ ಮತಸ್ಥನು ಯಾವ ದೇಶಸ್ಥನು ಖಂಡಿಸಲಾರನು. ಅವರವರ ಮತದಲ್ಲಿನ ಸಾರಾಂಶ ಭಗವದ್ಗೀತೆಯಲ್ಲಿ ಒಂದು ಭಾಗವಾಗಿರುವುದೇ ಇದರ ಪ್ರತ್ಯೇಕತೆ. **ಎಷ್ಟೋ ಉತ್ತಮ ಯೋಗಶಾಸ್ತ್ರವಾದ ಭಗವದ್ಗೀತೆಯಲ್ಲಿಯೂ ಸಹ ಕೆಲವರು ರಚನೆಕಾರರು ಹೇಳಿದ ಭಾವನೆಯಿಂದ ಅದರ ಪ್ರಾಮುಖ್ಯತೆಗೆ ತೆರೆಬೀಳುವ ಅಪಾಯ ಏರ್ಪಟ್ಟಿದೆ.** ಗೀತೆಗೆ ಭಾಷ್ಯವನ್ನು ಹೇಳಿದವರಿಗೆ ಭಗವದ್ಗೀತೆಯಲ್ಲಿನ ಮೂರು ಭಾಗಗಳು ತಿಳಿಯದೆಹೋಗಿರುವುದು, ಅವರಲ್ಲಿ ಪುರಾಣಗಳ ಭಾವನೆಗಳು ಒಳಗೊಂಡಿರು ವುದು ಮತ್ತು ಭಗವದ್ಗೀತೆ ಒಂದು ಶಾಸ್ತ್ರವೆಂಬ ವಿಷಯವೂ ಸಹ ಅವರಿಗೆ ತಿಳಿಯದೆಹೋಗಿರುವುದು, ಮೊದಲಾದ ಕಾರಣಗಳಿಂದ ಗೀತೆಯೊಂದರ ಬೆಲೆ ಭಾರತ ದೇಶದಲ್ಲಿಯೇ ತಿಳಿಯದಂತೆ ಹೋಗಿದೆ. ಆದ್ದರಿಂದ ಇತರ ಮತಸ್ಥರೂ ಸಹ ಗೀತೆಯನ್ನು ಕುರಿತು ಅವಹೇಳನವಾಗಿ ಮಾತನಾಡುವ ಅವಕಾಶವಿದೆ. ಕೆಲವರು ಇಂದೂಗಳೇ ಗೀತೆಯನ್ನು ಸಣ್ಣದೃಷ್ಟಿಯಿಂದ ನೋಡುತ್ತಿದ್ದಾರೆ.

ಇಂದೂಮತಕ್ಕೆ ಮೂಲಗ್ರಂಥ ಭಗವದ್ಗೀತೆ ಎಂದು ತಿಳಿಯದವರು ಬಹಳ ಜನರು ಇಂದೂಮತವನ್ನು ಬಿಟ್ಟು ಖುರಾನ್, ಬೈಬಲ್ ಮೊದಲಾದ ಮೂಲಗ್ರಂಥಗಳಿರುವ ಇತರೆ ಮತಗಳೆಡೆಗೆ ಹೋಗುತ್ತಿದ್ದಾರೆ. ಎಲ್ಲಾ ಮತಗಳ ಸೂತ್ರಗಳು ಭಗವದ್ಗೀತೆಯಲ್ಲಿನ ಭಾಗವಾಗಿರುವಾಗ, ಇಂದೂಮತವನ್ನೇ ಬಿಟ್ಟು ಇತರ ಮತದೊಳಗೆ ಹೋಗುವುದಕ್ಕೆ ಕಾರಣ, ಭಗವದ್ಗೀತೆಯ ಒಂದು ಸಾರಾಂಶವಾಗಲಿ, ಅದರ ಬೆಲೆಯಾಗಲಿ ಯಾರಿಗೂ ತಿಳಿಯದಿರುವುದೇ ಎಂದು ತಿಳಿಯುತ್ತಿದೆ. ಎಷ್ಟೋಜನ ಭಗವದ್ಗೀತೆಯನ್ನು ಅನೇಕ ಭಾಷೆಗಳಲ್ಲಿ ಅನುವಾದಿಸಿರುವಾಗ, **ಇಂದೂಮತದಲ್ಲಿ ಇಲ್ಲಿಯವರೆಗೂ ಸುಮಾರು ಮುನ್ನೂರು ಜನ ಸ್ವಾಮೀಜಿಗಳು ಗೀತೆಗೆ ಭಾಷ್ಯವನ್ನು ಬರೆದಿರುವಾಗ, ಗೀತಾಬೋಧಕರೆಂದು ಕಂಕಣ ಕಟ್ಟಿಕೊಂಡಿರುವವರು ಅನೇಕರಿರುವಾಗ, ಈ ಮತವನ್ನೇ ಬಿಟ್ಟುಹೋಗುವ ಪರಿಸ್ಥಿತಿ ಏಕೆ ಏರ್ಪಟ್ಟಿದೆಯೋ ಎಲ್ಲರೂ ಆಲೋಚಿಸಬೇಕಾದ ಮುಖ್ಯ ವಿಷಯ.** ಈಗಲೂ ಹಳ್ಳಿ ಪ್ರಾಂತಗಳಲ್ಲಿ ಗೀತೆ ಎಂದರೆ ಏನೋ ತಿಳಿಯದವರು ಶೇ. 90 ರಷ್ಟುಭಾಗ ಇದ್ದಾರೆ. ಇವುಗಳಿಗೆಲ್ಲ ಕಾರಣ ಗೀತೆ ಇಲ್ಲಿಯವರೆಗೂ ಸರಿಯಾದ ವಿಧಾನದಲ್ಲಿ ಶಾಸ್ತ್ರಬದ್ಧವಾಗಿ ಬೋಧಿಸಲ್ಪಡದಿರುವುದೇ ಎಂದು ಹೇಳಬಹುದು. ಶಾಸ್ತ್ರವನ್ನು ಶಾಸ್ತ್ರವಾಗಿ ಅಲ್ಲದೆ ಪುರಾಣದಂತೆ ಬೋಧಿಸುವುದರಿಂದಲೂ, ಎಷ್ಟೋ ಪುರಾಣ ವಿಷಯಗಳು ಗೀತೆಯಲ್ಲಿ ಸೇರಿಸಿರುವುದರಿಂದಲೂ, ಮುಖ್ಯವಾಗಿ ಮುಕ್ತಿಗೋಸ್ಕರ ಭಗವದ್ಗೀತೆ ಎಂದು ತಿಳಿಸದೆ, ಭುಕ್ತಿ ಮತ್ತು ಜೀವನ ಸರಳಿಗೋಸ್ಕರ ಎಂದು ಗೀತಾಮಹತ್ವವನ್ನು ಸೇರಿಸುವುದರಿಂದ, ಯೋಗಶಾಸ್ತ್ರವಾದ ಗೀತೆ ಅದರ ಬೆಲೆಯನ್ನು ಕಳೆದುಕೊಂಡಿದೆ ಎಂದು ತಿಳಿಸುತ್ತಿದ್ದೇವೆ. ಭಗವದ್ಗೀತೆ ಧರ್ಮಯುಕ್ತವಾದುದಾದರೆ ಅಧರ್ಮಯುಕ್ತವಾಗಿ ಹೋದಂತೆ ಕಾಣಿಸುತ್ತಿದೆ ಎಂದು ತಿಳಿಸುತ್ತಿದ್ದೇವೆ.

ಭಗವಂತನು ತಿಳಿಸಿದ ಸ್ವಚ್ಚವಾದ, ಶಾಸನಬದ್ಧವಾದ, ಯೋಗಶಾಸ್ತ್ರವಾದ ಭಗವದ್ಗೀತೆ ಇಂತಹ ಸಮಯದಲ್ಲಿ ಪೂರ್ತಿ ಅಗತ್ಯ. ಯಾವ ಮತಸ್ಥರು, ಯಾವ ದೇಶಸ್ಥರು ವಿಮರ್ಶಿಸದಿರುವುದು, ಇದು ನಮ್ಮ ಮತಕ್ಕೆ ಸಂಬಂಧಿ

ಸಿರುವುದೇಯೆಂದು ಇತರರೂ ಸಹ ಹೇಳಿಕೊಳ್ಳುವಂತೆ, ಅರ್ಥ ಭಾವನೆಗಳಿಂದ ಕೂಡಿಕೊಂಡ ಭಗವದ್ಗೀತೆ ನಮಗೆ ಬೇಕು. ಹೇತುವಾದಿಗಳ, ನಾಸ್ತಿಕವಾದಿಗಳ ಸಂಶಯಗಳನ್ನು ತೀರಿಸಿ ಅವರನ್ನೂ ಸಹ ಆಸ್ತಿಕರಿಗಿಂತ ದೊಡ್ಡದಾಗಿ ದೇವರನ್ನು ವಿಶ್ವಾಸಿಸುವಂತೆ ಮಾಡುವ ಭಗವದ್ಗೀತೆ ಎಷ್ಟೋ ಅಗತ್ಯ. ಅಂತಹ ಭಗವದ್ಗೀತೆಯನ್ನು ಗುರುತಿಸಬೇಕೆಂದರೆ ಮೊದಲು ಅದರ ವಿವರ, ಪರಿಚಯ ಸ್ವಲ್ಪವಾದರೂ ತಿಳಿಯಬೇಕು. ಗೀತೆಯನ್ನು ಕುರಿತು ಮೊದಲು ತಿಳಿಯಬೇಕಾದ ವಿವರವೇ, ಈ **"ಗೀತಾ ಪರಿಚಯ"**. ಭಗವದ್ಗೀತೆ ಎಂದರೆ, ಏನೋ ತಿಳಿಯಬೇಕೆಂದರೆ ತಪ್ಪದೆ ಗೀತಾ ಪರಿಚಯ ಓದಬೇಕು. ಗೀತಾ ಪರಿಚಯವನ್ನು ಓದಿದ ನಂತರ ಗೀತೆಯನ್ನು ಸುಲಭವಾಗಿ ಅವಗಾಹನೆ ಮಾಡಿಕೊಳ್ಳಬಹುದು.

ಇಲ್ಲಿಯವರೆಗೂ ಶಾಸ್ತ್ರಗಳನ್ನು, ಪುರಾಣಗಳನ್ನು ಬಿಡಿಸಿ ಹೇಳಿದ ನಾವು ಶಾಸ್ತ್ರಬದ್ಧವಾಗಿ ಭಗವದ್ಗೀತೆಯನ್ನು ಬರೆಯುವುದು ನಡೆದಿದೆ. ಅದೇ **"ತ್ರೈತ ಸಿದ್ಧಾಂತ ಭಗವದ್ಗೀತೆ"**. ತ್ರೈತ ಸಿದ್ಧಾಂತ ಭಗವದ್ಗೀತೆ ಆಧ್ಯಾತ್ಮಿಕ ವಿದ್ಯೆಯಲ್ಲಿ ಒಂದು ದೊಡ್ಡ ತಿರುವಿನಂತದ್ದು, ಇದರಲ್ಲಿ ಎಷ್ಟೋ ಕಲ್ಪಿತ ಶ್ಲೋಕಗಳನ್ನು ನಿರ್ದಾಕ್ಷಿಣ್ಯವಾಗಿ ತೆಗೆದುಹಾಕುವುದು ಒಂದು ಮುಖ್ಯ ವಿಷಯವಾದರೆ, ಗೀತೆ 17 ಅಧ್ಯಾಯಗಳೇ ಎಂದು ಒಂದು ಅಧ್ಯಾಯವನ್ನು ತೆಗೆದು ಹಾಕುವುದು ಮತ್ತೊಂದು ಸಂಚಲನ ವಿಷಯ. ತ್ರೈತ ಸಿದ್ಧಾಂತ ಭಗವದ್ಗೀತೆಯಲ್ಲಿ ಸುಮಾರು 50 ಶ್ಲೋಕಗಳಿಗೆ ಭಾವನೆಯನ್ನೇ ಬದಲಾಯಿಸಿ ಬರೆಯುವುದು ಒಂದು ವಿಪ್ಲವಾತ್ಮಕ ವಿಷಯ. ಗೀತೆಯಲ್ಲಿನ ಪುರಾಣ ವಿಷಯಗಳನ್ನು ಖಂಡಿಸಿ ಸ್ವಚ್ಛವಾಗಿ ಗೀತೆಯನ್ನು ಶಾಸ್ತ್ರವಾಗಿ ರೂಪಿಸಲಾಗಿದೆ. ಎಷ್ಟೋ ತಿರುವುಗಳು ತಿರುಗಿದ **"ತ್ರೈತ ಸಿದ್ಧಾಂತ ಭಗವದ್ಗೀತೆ"**ಯನ್ನು ಓದುವುದಕ್ಕಿಂತ ಮೊದಲು ಗೀತಾಪರಿಚಯವನ್ನು ಓದಿದರೆ ಗೀತೆ ಸುಲಭವಾಗಿ ಅರ್ಥವಾಗುತ್ತದೆ. ಗೀತೆಯಲ್ಲಿ ಇಲ್ಲಿಯವರೆಗೂ ಏನಿದೆಯೋ, ಏನಿರಬೇಕೋ ತಿಳಿಯುವುದಕ್ಕೆ, ಗೀತೆಯೊಂದರ ಹೆಸರಿನಲ್ಲಿರುವ ಅರ್ಥವನ್ನು ಮೊದಲು ವಿವರಿಸಿಕೊಳ್ಳುತ್ತಾ, ಗೀತಾಪರಿಚಯವನ್ನು ಪ್ರಾರಂಭಿಸೋಣ.

"ಗೀತೆ" ಎಂದರೆ ಎಷ್ಟೋ ಜನ ಹಿರಿಯರು ಎಷ್ಟೋ ಅರ್ಥಗಳನ್ನು ಹೇಳಿದ್ದಾರೆ. ಆದರೆ ನಮ್ಮೆಲ್ಲರಿಗೂ ಸುಲಭವಾಗಿ ತಿಳಿದ ಪದ್ಧತಿಯಲ್ಲಿ **"ಗೀತೆ" ಎಂದರೆ "ಹದ್ದು"**(ಮೇರೆ) ಎಂದು ತಿಳಿದಿದೆ. ರಾಮಾಯಣದಲ್ಲಿ ಒಂದು ದಿನ ಲಕ್ಷ್ಮಣನೂ ಸಹ ಈ ಗೆರೆ (ಗೀತೆ) ಯನ್ನು ದಾಟಬೇಡವೆಂದು ಒಂದು ಹದ್ದನ್ನು ಏರ್ಪಡಿಸಿ ಅರಣ್ಯದೊಳಗೆ ಹೋಗಿದ್ದಾನೆಂದು ಎಲ್ಲರಿಗೂ ತಿಳಿದಿದೆ. ಹಾಗೆಯೇ ಈ ಗೆರೆಯೊಳಗಿದ್ದರೆ ಜೀವನಕ್ಕೆ ಅರ್ಥ ಇರುವುದೆಂದು, ಈ ಗೆರೆಯನ್ನು ದಾಟಿದರೆ ಮಾನವತ್ವಕ್ಕೆ ಅರ್ಥ ಇರುವುದಿಲ್ಲವೆಂದು ಭಗವಂತನು ಏರ್ಪಡಿಸಿರುವ ಹದ್ದನ್ನೇ **"ಭಗವದ್ಗೀತೆ"** ಎನ್ನುತ್ತಿದ್ದೇವೆ. ಲಕ್ಷ್ಮಣನು ಆ ದಿನ ಕಡ್ಡಿಯಿಂದ ಭೂಮಿ ಮೇಲೆ ಗೆರೆ ಗೀಚಿ ಇದರ ಒಳಗಿದ್ದರೆ ರಕ್ಷಣೆ ಇರುತ್ತದೆಂದು, ಅಪಾಯ ಇರುವುದಿಲ್ಲವೆಂದು, ಇದನ್ನು ದಾಟಬಾರದೆಂದು ಸೀತೆಗೆ ಹೇಳಿದ್ದಾನೆಂದು ಚರಿತ್ರೆಯಲ್ಲಿ ಇದೆ. ಹಾಗೇ ಭಗವಂತನಾಗಿ ಉದ್ಭವಿಸಿದ ಪರಮಾತ್ಮ, ಮಾತುಗಳಿಂದ ಜೀವತ್ವಕ್ಕೆ ಹದ್ದು ಏರ್ಪಡಿಸಿ ಈ ಹದ್ದು ಮೀರಿದರೆ ಮಾನವತ್ವಕ್ಕೆ ಅರ್ಥವೇ ಇಲ್ಲದಂತೆ ಹೋಗುತ್ತದೆಂದು, ಈ ಹದ್ದಿನಲ್ಲಿ ಇರುವವರೆಗೂ ಜೀವತ್ವಕ್ಕೆ ಅರ್ಥ ಇರುತ್ತದೆಂದು, ಈ ಗೀತೆಯೊಳಗಿರುವವನಿಗೆ ದೈವತ್ವ ಪ್ರಾಪ್ತಿಸುತ್ತದೆಂದು ತಿಳಿಸುತ್ತಾ ಕ್ರಮಪದ್ಧತಿಯಾಗಿ ಗೀಚಿರುವ ಗೀತೆಯೇ **"ಭಗವದ್ಗೀತೆ"**.

ಗೀತೆ ಎಂದರೆ ಹದ್ದು ಎಂದು, ರೇಖೆ ಎಂದೂ, ಗೀಚಲ್ಪಟ್ಟ ಗೆರೆ ಎಂದು ನಾವು ಹೇಳಿದರೆ ಅರ್ಥಮಾಡಿಕೊಳ್ಳದ ಅಪ್ರಬುದ್ಧರು ಕೆಲವರು "ಅರ್ಥ ಯಾವ ನಿಘಂಟಿನಲ್ಲಿದೆ? ನಿಮಗೆ ಯಾರು ಹೇಳಿದ್ದಾರೆ? ನಮ್ಮಂತಹ ವಿಜ್ಞಾನಿಗಳು ನಗುತ್ತಾರೆಂಬ ಅರಿವೂ ಸಹ ಇಲ್ಲದಂತೆ ಹೇಳಿದ್ದೀರ!" ಎಂದು ಹೀಯಾಳಿಸಿ ನಮಗೆ ಪತ್ರಗಳೂ ಸಹ ಬರೆದಿದ್ದಾರೆ. ಅಂತವರಿಗೆಲ್ಲ ಹೇಳುವ ಉತ್ತರವೇನೆಂದರೆ! ಇತರರು ಇದಕ್ಕಿಂತ ಮೊದಲು ಹೇಳಿದ ವಿಷಯವನ್ನು, ಇತರರು ಇದಕ್ಕು ಮೊದಲು ಬರೆದ ವಿಷಯವನ್ನು, ನಾವು ಹೇಳುವುದಾಗಲಿ, ಬರೆಯುವುದಾಗಲಿ ಎಂದಿಗೂ ಇರುವುದಿಲ್ಲ. ಆದ್ದರಿಂದ ನಮ್ಮ ರಚನೆಯಲ್ಲಿನ ಗ್ರಂಥಗಳಲ್ಲಿ ಎಲ್ಲ

ಹೊಸ ವಿಷಯಗಳಾಗಿಯೇ ಕಾಣಿಸುತ್ತವೆ. ಕೃಷ್ಣನು ಗೀತೆಯನ್ನು ಹೇಳಿದ್ದಾನೆ, ಅದು ಅದಕ್ಕಿಂತ ಮೊದಲು ಯಾರೂ ಹೇಳಿರುವುದು ಅಲ್ಲ, ಬರೆದಿರುವುದು ಅಲ್ಲ. ಯೇಸುಪ್ರಭು ತನ್ನ ಜೀವನದಲ್ಲಿ ಕೆಲವು ಮಾತುಗಳು ಹೇಳಿದ್ದಾನೆ, ಅವು ಆತನಿಗಿಂತ ಮೊದಲು ಯಾರೂ ಹೇಳಲಿಲ್ಲ. ಕೃಷ್ಣನಾಗಲಿ, ಯೇಸು ಪ್ರಭುವಾಗಲಿ ಹೇಗೆ ಯಾರನ್ನು ಅನುಸರಿಸಿ ಹೇಳಲಿಲ್ಲವೊ, ಹಾಗೆಯೇ ನಾವು ಯಾರನ್ನು ಅನುಸರಿಸಿ ಹೇಳಲಿಲ್ಲ. ನಮ್ಮಿಂದ ಬರೆದಿರುವ ರಚನೆಗಳೆಲ್ಲ ಪ್ರತ್ಯೇಕತೆಯನ್ನು ಹೊಂದಿರುವವೆಂದು ಎಲ್ಲರೂ ಗ್ರಹಿಸಬಹುದು. ಅದೇ ಪದ್ಧತಿ ಪ್ರಕಾರ **'ಗೀತೆ'** ಎಂದರೆ ಇನ್ನೂ ಪ್ರತ್ಯೇಕವಾಗಿ ಏನು ಹೇಳುತ್ತಿದ್ದೇವೆಂದರೆ!.

ಗೀತೆ ಎಂದರೆ ಗೀಚಲ್ಪಟ್ಟಿರುವುದು. ಯಾರು ಗೀಚಿದ್ದಾರೆ? ಎಂದು ಪ್ರಶ್ನಿಸಿಕೊಂಡರೆ, ದೇವರಿಂದ ಗೀಚಲ್ಪಟ್ಟಿದೆ ಎಂದು ಉತ್ತರ ತಿಳಿಯುತ್ತಿದೆ. ದೇವರು ಕಾಣಿಸುವವನು ಅಲ್ಲ, ಆತನು ಹೇಗೆ ಗೀಚಿದ್ದಾನೆ? ಎಂದು ಪ್ರಶ್ನೆ ಬರಬಹುದು. ಅದಕ್ಕೆ ಉತ್ತರ ಏನೆಂದರೆ! ಶರೀರದಲ್ಲಿನ ಜೀವಾತ್ಮವೂ ಸಹ ಕಾಣಿಸುತ್ತಿಲ್ಲ. ಆದರೂ ನಮ್ಮ ಶರೀರದಲ್ಲಿ ಕಾಣಿಸದ ನಾವು (ಜೀವಿಗಳು) ಶರೀರಕ್ಕಿರುವ ಹಸ್ತದ ಮೂಲಕ ಗೆರೆಗಳನ್ನು ಗೀಚುತ್ತಿದ್ದೇವಲ್ಲವೆ! ಹಾಗೆಯೇ ಕಾಣಿಸದ ದೇವರು ಪ್ರಕೃತಿ ಎನ್ನುವ ತನ್ನ ಶರೀರದಿಂದ ಗೆರೆಯನ್ನು ಗೀಚಿದ್ದಾನೆ, ಎಂದು ನೀನು ಏಕೆ ಅಂದುಕೊಳ್ಳಬಾರದು.? ಈಗ ಮತ್ತೊಂದು ಪ್ರಶ್ನೆ ಬರಬಹುದು. ಜೀವಾತ್ಮ ಕಾಣಿಸಲಿಲ್ಲ, ದೇವರೂ ಸಹ ಕಾಣಿಸಲಿಲ್ಲ. ಆದರೂ ಕಾಣಿಸುವ ಶರೀರದಿಂದ ಗೀಚಿದ ಗೆರೆ ಕಾಣಿಸುತ್ತದೆ! ಹಾಗೆಯೇ ಕಾಣಿಸುವ ಪ್ರಕೃತಿಯಿಂದ ಗೀಚಿದ ಗೆರೆ ಕಾಣಿಸಬೇಕು! ಹಾಗೆ ಎಲ್ಲಿಯೂ ಕಾಣಿಸಲಿಲ್ಲವೇ? ಎಂದು ಪ್ರಶ್ನಿಸಬಹುದು. ತಿಳುವಳಿಕೆ ಇರುವವರಿಗೆ ಮತ್ತೊಂದು ವಿಧವಾಗಿ ಯೋಚನೆಬಂದು, ಕೃಷ್ಣನೂ ಸಹ ನಮ್ಮಂತಹ ಶರೀರ ಇರುವ ಮನುಷ್ಯನೇ, ಆತನ ಶರೀರದ ಮೂಲಕ ಬಂದಿರುವ ಗೀತೆ ಪುಸ್ತಕ ರೂಪದಲ್ಲಿ ಇದೆ. ದೇವರು ನಮ್ಮಂತಹ ಮನುಷ್ಯ ಅಲ್ಲದಿದ್ದರೂ ಪ್ರಕೃತಿ ಎನ್ನುವ ಆತನ ಶರೀರದ ಮೂಲಕ ಬಂದಿರುವ ಗೆರೆ ಯಾವ ರೂಪದಲ್ಲಿಯೂ ಕಾಣಿಸಲಿಲ್ಲವೇ? ಎಂದು

ಪ್ರಶ್ನಿಸಬಹುದು. ಈ ಪ್ರಶ್ನೆಗೆ ಉತ್ತರವೇನು, ಯಾವ ವಿಧವಾಗಿ ಅರ್ಥ ಮಾಡಿಕೊಳ್ಳಬೇಕೋ ಕೆಳಗೆ ನೋಡೋಣ.

ಶ್ರೀ ಕೃಷ್ಣನಿಂದ ಗೀಚಲ್ಪಟ್ಟ ಭಗವದ್ಗೀತೆ ಎನ್ನುವ ಗ್ರಂಥ ಕೆಲವರ ಹತ್ತಿರ ಇರಬಹುದು ಕೆಲವರ ಹತ್ತಿರ ಇಲ್ಲದಿರಬಹುದು. ದೇವರಿಂದ ಗೀಚಲ್ಪಟ್ಟ ಗೀತೆ ಪ್ರತಿಯೊಬ್ಬರ ಹತ್ತಿರ ಇದೆ. ಮಾನವರ ಹತ್ತಿರವೇ ಅಲ್ಲದೆ, ಸಮಸ್ತ ಜೀವರಾಶಿಗಳ ಹತ್ತಿರವೂ ಸಹ ಇದೆ. ದೇವರು ಗೀಚಿದ ಗೆರೆ ಅಥವಾ ಹದ್ದು ಜೀವಾತ್ಮನಾದ ನಿನ್ನನ್ನು ಬಿಟ್ಟು ಇಲ್ಲ. ಆ ಗೆರೆ ಯಾವಾಗಲೂ ನಿನ್ನನ್ನು ಅಂಟಿಕೊಂಡು ಇದೆ. ದೇವರು ಗೀಚಿದ ಹದ್ದು ಏನೋ ನಂತರ ಚಿತ್ರದಲ್ಲಿ ನೋಡಿರಿ.

ಭೂಮಿ ಮೇಲೆ ಎಷ್ಟೋ ದೇಶಗಳು ಇವೆ. ಪ್ರತಿ ದೇಶಕ್ಕೂ ಆ ದೇಶದ ಸರಹದ್ದು ರೇಖೆ ಇರುತ್ತದೆ. ಸರಹದ್ದು ರೇಖೆಯೊಳಗಿರುವುದು ಇಂತಹ ದೇಶವೆಂದೊ, ಇಂತಹ ರಾಜ್ಯವೆಂದೊ ಹೇಳುತ್ತೇವೆ. ಈ ಪದ್ಧತಿ ಪ್ರಕಾರ ಭಾರತ ದೇಶಕ್ಕೆ ಸುತ್ತಲೂ ಒಂದು ಹದ್ದು ಇದೆ. ಹಾಗೆಯೇ ಪ್ರಪಂಚದಲ್ಲಿ ಎಷ್ಟೋ ಜೀವರಾಶಿಗಳು ಇವೆ. ಒಂದೊಂದು ಜೀವರಾಶಿ ಶರೀರ ಒಂದೊಂದು ವಿಸ್ತೀರ್ಣಹೊಂದಿದೆ. ಈ ಪದ್ಧತಿ ಪ್ರಕಾರ ಮಾನವನ ಶರೀರವೂ ಸಹ ಒಂದು ವಿಸ್ತೀರ್ಣ ಹೊಂದಿದೆ. ದೇಶಕ್ಕೆ ಹದ್ದು ಇದ್ದಂತೆ, ಮಾನವನ ಶರೀರಕ್ಕೂ ಸಹ ಹದ್ದು ಇದೆ. ದೇಶವೊಂದರ ಸರಹದ್ದಿನೊಳಗೆ ಆ ದೇಶದ ಕಾನೂನು, ರಾಜ್ಯಾಂಗ ಇರುತ್ತದೆ, ಹಾಗೆಯೇ ಶರೀರವೊಂದರ ಗೆರೆಯೊಳಗೆ ಆ ಶರೀರವೊಂದರ ನಿಬಂಧನ ರಾಜ್ಯಾಂಗ ಇರುತ್ತದೆ. ದೇಶವೊಂದರ ಕಾನೂನು, ರಾಜ್ಯಾಂಗ ಆ ದೇಶವೊಂದರ ಪರಿಧಿ ಎನ್ನುವ ಹದ್ದಿನೊಳಗೇ ಇರುತ್ತದೆ. ಹಾಗೆಯೇ ಶರೀರ ಒಂದರ ನಿಬಂಧನ ರಾಜ್ಯಾಂಗ, ಆ ಶರೀರವೊಂದರ 'ಪರಧಿ' ಎನ್ನುವ ಹದ್ದಿನಲ್ಲಿಯೇ ಇರುತ್ತದೆ. ದೇಶಕ್ಕೆ ಒಬ್ಬ ರಾಜನಿದ್ದಂತೆ, ಶರೀರಕ್ಕೂ ಸಹ ಜೀವಾತ್ಮನೆನ್ನುವ ಒಬ್ಬ ರಾಜನಿದ್ದಾನೆ. ದೇಶದಲ್ಲಿನ ರಾಜನಿಗೆ ಸ್ವಲ್ಪ ಪರಿವಾರ ಇದ್ದಂತೆ, ಶರೀರದಲ್ಲಿನ ಜೀವಾತ್ಮನೆಂಬ ರಾಜನಿಗೂ ಸಹ 25 ಜನರ ಪರಿವಾರ

ಇದೆ. ದೇಶದಲ್ಲಿನ ರಾಜ ಒಂದು ಕಡೆ ಕುಳಿತುಕೊಂಡು ತನ್ನ ಪರಿವಾರದಿಂದ ರಾಜ್ಯಪರಿಪಾಲನೆ ಮಾಡುತ್ತಿರುವಂತೆ, ಶರೀರದಲ್ಲಿನ ಜೀವಿಯು ಒಂದು ಕಡೆ ಕದಲದಂತೆ ಪರಿವಾರದಿಂದ ಶರೀರ ಪರಿಪಾಲನೆ ಮಾಡುತ್ತಿದ್ದಾನೆ. **ದೇಶ ಪರಿಧಿಯಲ್ಲಿನ ರಾಜ್ಯಾಂಗವನ್ನು ತಿಳಿಸುವುದು ಕಾನೂನು. ಹಾಗೆಯೇ ಶರೀರ ಪರಿಧಿಯಲ್ಲಿನ ಯಂತ್ರಾಂಗವನ್ನು ತಿಳಿಸುವುದು ನಿಬಂಧನ ಅಥವಾ ಧರ್ಮ.** ಕಾನೂನು ದೇಶ ಪರಿಧಿಯಲ್ಲಿ ಇದ್ದಂತೆ, ಧರ್ಮ ದೇಹವೊಂದರ ಪರಿಧಿಯಲ್ಲಿದೆ. ಕಾನೂನಿನಲ್ಲಿ ನ್ಯಾಯ, ಅನ್ಯಾಯ ಇದ್ದಂತೆ, ಧರ್ಮದಲ್ಲಿ ಪಾಪ, ಪುಣ್ಯಗಳು ಇವೆ. ದೇಶದಲ್ಲಿನ ಕಾನೂನು ನ್ಯಾಯ ಅನ್ಯಾಯಗಳನ್ನು ನಿರ್ಣಯಿಸಿದಂತೆ, ಶರೀರದಲ್ಲಿನ ಧರ್ಮ ಪಾಪಪುಣ್ಯಗಳನ್ನು ನಿರ್ಣಯಿಸುತ್ತದೆ.

ಸರಹದ್ದನ್ನು ಪರಿಶೀಲಿಸಿದರೆ ಅದು ಯಾವ ದೇಶವಾಗಿದೆ, ಅದರಲ್ಲಿನ ಕಾನೂನು ಏನೆಂಬುವುದು ತಿಳಿಯುತ್ತದೆ. ಹಾಗೆಯೇ ಶರೀರಹದ್ದನ್ನು ಪರಿಶೀಲಿಸಿದರೆ ಅದು ಯಾವ ದೇಹವಾಗಿರುವುದು, ಅದರಲ್ಲಿನ ಧರ್ಮ ಏನೆಂಬುವುದು ತಿಳಿಯುತ್ತದೆ. ಕಾನೂನು ಏನೆಂಬುವುದು ದೇಶದ ಹದ್ದನ್ನು ನೋಡಿದರೆ ತಿಳಿಯುತ್ತದೆ. ಧರ್ಮ ಏನೆಂಬುದು ದೇಹ ಹದ್ದನ್ನು ನೋಡಿದರೆ ತಿಳಿಯುತ್ತಿದೆ ನಿನ್ನ ಶರೀರದೊಳಗಿನ ಧರ್ಮಗಳೇನೋ ತಿಳಿಯಬೇಕೆಂದರೆ ಶರೀರದ ಗೆರೆಯೊಳಗೇ ತಿಳಿಯಬೇಕು. ದೇಹದೊಳಗಿರುವ ಸ್ಥೂಲ, ಸೂಕ್ಷ್ಮ ವಿವರಗಳನ್ನು ತಿಳಿಸುವುದೇ ಗೀತೆ, ಅದೇ ಭಗವದ್ಗೀತೆ. **ಭಗವದ್ಗೀತೆಯಲ್ಲಿನ ಪ್ರತಿ ಶ್ಲೋಕ ಶರೀರ ಪರಿಧಿಯಲ್ಲಿನ ಧರ್ಮಗಳನ್ನೇ ತಿಳಿಸಿವೆ ಹೊರತು ಯಾವ ಶ್ಲೋಕವು ಶರೀರ ಪರಿಧಿಯನ್ನು ದಾಟಿ ಹೇಳಲಿಲ್ಲ.** ಶರೀರ ಪರಿಧಿಯೇ ಧರ್ಮಗಳಿಗೆ ನಿಲಯವಾಗಿದೆ, ಆದ್ದರಿಂದ ಪರಿಧಿಯೊಳಗೆ ಹೇಳಲ್ಪಟ್ಟಿರುವುದನ್ನು **ಗೀತೆ** ಎಂದಿದ್ದಾರೆ. ದೇವರು ಭಗವಂತನ ರೂಪದಲ್ಲಿ ಹೇಳಿರುವುದಾದ್ದರಿಂದ ಇದನ್ನು ಭಗವದ್ಗೀತೆ ಎಂದಿದ್ದಾರೆ.

ವಿಚಕ್ಷಣಾ ದೃಷ್ಟಿಯಿಂದ ನೋಡಿದರೆ ನಿನ್ನ ಗೆರೆಯೊಳಗಿರುವುದೇ ಭಗವದ್ಗೀತೆ ಎಂಬ ಗೀತೆಯಲ್ಲಿದೆ. ದೇವರು ಮಾನವನ ಊಹೆಗೆ ಎಷ್ಟೋ

ಸಿದ್ಧಾಂತಗಳನ್ನು ತಿಳಿಸಿದಂತೆ "ಗೀತೆ" ಎನ್ನುವ ಪದವನ್ನೂ ಸಹ ತಿಳಿಸಿದ್ದಾನೆ. ಗೀತೆ ಎಂದರೆ ರೇಖೆ ಎಂದೂ, ಹದ್ದು ಎಂದೂ, ಗೀಚಲ್ಪಟ್ಟ ಗೆರೆ ಎಂದೂ ಬರೆಯಿಸಿದ್ದಾನೆ. ಹಾಗೆ ಬರೆಯಿಸುವುದರಿಂದ ಎಂದಿಗಾದರೂ ಮಾನವನ ಬುದ್ಧಿಗೆ ಸಂಶಯ ಬಂದು ಇದು ಯಾವ ಗೆರೆ (ಗೀತೆ)? ಯಾವ ಹದ್ದು? ಎಂದು ಪ್ರಶ್ನಿಸಿಕೊಂಡು ಉತ್ತರಕ್ಕೋಸ್ಕರ ಎದುರುನೋಡುತ್ತಾನೆಂದು ದೇವರ ಉದ್ದೇಶ. ಹಾಗೆ ನೋಡುವವನಿಗೆ ಗೀತೆಯಲ್ಲಿನ ಧರ್ಮಗಳೆಲ್ಲ ಅರ್ಥ ವಾಗುತ್ತವೆಂದು ಆತನ ಭಾವನೆ. ನಮ್ಮ ಒಳ್ಳೆಯದನ್ನು ಬಯಸಿ ದೇವರು ಗೀತೆಯನ್ನು ಗೀತೆಯಾಗಿಯೇ ಪರಿಚಯ ಮಾಡಿದರೆ, ಅದನ್ನು ತಿಳಿದು ಕೊಳ್ಳೋಣವೆಂಬ ಯೋಚನೆ ಕೆಲವರ ಬುದ್ದಿಗೆ ಬಾರದೆ, ಯಾವ ನಿಘಂಟಿನಲ್ಲಿದೆ ಈ ಅರ್ಥ? ಎಂದು ಕೇಳಿದರೆ, ಅವರು ರಾಕ್ಷಸ ಜಾತಿಯವರೋ, ದೇವತೆಗಳ ಜಾತಿಯವರೋ, ಅವರನ್ನು ಏನನ್ನಬೇಕೋ ನೀವೇ ಯೋಚಿಸಿರಿ!. ನಿಘಂಟುಗ ಳಲ್ಲಿ (ಡಿಕ್ಷನರಿ) ಪ್ರಪಂಚ ಅರ್ಥಗಳಿರಬಹುದು. ಆದರೆ ಪರಮಾತ್ಮನ ಭಾವನೆಗಳಿರುವುದಿಲ್ಲ. ಹಾಗಿದ್ದರೆ ದೇವರು ಭೂಮಿ ಮೇಲಕ್ಕೆ ಬಂದು ತನ್ನ ಜ್ಞಾನ ಇದು ಎಂದು ಹೇಳಬೇಕಾದ ಅವಶ್ಯಕತೆ ಇಲ್ಲ. ಧರ್ಮಗಳು ಅಧರ್ಮ ಗಳಾಗಿ ಬದಲಾದಾಗ ದೇವರು ತನ್ನ ಜ್ಞಾನವನ್ನು ತಿಳಿಸುತ್ತೇನೆಂದಿದ್ದಾನೆ. ದೇವರು ಭಗವಂತನಾಗಿ ಭೂಮಿ ಮೇಲಕ್ಕೆ ಬಂದಾಗ ಅಧರ್ಮವರರಿಗೆ ಧರ್ಮಗಳು ರುಚಿಸುವುದಿಲ್ಲ. ಆದ್ದರಿಂದ ಶ್ರೀಕೃಷ್ಣನ ಜನ್ಮದಲ್ಲಿಯೂ, ಯೇಸುಪ್ರಭು ಜನ್ಮದಲ್ಲಿಯೂ ಆತನ ಮಾತನ್ನು ಧಿಕ್ಕರಿಸಿದವರು, ಆತನಿಗೆ ಆತಂಕವನ್ನುಂಟು ಮಾಡಿದವರು ಎಷ್ಟೋ ಜನ ಇದ್ದಾರೆ. ಆ ದಿನವೇ ದಿಕ್ಕರಿಸುವವರಿರುವಾಗ ಈದಿನ ನಮ್ಮಂತಹವರನ್ನು ತಪ್ಪು ಹಿಡಿಯುವವರು ಎಷ್ಟೋ ಜನ ಇರಬಹುದು. ಅಂತವರನ್ನು ದೃಷ್ಟಿಯಲ್ಲಿಟ್ಟುಕೊಳ್ಳದೆ, ದೈವಜ್ಞಾನದ ಮೇಲೆ ಶ್ರದ್ಧೆ ಇರುವವರಿಗೆ ವಾಸ್ತವ ಜ್ಞಾನ ತಿಳಿಸಬೇಕೆಂಬ ಉದ್ದೇಶದಿಂದ, **"ಗೀತೆ" ಎಂದರೆ ದೇವರಿಂದ ಗೀಚಲ್ಪಟ್ಟ ಗೀತೆ (ಗೆರೆ)** ಎಂದು ಅರ್ಥ ಹೇಳುತ್ತಿದ್ದೇವೆ.

ಧರ್ಮಗಳೆನ್ನುವ ಮಾತುಗಳಿಂದ ಭಗವಂತನು ಗೀಚಿದ ಗೆರೆಯನ್ನು ನಿಮಗೆ ತಿಳಿಸಬೇಕೆಂದುಕೊಂಡಿದ್ದೇವೆ. ಆದರೆ ಮುಖ್ಯವಾಗಿ ಗಮನಿಸುವುದೇನೆಂದರೆ ಆರೋಗ್ಯವಂತನಿಗೆ ಅಲ್ಲದೆ ರೋಗ ಇರುವವರಿಗೆ ವೈದ್ಯನ ಅವಶ್ಯಕತೆ ಇರುವಂತೆ, ಇಲ್ಲಿಯವರೆಗೂ ಆತ್ಮವಾದಿಗಳಿಗಲ್ಲದೆ ಆಸ್ತಿಕರಿಗೂ, ನಾಸ್ತಿಕರಿಗೂ, ಹೇತುವಾದಿಗಳಿಗೂ ಸಹ ನಮ್ಮ ಭೋಧನೆಗಳು ಹೆಚ್ಚಾಗಿ ಉಪಯೋಗವಾಗಿವೆ. ಕೆಲವರು ಆಸ್ತಿಕರಿಂದ ಕೆಲವು ವಿಮರ್ಶೆಗಳು ಬಂದರೂ, ಹೇತುವಾದಿಗಳು, ಆಸ್ತಿಕರು, ನಾಸ್ತಿಕರು ನಮ್ಮ ಬೋಧನೆಗಳಿಂದ ನಿಜವಾದ ಆತ್ಮವಾದಿಗಳಾಗಿ ಬದಲಾಗುವುದು ನಮಗೆ ಉತ್ಸಾಹವನ್ನು ಕೊಟ್ಟಿವೆ. ಆದ್ದರಿಂದಲೇ ಹೇತುವಾದಿಗಳಿಗೂ ನಾಸ್ತಿಕ, ಆಸ್ತಿಕರಿಗೂ ಸಹ ಅರ್ಥವಾಗುವಂತೆ, ಅವರೂ ದೈವತ್ವವನ್ನು ತಿಳಿದುಕೊಳ್ಳುವಂತೆ, ಭಗವದ್ಗೀತೆ ಎಲ್ಲರಿಗೂ ಉತ್ತರವಾಗಿ ನಿಲ್ಲುವಂತೆ ಬರೆಯುತ್ತಿದ್ದೇವೆ. ನಾವು ಬರೆಯುವ ಭಗವದ್ಗೀತೆಯಲ್ಲಿ ಎಷ್ಟೋ ಹೊಸ ಅದ್ಭುತ ಆಶ್ಚರ್ಯಕರ ವಿಷಯಗಳು ಹೊರಬೀಳುತ್ತವೆಂದು ಮೊದಲೇ ಹೇಳುತ್ತಿದ್ದೇವೆ.

ಎಷ್ಟೋ ಪ್ರಶಂಸೆಗಳು, ಮತ್ತೆಷ್ಟೋ ವಿಮರ್ಶೆಗಳು ಅನುಭವಿಸಿದ ನಾವು ಅವುಗಳೆಲ್ಲವನ್ನು ಯೋಚಿಸಿ, ಸತ್‌ವಿಮರ್ಶೆಗಳಿಗೆಲ್ಲಾ ಸಹಿಸಿಕೊಳ್ಳುವಂತೆ, ಸತ್ಯವನ್ನೇ ಪ್ರಕಟಿಸುವುದು ಒಳ್ಳೆಯದೆಂದು ನಮ್ಮಲ್ಲಿನ ಚಿತ್ತವು ನಿರ್ಣಯಿಸುವುದು ನಮಗೆ ಸಂತೋಷ. ಗೀತೆಯಲ್ಲಿ ಶ್ರೀಕೃಷ್ಣನು ಒಂದು ಮಾತು ಹೇಳಿದ್ದಾನೆ. ಅದೇನೆಂದರೆ ಮಾನವನಿಗೆ ಬೇಕಾದ ಸುಖಗಳಿಗೋಸ್ಕರವೇ ವೇದಾರ್ಥಗಳಿವೆಯೆಂದು, ಕಷ್ಟಗಳು ಕೊನೆಗೊಂಡು ಸುಖಗಳು ಪ್ರಾಪ್ತಿಸುವುದಕ್ಕೆ ವೇದಗಳು ಹೀಗೆ ಹೇಳುತ್ತಿವೆಯೆಂದು, ಎಷ್ಟೋ ವಿಧಗಳ ಉಪನ್ಯಾಸಗಳನ್ನು ಕೆಲವರು ವೇದವಾದಿಗಳು ಜೇನಿನಹಾಗೆ ಸಿಹಿಯಾಗಿರುವಂತೆ ಬೋಧಿಸುತ್ತಿದ್ದಾರೆಂದು, ಆ ಮಾತುಗಳನ್ನು ಕೇಳಿದವರು ಅವರ ಸುಖಗಳಿಗೋಸ್ಕರವೇ ದೈವ ಪ್ರಾರ್ಥನಾ ಕ್ರಿಯೆಗಳು ಮಾಡುತ್ತಿದ್ದಾರೆಂದು, ಶ್ರೀಕೃಷ್ಣನು ಹೇಳಿದಂತೆ ಅಂತಹ ಸಿಹಿಯಾದ ಮಾತುಗಳು ನಮ್ಮ ಬೋಧನೆಗಳಲ್ಲಿ ಇಲ್ಲದ ಕಾರಣ ಕೆಲವರಿಗೆ ರುಚಿಸುವುದಿಲ್ಲ.

"ಸುಖಗಳಲ್ಲಿ ಆಸಕ್ತಿ ಇರುವವರು ಅವರ ಸುಖಗಳಿಗೋಸ್ಕರವೇ ಪೂಜೆಗಳು ಸಹ ಮಾಡುತ್ತಾರೆ ಹೊರತು ಅವರಿಗೆ ಆತ್ಮಜ್ಞಾನ ಸರಿ ಅನಿಸುವುದಿಲ್ಲ" ಎಂದು ಶ್ರೀಕೃಷ್ಣನು ಹೇಳಿದ್ದಾನೆ. ಆ ವಿಧವಾಗಿಯೇ ಇಂದಿನ ಪ್ರಜೆಗಳು ಬಹಳ ಜನರು ಅದೇ ಮಾರ್ಗದಲ್ಲಿದ್ದಾರೆ. ಅಷ್ಟೇ ಅಲ್ಲದೆ ಬೋಧಿಸುವ ಬೋಧಕರೂ ಸಹ ಭಗವದ್ಗೀತಾ ಶ್ಲೋಕಗಳನ್ನು ಮಂತ್ರಗಳಂತೆ ಜಪಿಸುತ್ತಿದ್ದಾರೆ. ಆದರೆ ಅವುಗಳಲ್ಲಿನ ಉನ್ನತ ಭಾವನೆಯನ್ನು ಗ್ರಹಿಸದಂತೆ ಇದ್ದಾರೆ.

ನಮ್ಮ ಬೋಧನೆಗಳು ಪ್ರಪಂಚ ವಿಷಯಗಳಿಗೆ ಯಾವುದೇ ಉಪಯೋಗ ವಾಗುವುದಿಲ್ಲ. ಆದ್ದರಿಂದ ಇಂದಿನ ಆಸೆಗಳ ವಾತಾವರಣದಲ್ಲಿ ನಮ್ಮ ಬೋಧನೆಗಳಿಗೆ ಆದರಣೆ ಬಹಳ ಕಡಿಮೆ ಎಂದೂ ಸಹ ನಮಗೆ ತಿಳಿದಿದೆ. ಆದರೂ ಸತ್ಯವನ್ನೇ ತಿಳಿಸಿ ಮಾನವರನ್ನು ಶಾಶ್ವತವಾದ ಮೋಕ್ಷಪ್ರಾಪ್ತಿಯನ್ನು ಆಶಿಸುವಂತೆ ಮಾಡಬೇಕೆಂದು ನಮ್ಮ ಆಕಾಂಕ್ಷೆ. ನಮ್ಮ ಬೋಧನೆಗಳಿಂದ ಎಲ್ಲರೂ ಅಲ್ಲದೆ ಸಾವಿರಕ್ಕೊಬ್ಬನು ಮೋಕ್ಷಾಸಕ್ತನಾದರೂ ನಮ್ಮ ಕೃಷಿಗೆ ಫಲ ಕೈಗೂಡಿದಂತೆ, ನಮ್ಮ ಉದ್ದೇಶ ನೆರವೇರಿದಂತೆ.

ಗೀತೆ ಎಂದರೆ ಒಂದು ರೇಖೆ ಎಂದು, ಮಾನವನಿಗೆ ಒಂದು ಹದ್ದನ್ನು ತೋರಿಸಿದೆಂದೂ, ಮಾನವರಿಗೆಲ್ಲ ಕೆಲಸಕ್ಕೆ ಬರುವುದೆಂದು ಹೇಳಿದ್ದಾರೆ. ಆದರೆ ಇಂತಹ ಮತದವರಿಗೆಂದು ಹೆಸರಿಟ್ಟು ಹೇಳಲಿಲ್ಲ. ಆದ್ದರಿಂದ ಗೀತೆ ವಿಶ್ವಮಾನವರೆಲ್ಲರ ನಿಮಿತ್ತ ಶಾಸನ ರೂಪವಾಗಿರುವ ಶಾಸ್ತ್ರವೆಂದು ತಿಳಿಯಬೇಕು. ಅದರಲ್ಲಿ ತಿಳಿಸಿದ ವಿಷಯಗಳು ಮಾನವ ಜಾತಿಗೆಲ್ಲ ಉಪಯುಕ್ತವಾದರೂ, ಗೀತೆ ಕೇವಲ ಹಿಂದೂಗಳಿಗೇಯೆಂದೂ ಉಳಿದ ಮತದವರು ಅಂದುಕೊಳ್ಳುವುದು ಶೋಚನಿಯ. ಬಹುಶಃ ಹೇಳಿದವನನ್ನು ಅನುಸರಿಸಿ ಆತನು ಆ ದಿನ ಯಾವ ಮತದವನೋ, ಆ ಮತಸಂಬಂಧವಾದದ್ದೇ ಎಂದು ಕೆಲವರಂದುಕೊಂಡು, ಗೀತೆಯನ್ನು ಒಂದು ಹಿಂದೂಮತಕ್ಕೆ ಪರಿಮಿತಿ ಮಾಡಿರಬಹುದು. ಭಗವದ್ಗೀತೆ ಪ್ರಕಟಿತವಾದ ಐದುಸಾವಿರದ ನೂರಾಐವತ್ತು ವರ್ಷಗಳ ಕೆಳಗೆ, ಯಾವ ಮತ ಇಲ್ಲವೆಂದು ಮುಖ್ಯವಾಗಿ ಗಮನಿಸಿದಂತಾದರೆ, ಗೀತೆ ಈಗಿರುವ ಎಲ್ಲ

ಮತಗಳ ಮಾನವರಿಗೆಂದು ಸುಲಭವಾಗಿ ತಿಳಿಯಬಲ್ಲದು. ಅದರಲ್ಲಿನ ವಿಷಯಗಳು ಜನ್ಮಿಸಿದ ಜೀವಾತ್ಮನಿಗೇ ಎಂದು ಇರುವುದರಿಂದ, ಎಲ್ಲಾ ಮತದವರು ಜನ್ಮಿಸಿದ ಜೀವಾತ್ಮಗಳೇ ಆಗಿರುವುದರಿಂದ, ಆ ವಿಷಯಗಳು ಸಮಸ್ತ ಮಾನವರಿಗೆ ಸಂಬಂಧಿಸಿರುವವೆಂದು ತಿಳಿಯುತ್ತದೆ. ಇನ್ನೂ ಪರಿಶೀಲಿಸಿ ನೋಡಿದಂತಾದರೆ ಅದರಲ್ಲಿ ಸ್ತ್ರೀ ಪುರುಷ ಭೇದಗಳು ಇಲ್ಲದಂತೆ ಕೇವಲ ಆತ್ಮ ಪರವಾಗಿ ಹೇಳಲಾಗಿದೆಯೆಂದು ತಿಳಿಯುತ್ತದೆ. ಅಂತದರಲ್ಲಿ ಒಂದು ಕುಲವೆಂದು, ಒಂದು ಮತವೆಂದೇ ಅಲ್ಲದೆ, ಸ್ತ್ರೀ ಪುರುಷರ ವ್ಯತ್ಯಾಸವೂ ಸಹ ಇಲ್ಲದಂತೆ ಗೀತೆಯನ್ನು ತಿಳಿದುಕೊಳ್ಳಬಹುದೆಂದು ತಿಳಿಯುತ್ತದೆ. ಬೈಬಲ್ ಕ್ರೈಸ್ತರಿಗೆನ್ನುವಂತೆ, ಖುರಾನ್ ಮಹಮ್ಮದೀಯರಿಗೆ ಎನ್ನುವಂತೆ, ಭಗವದ್ಗೀತೆ ಹಿಂದೂಗಳಿಗೇ ಎಂದು ಬಹಳ ಜನರು ಭಾವಿಸುತ್ತಿದ್ದಾರೆ. ಬೈಬಲ್‌ನಲ್ಲಿ ಕ್ರೈಸ್ತರ ಹೆಸರು, ಖುರಾನ್‌ನಲ್ಲಿ ಇಸ್ಲಾಮ್ ಹೆಸರಿರುವುದರಿಂದ ಆಯಾ ಗ್ರಂಥಗಳನ್ನು ಆಯಾ ಮತ ಗ್ರಂಥಗಳೆನ್ನುವುದರಲ್ಲಿ ಅರ್ಥವಿದೆ. ಆದರೆ ಭಗವದ್ಗೀತೆಯಲ್ಲಿ ಯಾವ ಮತದ ಹೆಸರು ಇಲ್ಲ, ಹೇಳಿದವನು ಪ್ರವಕ್ತನಲ್ಲ, ಅಂತಹದರಲ್ಲಿ ಅದೊಂದು ಮತ ಗ್ರಂಥ ಎನ್ನುವುದರಲ್ಲಿ ಅರ್ಥವೇ ಇಲ್ಲ.

ಭಗವದ್ಗೀತೆಯನ್ನು ಅರ್ಥಮಾಡಿಕೊಂಡರೆ ಮಾನವ ಜಾತಿಗೆಲ್ಲ ಅಧಿಪತಿಯಾದ ದೇವರಿದ್ದಾನೆಂದು ತಿಳಿಯುತ್ತದೆ. ಆದ್ದರಿಂದ ಎಲ್ಲರಿಗೂ ಅಧಿಪತಿಯಾದ ದೇವರನ್ನು ಕುರಿತು ತಿಳಿದುಕೊಳ್ಳುವ ಉದ್ದೇಶದಿಂದ ಭಗವದ್ಗೀತೆಯನ್ನು ಓದಬೇಕೆಂದು ಕೋರುತ್ತಿದ್ದೇವೆ. ಬಹುಶಃ ಕೆಲವರು ಭಗವದ್ಗೀತೆಯನ್ನು ಈಗಾಗಲೇ ಓದಿರಬಹುದು. ಅದರಲ್ಲಿ ಯೋಚಿಸುವವರಿಗೆ ಸಂಶಯಗಳು ಇರಬಹುದು. ಸಂಶಯಗಳು ತೀರದೆ ಗೀತೆಗೆ ದೂರವಾಗಿ, ನಾಸ್ತಿಕರಾಗಿ ಕೆಲವರು ಮಾರ್ಪಟ್ಟಿರಬಹುದು. ಅಂತಹವರನ್ನೆಲ್ಲಾ ದೃಷ್ಟಿಯಲ್ಲಿಟ್ಟು ಕೊಂಡು ಅವರಲ್ಲಿ ಉದ್ಭವಿಸಿದ ಪ್ರಶ್ನೆಗಳನ್ನು ಶೇಖರಿಸಿ ಆ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡುವ ಭಗವದ್ಗೀತೆಯನ್ನು ನಾವು ಬರೆದಿರುವುದು ನಡೆದಿದೆ. ಓದುವವರಾದ ನೀವು ನಮ್ಮ ಬರಹದಲ್ಲಿನ ಯಾವ ವಿಷಯವನ್ನು ಕುರುಡರಂತೆ

ನಂಬದೆ ಯೋಚಿಸಿ ನಿರ್ಣಯಿಸಿಕೊಳ್ಳಿ. ನಾವು ಹೇಳುವ ವಿಷಯಗಳು ಕೆಲವು ನೀವು ಇಲ್ಲಿಯವರೆಗೂ ಕೇಳದಿರುವವು ಇರಬಹುದು. ಪೂರ್ವದಲ್ಲಿ ಯಾರೂ ಈ ಶೈಲಿಯಲ್ಲಿ ಹೇಳದೆ ಇನ್ನೊಂದು ಶೈಲಿಯಲ್ಲಿ ಹೇಳಿರಬಹುದು. ಆದರೂ ವಾಸ್ತವಿಕತೆಯನ್ನು ಅರ್ಥ ಮಾಡಿಕೊಳ್ಳುತ್ತೀರೆಂಬ ಭಾವನೆಯಿಂದಲೇ ಬರೆಯುತ್ತಿದ್ದೇವೆ.

ಭಗವದ್ಗೀತೆಯನ್ನು ಶ್ರೀಕೃಷ್ಣನು ಯುದ್ಧರಂಗದಲ್ಲಿ ಬೋಧಿಸಿದ್ದಾನೆಂದು ಎಲ್ಲರಿಗೂ ತಿಳಿಯುತ್ತದೆ. ಭಗವದ್ಗೀತೆಯನ್ನು ಶ್ರೀಕೃಷ್ಣನು ಅರ್ಜುನನೊಂದಿಗೆ **"ಇದು ರಹಸ್ಯವಾದ ಜ್ಞಾನ, ನಿನಗೆ ಮಾತ್ರವೇ ಬೋಧಿಸುತ್ತಿದ್ದೇನೆ"** ಎಂದು ಹೇಳಿದನು. ಅಂತಹದರಲ್ಲಿ ಅರ್ಜುನನಿಗೊಬ್ಬನಿಗೇ ತಿಳಿಸಿದ ವಿಷಯವನ್ನು ಸಂಜಯನು ಹೇಗೆ ಕೇಳಿದ್ದಾನೆ? ಎನ್ನುವುದು ಪ್ರಶ್ನೆ. ಒಂದು ವೇಳೆ ದೂರದೃಷ್ಟಿ, ದೂರಶ್ರವಣ ಸಂಜಯನು ಹೊಂದಿರಬಹುದು. ಆ ವಿಷಯ ಶ್ರೀಕೃಷ್ಣನಿಗೆ ತಿಳಿಯದಂತೆಯೇ ಸಂಜಯನು ಯುದ್ಧರಂಗದಲ್ಲಿನ ಪ್ರತಿ ವಿಷಯವನ್ನು ಧೃತರಾಷ್ಟ್ರನಿಗೆ ತಿಳಿಸುತ್ತಿದ್ದಾನೆಂದುಕೊಳ್ಳೋಣ. ವಿಶ್ವರೂಪ ಸಂದರ್ಶನ ಸಮಯದಲ್ಲಿ **"ಪ್ರಕೃತಿ ಕಣ್ಣುಗಳಿಂದ ನನ್ನ ವಿಶ್ವರೂಪವನ್ನು ನೋಡಲಾರೆ, ನನ್ನೊಂದರ ವಿಶ್ವರೂಪ ಜ್ಞಾನನೇತ್ರಗಳಿಗೆ ಮಾತ್ರವೇ ಗೋಚರಿಸುತ್ತದೆ. ದೇವತೆಗಳೂ ಸಹ ಇಲ್ಲಿಯವರೆಗೂ ನೋಡದ ನನ್ನ ವಿಶ್ವರೂಪವನ್ನು ನಿನಗೆ ಮಾತ್ರ ತೋರಿಸುತ್ತೇನೆ. ವಿಶ್ವರೂಪವನ್ನು ನೋಡುವುದಕ್ಕೆ ಜ್ಞಾನನೇತ್ರವನ್ನು ಕೊಡುತ್ತಿದ್ದೇನೆ"** ಎಂದು ಶ್ರೀಕೃಷ್ಣನು ಹೇಳಿ ಪ್ರತ್ಯೇಕವಾದ ಜ್ಞಾನದೃಷ್ಟಿಯನ್ನು ಕೊಟ್ಟು ಅರ್ಜುನನಿಗೆ ಮಾತ್ರ ತೋರಿಸಿದಾಗ, ಸಂಜಯನು ಯಾವ ದೃಷ್ಟಿಯಿಂದ ವಿಶ್ವರೂಪವನ್ನು ನೋಡಿ ಧೃತರಾಷ್ಟ್ರನಿಗೆ ತಿಳಿಸಿದ್ದಾನೆ? ಎನ್ನುವುದು ಪ್ರಶ್ನೆ. ಅರ್ಜುನನ ಜೊತೆಯಲ್ಲಿಯೆ ಸಂಜಯನೂ ಸಹ ವಿಶ್ವರೂಪ ನೋಡಿದಾಗ, ಯಾರೂ ನೋಡದಿರುವುದನ್ನು ನಿನಗೆ ಮಾತ್ರವೇ ತೋರಿಸುತ್ತಿದ್ದೇನೆಂದು ಶ್ರೀಕೃಷ್ಣನು ಏಕೆ ಹೇಳಿದ್ದಾನೆ? ಹೀಗೆ ಆದಿಯಲ್ಲಿಯೇ ಭಗವದ್ಗೀತೆ ಪ್ರಶ್ನಾಮಯವಾಗಿದೆ. ಪ್ರಶ್ನೆಗಳ ರೂಪದಲ್ಲಿ ಯೋಚಿಸುವವರಿಗೆ ಸತ್ಯವಾದ ಸಮಾಧಾನ ಏನೆಂಬುವುದು ನಾವು ನೋಡಬೇಕು.

ಹೀಗೆ ಯೋಚಿಸುತ್ತಾ ಹೋದರೆ ಗೀತೆಯಲ್ಲಿನ ಸತ್ಯಗಳು, ರಹಸ್ಯಗಳು ಹೊರಬೀಳುತ್ತವೆ. ಭಗವಂತನು ಹೇಳಿದ ಮಾತುಗಳು ಎಷ್ಟೋ ಸಂದರ್ಭಗಳಲ್ಲಿ, ಎಷ್ಟೋ ವಿಧಗಳಾಗಿ ಬದಲಾಗಿ, ಕೊನೆಗೆ ಏಳುನೂರು ಶ್ಲೋಕಗಳ ರೂಪದಲ್ಲಿ ಗೀತೆ ನಿಂತಿದೆ. ಈ ದಿನ ನಮ್ಮ ಮುಂದಿರುವ ಭಗವದ್ಗೀತೆಗು, ಆ ದಿನ ಶ್ರೀಕೃಷ್ಣನು ಹೇಳಿದ ಭಗವದ್ಗೀತೆಗು ಏನಾದರೂ ಬದಲಾವಣೆ ಇದೆಯಾ ಎಂದು ಯೋಚಿಸಿದರೆ, ಎಲ್ಲಾ ವಿಧಗಳಾದ ಪ್ರಶ್ನೆಗಳಿಗೆ ಸಮಾಧಾನ ದೊರೆಯುತ್ತದೆ. ಆ ಯೋಚಿಸುವುದೇನೋ ನಿರೂಪಣಾತ್ಮಕವಾಗಿ, ಶಾಸ್ತ್ರಬದ್ಧ ವಾಗಿರುವಾಗ ಅಸಲಾದ ಸತ್ಯಗಳು ಹೊರಬೀಳಬಲ್ಲವು. ಆಗ ಎಲ್ಲವುಗಳಿಗೂ ಸಮಾಧಾನಗಳು ದೊರೆಯುತ್ತವೆ. ಈ ವಿಧಾನದಿಂದ ಯೋಚಿಸಿದಾಗಲೇ ಯುದ್ಧರಂಗದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಎಷ್ಟು ಸಮಯ ಬೋಧಿಸಿದ್ದಾನೆಂಬ ಪ್ರಶ್ನೆಗೆ ಸಮಾಧಾನವೂ ಸಹ ಲಭ್ಯವಾಗುತ್ತದೆ.

ಬರೆಯುವುದಕ್ಕೆ ಕೈಲಾಗದೆ ಅಥವಾ ಓದು ಬಾರದ ಒಬ್ಬ ವ್ಯಕ್ತಿ ಇನ್ನೊಂದು ಊರಿನಲ್ಲಿರುವ ತನ್ನ ಸಂಬಂಧಿಕನಿಗೆ ಸಮಾಚಾರ ತಿಳಿಸಬೇಕೆಂದು ಕೊಂಡಾಗ, ಸಮಾಚಾರವನ್ನು ಬರೆಯುವಂತಹ ವ್ಯಕ್ತಿ ಹತ್ತಿರಕ್ಕೆ ಹೋಗಿ ಉತ್ತರವನ್ನು ಬರೆದುಕೊಡು ಎಂದು ಕೇಳುತ್ತಾನೆ. ಬರೆಯುವುದಕ್ಕೆ ಆ ವ್ಯಕ್ತಿ ಒಪ್ಪಿಕೊಂಡಾಗ ಸಮಾಚಾರ ಹೇಳುವವನು ಹೇಳಬೇಕಾದ ಮುಖ್ಯವಾದ ವಿಷಯವನ್ನು ಹೇಳಿ ಸುಮ್ಮನಿರುತ್ತಾನೆ. ಆ ವಿಷಯವನ್ನು ಕೇಳಿದಾತನು ಅದನ್ನು ಹೇಗೆ ಹೊಂದಿಸಿ ಬರೆದರೆ ಓದಿಕೊಳ್ಳುವವನು, ಸುಲಭವಾಗಿ ತಿಳಿದುಕೊಳ್ಳುತ್ತಾ ನೆಂದು ಯೋಚಿಸಿ, ಆ ವ್ಯಕ್ತಿ ಅರ್ಥಮಾಡಿಕೊಳ್ಳುವುದಕ್ಕೆ ತಕ್ಕ ವಿಧಾನದಲ್ಲಿರುವಂತೆ ಮತ್ತು ಮೊದಲು ಕ್ಷೇಮ ಸಮಾಚಾರಗಳು ಕೇಳಿದಂತೆ, ಕೊನೆಯಲ್ಲಿ ಮುಕ್ತಾಯವನ್ನು ತಿಳಿಸುತ್ತಾ ಹೊಂದಿಸಿ ಬರೆಯುತ್ತಾನೆ. ಹೇಳಿದವನು ವಿಷಯ ಒಂದು ಹೇಳಿದರೂ ಬರೆಯುವವನು ಅದಕ್ಕೊಂದು ಪದ್ಧತಿ, ಸಾಲು, ಅಂದ, ಅರ್ಥವನ್ನು ಹೊಂದಿಸಿ ಬರೆದಂತೆ ಭಗವಂತನು ಹೇಳಿದ ಮೂಲ ಸಾರಾಂಶ ವಿಷಯವನ್ನು ವ್ಯಾಸನು ಶ್ಲೋಕಗಳ ರೂಪದಲ್ಲಿ ಬದಲಾಯಿಸಿ ಬರೆದಿದ್ದಾನೆ.

ಭಗವಂತನು ಹೇಳಿದ ವಿಷಯ ಚಿಕ್ಕದಾದರೂ ಅದು ಅರ್ಥವಾಗುವುದಕ್ಕೆ ಅನೇಕ ಶ್ಲೋಕಗಳಾಗಿ, ಅನೇಕ ಅಧ್ಯಾಯಗಳಾಗಿ ವ್ಯಾಸನು ಬರೆಯುವುದರಿಂದ ಏಳುನೂರು ಶ್ಲೋಕಗಳ ಗ್ರಂಥವಾದ ಗೀತೆ ನಮ್ಮ ಮುಂದಿದೆ. ಎಲ್ಲ ಶ್ಲೋಕಗಳ ಸಾರಾಂಶವನ್ನು ಪರಿಶೀಲಿಸಿ ನೋಡಿದರೆ ಮೂಲ ವಿಷಯ ಬಹಳ ಸ್ವಲ್ಪವಿದ್ದಂತೆ ತಿಳಿಯುತ್ತದೆ. ಎಲ್ಲ ಅಧ್ಯಾಯಗಳನ್ನು ಹಿಂಡಿ ನೋಡಿದರೆ ಸಾರಾಂಶ ಸ್ವಲ್ಪವೇ. **"ಸರ್ವವೂ ವ್ಯಾಪಿಸಿರುವವನು ನಾನೊಬ್ಬನೇ"** ಎನ್ನುವ ಮಾತಿಗೆ ವಿಭೂತಿ ಯೋಗವೆಂಬ ಅಧ್ಯಾಯದಲ್ಲಿ 42 ಶ್ಲೋಕಗಳನ್ನು ಹೇಳಲಾಗಿದೆ. **"ಸರ್ವವೂ ನಾನೇ"** ಎನ್ನುವ ವಿಷಯವನ್ನು ಸೂಚಿಸುವುದಕ್ಕೆ 42 ಶ್ಲೋಕಗಳು ಬರೆಯಲ್ಪಟ್ಟರೆ 700 ಶ್ಲೋಕಗಳಲ್ಲಿರುವ ಭಾವನೆ ಕೆಲವು ನಿಮಿಷಗಳಲ್ಲಿ ಮಾತನಾಡುವ ಮಾತುಗಳಿಗಿಂತ ಮೀರಿ ಇರುವುದಿಲ್ಲ. ಚಿಕ್ಕ ವಿಷಯವನ್ನು ಉದ್ದವಾದ ಉತ್ತರ ಬರೆದುಕೊಂಡಂತೆ, ಶ್ರೀಕೃಷ್ಣನ ಚಿಕ್ಕ ಸಂದೇಶವನ್ನು ವ್ಯಾಸನು ದೊಡ್ಡದಾಗಿ ಬರೆದು ತೋರಿಸಿದ್ದಾನೇ ಹೊರತು ಇಷ್ಟು ಉದ್ದವಾದ ಭಗವದ್ಗೀತೆಯ ಬೋಧನೆ ರಣರಂಗದಲ್ಲಿ ನಡೆಯಲಿಲ್ಲ. ನಡೆಯುವುದಕ್ಕೆ ಸಮಯವೂ ಇಲ್ಲ. ವ್ಯಾಸನಿಂದ ಬರೆಯಲ್ಪಟ್ಟ ಇಷ್ಟು ದೊಡ್ಡ ಭಗವದ್ಗೀತೆ ಮಾನವರಿಗೆ ಸುಲಭವಾಗಿ ಅರ್ಥವಾಗುವುದಕ್ಕೆ ಹೊರತು ಬೇರೆ ಉದ್ದೇಶ ಇಲ್ಲವೆಂದು ತಿಳಿಯಬೇಕು.

ಸಂಜಯನು ಹೇಗೆ ಯುದ್ಧರಂಗದಲ್ಲಿನ ವಿಷಯವನ್ನು ಧೃತರಾಷ್ಟ್ರನಿಗೆ ತಿಳಿಸಿದ್ದಾನೆಂಬುವುದು ಗೀತೆಯಲ್ಲಿನ ಮೊದಲ ಪ್ರಶ್ನೆ. ಒಂದು ವೇಳೆ ಸಂಜಯನು ಶ್ರೀ ಕೃಷ್ಣನ ಸಂದೇಶವನ್ನು ಆತನ ವಿಶ್ವರೂಪವನ್ನು ತಿಳಿದುಕೊಂಡಿದ್ದಾನೆಂದುಕೊಳ್ಳೋಣ. ಆಗ ಅರ್ಜುನನಿಗೆ ಅಲ್ಲದೆ ಆ ವಿಷಯ ಸಂಜಯನಿಗೂ, ಧೃತರಾಷ್ಟ್ರನಿಗೂ ಸಹ ತಿಳಿದಂತಾಗುತ್ತದೆ. ಹಾಗೆ ಯುದ್ಧರಂಗದ ಪ್ರಾರಂಭ ದಲ್ಲಿಯೇ ಶ್ರೀ ಕೃಷ್ಣನು ಇಂತಹವನೆಂದು ತಿಳಿದಿದ್ದರೆ ಸಂಜಯ ಧೃತರಾಷ್ಟ್ರನು ಇಬ್ಬರು ಯುದ್ಧರಂಗದೊಳಗೇ ಸರಾಸರಿ ಓಡಿಹೋಗಿ ಯುದ್ಧವನ್ನು ನಿಲ್ಲಿಸುತ್ತಿದ್ದರು. ಅದೂ ಅಲ್ಲದೇ ಗೀತಾ ಬೋಧನೆಯನ್ನು ಸಂಜಯನು ಕೇಳಿದ್ದರೆ **"ನಿನಗೆ ಹೊರತು"** ಎಂದು ಭಗವಂತನು ಅರ್ಜುನನ ಹತ್ತಿರ ಹೇಳಿದ ಮಾತೇ

ಅಸತ್ಯವಾಗುತ್ತದೆ. ಭಗವಂತನ ಮಾತು ಎಂದಿಗೂ ಅಸತ್ಯ ಆಗುವುದಿಲ್ಲ. ಸಂಜಯನು ಗೀತೆಯನ್ನು ಕೇಳಿದ್ದಾನೆಂಬ ಮಾತೇ ಅಸತ್ಯವೆಂದರೆ ಸಂಜಯನು ಕೇಳಿ ಹೇಳದೇ ಹೋದರೆ ಭಗವದ್ಗೀತೆಯೇ ಇಲ್ಲ! ಎನ್ನುವ ಸಂಶಯ ಏರ್ಪಡುತ್ತದೆ. ಮುಂದೆ ಬಾವಿ ಹಿಂದೆ ಕೆರೆಯಂತೆ ಇರುವ ಈ ಪ್ರಶ್ನೆಗೆ ಸಮಾಧಾನ ಸಿಗಲಿಲ್ಲವೆಂದರೆ ಇಲ್ಲಿಯವರೆಗೂ ನಾವು ಗೀತೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ತಿಳಿಯುತ್ತದೆ. ಗೀತೆ ಅಡೆತಡೆ ಮಾರ್ಗದಲ್ಲಿ ಅರ್ಥವಾಗಿದೆ ಆದರೆ, ಸಂಶಯರಹಿತವಾದ ಮಾರ್ಗದಲ್ಲಿ ಅರ್ಥವಾಗಲಿಲ್ಲ ಎಂದು ತಿಳಿಯುತ್ತದೆ. ಇಂತಹ ಪ್ರಶ್ನೆಗಳಿಗೆ ಉತ್ತರ ಹೇಳಲಾರದ ಸ್ಥಿತಿಯಲ್ಲಿ ತಾವಿದ್ದೂ, ಪ್ರಜೆಗಳ ದೃಷ್ಟಿಯಲ್ಲಿ ತಿಳಿದವರಂತೆ ಚಲಾವಣೆಯಾಗುತ್ತಿರುವ ಕೆಲವರು ನಿಮ್ಮ ಜ್ಞಾನ ಎಂತಹದೆಂದು ನಮ್ಮನ್ನು ಅವಹೇಳನವಾಗಿ ಮಾತನಾಡುವುದೂ ಸಹ ನಡೆದಿದೆ. ಹಾಗೆ ಅವರು ನಮ್ಮನ್ನು ಅವಹೇಳನ ಮಾಡಿದರೂ ಪರವಾಗಿಲ್ಲ. ಅವರ ಮೂಲವಾಗಿ ಪ್ರಜೆಗಳು ಗೀತೆಯನ್ನು ಸರಿಯಾದ ಮಾರ್ಗದಲ್ಲಿ ಅರ್ಥಮಾಡಿಕೊಳ್ಳದೆ ಹೋಗಿದ್ದಾರೆಂಬುವುದೇ ನಮ್ಮ ನೋವು. ಇಲ್ಲಿಯವರೆಗೂ ಸತ್ಯವಾದ ವಿಷಯಗಳು ಯಾರ ಬಲಹೀನತೆಯಿಂದ ಹೊರಗೆ ಬರಲಿಲ್ಲವೊ ಪ್ರಜೆಗಳು ಗ್ರಹಿಸಬಲ್ಲರು. ಬ್ರಹ್ಮವಿದ್ಯೆಯಲ್ಲಿ ಸತ್ಯವನ್ನು ಅನ್ವೇಷಿಸುವವರಿಗೆ, ಹೇತುವಾದಿಗಳಿಗೆ ಇಲ್ಲಿಯವರೆಗೂ ಬಹಳ ಕಡೆ ಲಭಿಸಿದ ಜ್ಞಾನದಲ್ಲಿ ಅವರಲ್ಲಿ ಉದ್ಭವಿಸಿದ ಪ್ರಶ್ನೆಗಳಿಗೆ ಉತ್ತರಗಳು ಸಿಗದೇ ಎಷ್ಟೋ ಜನ ನಾಸ್ತಿಕರಾಗಿದ್ದಾರೆ. "ನಮ್ಮ ಪ್ರಶ್ನೆಗಳಿಗೆ ಉತ್ತರಗಳು ಇಲ್ಲ. ಎಲ್ಲ ಬೂಟಾಟಿಕೆ, ಮಾತುಗಳಿಂದ ಮರುಳು ಮಾಡುವುದು ಹೊರತು ಮತ್ತೇನು ಇಲ್ಲ. ದೇವರ ಹೆಸರು ಹೇಳುತ್ತಾ ಸಂಶಯಗಳಿಂದ ಕೂಡಿಕೊಂಡ ಜ್ಞಾನ ಹೇಳುತ್ತಿದ್ದಾರೆ" ಎಂದು ನಾಸ್ತಿಕರು ಅನ್ನುತ್ತಿದ್ದಾರೆ.

ಅಂತಹ ನಾಸ್ತಿಕರೂ ಸಹ ನಮ್ಮ ಜ್ಞಾನದ ಮೂಲಕ ಅವರ ಪ್ರಶ್ನೆಗಳಿಗೆ ಉತ್ತರಗಳು ತೆಗೆದುಕೊಂಡು, ಈ ಪದ್ಧತಿ ಪ್ರಕಾರವಾದರೆ ದೇವರಿದ್ದಾರೆಂದು ಒಪ್ಪಿಕೊಳ್ಳುತ್ತಿರುವಾಗ ಉಳಿದವರು ಅವಹೇಳನ ಮಾಡಿದರೂ ಪರವಾಗಿಲ್ಲ.

ಬಹಳಜನ ಗೀತೆ ರಚನಕಾರರು ನಾವು ಕೇಳುವ ಪ್ರಶ್ನೆಗಳಿಗೆ ಉತ್ತರ ಹೇಳಲಾರರು. ಏಕೆಂದರೆ ಗೀತೆಯಲ್ಲಿ ವಿಶ್ವರೂಪಕ್ಕೆ ಆಕಾರವನ್ನು ಕಲ್ಪಿಸಿ ಹೇಳಿದ್ದಾರೆ. ಅಲ್ಲಿ ಅವರು ಹೇಳಿದಂತೆ ಕೋರೆಗಳು, ಮುಖ, ಬಾಯಿಯನ್ನು ಹೀಗೆ ಚಿತ್ರಿಸಿಕೊಳ್ಳುತ್ತಾ ಹೋದರೆ ಪರಮಾತ್ಮನ ರೂಪ ವಿಕೃತವಾದ ದೊಡ್ಡ ಪಿಶಾಚಿ ಆಕಾರವನ್ನು ಹೋಲಿರುತ್ತದೆ. ಅಂತಹದ್ದಾ ಪರಮಾತ್ಮನ ಆಕಾರ? ಇದಕ್ಕೇನು ಸಮಾಧಾನ ಹೇಳಬಲ್ಲರು? ದೇವರು ಹೇಳಿದ **'ಚಾತುರ್ವರ್ಣ್ಯಮ್'** ಎನ್ನುವ ಮಾತಿಗೆ ವಿವರ ಬ್ರಾಹ್ಮಣ, ವೈಶ್ಯ, ಕ್ಷತ್ರಿಯ, ಶೂದ್ರರೆಂದು ಕುಲಮತಗಳ ಹೆಸರು ಹೇಳಿ ಕುಲಗಳ ಭೇದಗಳನ್ನು ಉಂಟುಮಾಡುವ ಅಜ್ಞಾನಿಗಳ ಮಾತುಗಳಂತೆ ದೇವರ ಮಾತುಗಳನ್ನು ಕಲ್ಪಿಸಿದ್ದಾರೆ. ಅವರ ಮಾತುಗಳ ಪ್ರಕಾರ ಭೂಮಿ ಮೇಲೆ ಹಿಂದೂಮತಕ್ಕೇ ಸಂಬಂಧವಿಲ್ಲದ ಮತಗಳಲ್ಲಿನ ಮನುಜರಲ್ಲಿ ಮೇಲೆ ಹೇಳಿದ ನಾಲ್ಕು ಕುಲಗಳು ಇಲ್ಲವೆ! ಅವರನ್ನು ಯಾವ ದೇವರು ಸೃಷ್ಟಿಸಿದ್ದಾನೆ? ಪ್ರಪಂಚಕ್ಕೆಲ್ಲ ಒಬ್ಬನೇ ದೇವರಾದಾಗ ಚಾತುರ್ವರ್ಣ್ಯವೆಂಬ ಮಾತು ಅವರಿಗೆ ಅನ್ವಯಿಸುವುದಿಲ್ಲವೇ? ಈ ನಾಲ್ಕುಕುಲಗಳಿಲ್ಲದ ದೇಶಗಳೆಷ್ಟೋ ಇವೆ. ಅವರನ್ನು ಸೃಷ್ಟಿಸಿದವನು ಯಾರೆಂದು ಹೇಳಬಲ್ಲಿರ?

ಗೀತೆಯಲ್ಲಿ ಜ್ಞಾನಯೋಗವೆಂಬ ಅಧ್ಯಾಯದ ಪ್ರಾರಂಭದಲ್ಲಿ ಆದಿಯಲ್ಲಿಯೇ ಸೂರ್ಯನಿಗೆ ಹೇಳಿದ್ದೇನೆಂದು ಭಗವಂತನು ಹೇಳಿದಾಗ, ಸೂರ್ಯನೊಬ್ಬ ಮನುಷ್ಯನು ಅಲ್ಲ ಅಲ್ಲವೆ! ಅದು ಒಂದು ಗೋಳ ತಾನೆ! ಅಂತಹ ಗೋಳಕ್ಕೆ ಹೇಗೆ ಹೇಳಿದ್ದಾನೆ? ಎಷ್ಟೋ ದೂರದಲ್ಲಿರುವ ಸೂರ್ಯನು ಹೇಗೆ ಕೇಳಿದ್ದಾನೆ? ಎಂಬ ಪ್ರಶ್ನೆಗೆ ಉತ್ತರ ಹೇಳಬಲ್ಲಿರಾ? ಪ್ರಕೃತಿಯಿಂದ ಹುಟ್ಟಿರುವುದು, ಪ್ರಕೃತಿ ಸಂಬಂಧವಾದುದು ಶರೀರವೆಂದು, ಶರೀರದಲ್ಲಿನ ಚಲನಶಕ್ತಿ ಪುರುಷನಾದ ಪರಮಾತ್ಮನದೆಂದು, ಗುಣತ್ರಯ ವಿಭಾಗಯೋಗದಲ್ಲಿ 3, 4 ಶ್ಲೋಕಗಳಲ್ಲಿರುವಾಗ, ಪಕ್ಕದ ಅಧ್ಯಾಯವಾದ ಪುರುಷೋತ್ತಮ ಪ್ರಾಪ್ತಿಯೋಗದಲ್ಲಿ 16, 17 ಶ್ಲೋಕಗಳಲ್ಲಿ ಕ್ಷರ ಅಕ್ಷರ ಪುರುಷೋತ್ತಮರಾಗಿ ಪುರುಷನನ್ನು ಮೂರು ವಿಭಾಗಗಳಾಗಿ ಮಾಡಿ ಹೇಳಿರುವಾಗ, ಆ ಶ್ಲೋಕಗಳ

ವಿವರ ಕೇವಲ ಪುರುಷನಿಗೇ ಹೇಳದೆ ಪ್ರಕೃತಿಗೆ ಸಂಬಂಧಪಟ್ಟ ಶರೀರವನ್ನು ಏಕೆ ತೆಗೆದುಕೊಂಡಿದ್ದಾರೆಂದು ಕೇಳಿದರೆ ಉತ್ತರ ಹೇಳುತ್ತೀರಾ? ಇಲ್ಲಿಯವರೆಗೂ ಎಷ್ಟೋಜನರಿಂದ ಬರೆಯಲ್ಪಟ್ಟ ಗೀತೆಗಳಲ್ಲಿ ಇಂತಹ ಪ್ರಶ್ನೆಗಳಾಗಿ ಉಳಿದಿರುವ ವಿಷಯಗಳೆಷ್ಟೋ ಇವೆ, ಆದ್ದರಿಂದ ಈಗಲಾದರೂ ಎಚ್ಚರಗೊಂಡು, ಪವಿತ್ರವಾದ ಕಾಲವನ್ನು ವ್ಯರ್ಥಮಾಡದೇ, ಜ್ಞಾನ ಸಮುದ್ರದಂತಹದೆಂದು, ಅದರಲ್ಲಿ ಇನ್ನೂ ನಮಗೆ ತಿಳಿಯದ ವಿಷಯಗಳೆಷ್ಟೋ ಇವೆಯೆಂದು, ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸೋಣ.

ದೂರವಾಗಿ ಕುರುಕ್ಷೇತ್ರದಲ್ಲಿ ನಡೆಯುವ ಯುದ್ಧವನ್ನು ಸಂಜಯನು ನೋಡುತ್ತಿದ್ದಾನೆಂದುಕೊಳ್ಳೋಣ. ಅಲ್ಲಿ ಆತನಿಗೆ ಕಾಣಿಸಿರುವುದು ಕೇವಲ ಪ್ರಕೃತಿ ದೃಶ್ಯ. ಅಲ್ಲಿರುವ ಮನುಷ್ಯರು, ಆನೆಗಳು, ಕುದುರೆಗಳು, ರಥಗಳೇ ಕಾಣಿಸುತ್ತವೆ. ಈ ದಿನ ನಾವು ನೋಡಿದರೆ ಹತ್ತಿರ ಇರುವವು ಮಾತ್ರ ಕಾಣಿಸುತ್ತವೆ. ಆದಿನ ಸಂಜಯನು ನೋಡಿದಾಗ ಹತ್ತಿರ ಇರುವವಲ್ಲದೆ ದೂರ ಇರುವವೂ ಸಹ ಕಾಣಿಸಿವೆಯಂತೆ. ಹಾಗೆ ನೋಡುವ ಶಕ್ತಿ ಆ ದಿನ ಸಂಜಯನಿಗೆ ಇತ್ತೆಂದುಕೊಳ್ಳೋಣ. ದೂರವಾಗಿ ಯುದ್ಧರಂಗದಲ್ಲಿರುವ ಅರ್ಜುನನು ಮತ್ತು ಶ್ರೀಕೃಷ್ಣನು ಕಾಣಿಸಿರಬಹುದು. ಆದರೆ ಅಂತರಂಗದಲ್ಲಿ ಒಳದೃಷ್ಟಿಯಾದ ಜ್ಞಾನ ದೃಷ್ಟಿಗೆ ಕಾಣಿಸುವ ಪರಮಾತ್ಮನ ದರ್ಶನ ಹೇಗೆ ಕಾಣಿಸಿದೆ? ಸಂಜಯನು ಯುದ್ಧ ರಂಗದಲ್ಲಿ ಪ್ರಾರಂಭದಿಂದ ನೋಡಿದ್ದಾನೆಂದಾಗ ಪ್ರಕೃತಿ ಸಂಬಂಧವಾದ ಹೊರಗಿನ ದೃಶ್ಯಗಳೇ ಕಾಣಿಸಿರುತ್ತವೆ, ಆದರೆ ಪರಮಾತ್ಮ ದರ್ಶನ ಕಾಣಿಸಿರುವುದಿಲ್ಲವೆಂದು ತಿಳಿಯುತ್ತಿದೆ.

ಇಲ್ಲಿ ಕೆಲವರಿಗೆ ಒಂದು ಅನುಮಾನವೂ ಸಹ ಬರಬಹುದು. ಅದು ಏನೆಂದರೆ! ಶ್ರೀಕೃಷ್ಣನು ರಾಯಭಾರಕ್ಕಾಗಿ ಕೌರವಸಭೆಯೊಳಗೆ ಹೋದಾಗ, ಅಲ್ಲಿ ದುರ್ಯೋಧನ ದುಶ್ಯಾಸನರು ಮೊದಲಾದವರು ಹಗ್ಗದಿಂದ ಬಂಧಿ ಸಬೇಕೆಂದು ಬಂದಾಗ, ಒಂಟಿಯಾದ ಶ್ರೀಕೃಷ್ಣನು ಅವರ ಹಗ್ಗಗಳಿಗೆ ಬಂಧಿಸಲ್ಪಡದೇ ವಿಶ್ವರೂಪ ತೋರಿಸಿದ್ದಾನೆ ಅಲ್ಲವೆ! ಆಗ ಕಣ್ಣುಗಳು ಮಿರಮಿರ

ಹೊಳೆಯುವ ಆ ರೂಪವನ್ನು ನೋಡಲಾರದೆ ಅವರು ಕೆಳಗೆ ಬಿದ್ದುಹೋಗಿ, ಆ ರೂಪವನ್ನು ನೋಡಬೇಕೆಂಬ ಧೃತರಾಷ್ಟ್ರನ ಕೋರಿಕೆಯ ಮೇರೆಗೆ ಶ್ರೀಕೃಷ್ಣನು ಆತನ ಅಂಧತ್ವವನ್ನು ತೆಗೆದುಹಾಕಿ ಕಣ್ಣುಗಳು ಕಾಣಿಸುವಂತೆ ಮಾಡಿದ್ದಾನೆಂದು, ಮತ್ತು ಆ ಕ್ಷಣವೇ ಧೃತರಾಷ್ಟ್ರನ ಹೆಂಡತಿ ಗಾಂಧಾರಿದೇವಿ ಸಹ ತನ್ನ ಕಣ್ಣುಗಳಿಗೆ ಕಟ್ಟಿಕೊಂಡ ವಸ್ತ್ರ ತೆಗೆದು ವಿಶ್ವರೂಪವನ್ನು ನೋಡಿದ್ದಾಳೆ ಎಂದು ಕೇಳಿದ್ದೇವೆ. ಆ ದಿನ ಎಲ್ಲರೂ ಸಾಮಾನ್ಯ ಕಣ್ಣುಗಳಿಂದಲೇ ತಾನೆ! ವಿಶ್ವರೂಪವನ್ನು ನೋಡಿರುವುದು. ಅಂತಹದರಲ್ಲಿ ಯುದ್ಧ ಸಮಯದಲ್ಲಿ ಅರ್ಜುನನಿಗೆ ತೋರಿಸಿದ ವಿಶ್ವರೂಪವನ್ನು ಸಂಜಯನು ಏಕೆ ನೋಡಿರುವುದಿಲ್ಲವೆಂದು ಕೇಳಬಹುದು. ಅದಕ್ಕೆ ನಮ್ಮ ಸಮಾಧಾನ ಏನೆಂದರೆ! ಅವರ ಮಾತಿನ ಪ್ರಕಾರ ದೂರವಾಗಿರುವ ಸಂಜಯನಿಗೇ ವಿಶ್ವರೂಪ ಕಾಣಿಸಿದ್ದರೆ ಅಲ್ಲಿಯೇ ಹತ್ತಿರದಲ್ಲಿರುವ ಸೈನ್ಯಕ್ಕೆ, ಇತ್ತ ಪಾಂಡವರಿಗೂ, ಅತ್ತ ಕೌರವರಿಗೂ ಎಲ್ಲರಿಗೂ ಕಾಣಿಸಿರಬೇಕು. ಹಾಗೆ ಎಲ್ಲರಿಗೂ ಕಾಣಿಸಿರುವಂತೆ ಯಾವ ಪುರಾವೆಯೂ ಇಲ್ಲ. ಹತ್ತಿರ ಇರುವವರಿಗೇ ಕಾಣಿಸದ ವಿಶ್ವರೂಪ ದೂರದಲ್ಲಿರುವ ಸಂಜಯನಿಗೆ ಕಾಣಿಸಿದೆಯೆನ್ನುವುದು ಅಸತ್ಯ. ಹಾಗೇ ರಾಯಭಾರದಿಂದ ವಿಶ್ವರೂಪವನ್ನು ಕೆಲವರು ನೋಡುವುದು, ಕೆಲವರು ನೋಡದಂತೆ ಹೋಗಿದ್ದಾರೆಂಬ ಮಾತು ಕೇವಲ ಅಭೂತ ಕಲ್ಪನೆಯೇ ಹೊರತು ನಿಜವಲ್ಲ. ಆತ್ಮ ಪರಮಾತ್ಮರು ಇಂದ್ರಿಯಗಳಿಗೆ ಅಗೋಚರವಾದವು. ಕಣ್ಣಿಗೆ ಕಾಣಿಸುವುದಿಲ್ಲ, ಕಿವಿಗಳಿಗೆ ಕೇಳಿಸುವುದಿಲ್ಲವೆಂದು ಭಗವಂತನು ಗೀತೆಯಲ್ಲಿಯೇ ತಿಳಿಸಿದ್ದಾನೆಂದು ಮರೆಯಬಾರದು. ಹಾಗೆ ತಿಳಿಸಿರುವಾಗ ಪರಮಾತ್ಮ ಸ್ವರೂಪವಾದ ವಿಶ್ವರೂಪ ಕಣ್ಣಿಗೆ ಕಾಣಿಸಿದೆ ಎನ್ನುವುದು ಧರ್ಮವಿರುದ್ಧವಾದ ಮಾತು. ಕಾಣಿಸಿದೆಯೆಂದು ಹೇಳುವವರಿದ್ದರೆ ಭಗವದ್ಗೀತೆ ರಾಜವಿದ್ಯಾ ರಾಜಗುಹ್ಯ ಯೋಗವೆಂಬ ಅಧ್ಯಾಯದಲ್ಲಿ ನಾಲ್ಕನೆಯ ಶ್ಲೋಕದಲ್ಲಿ "**ಮಯಾತತ ಮಿದಂ ಸರ್ವಂ ಜಗದವ್ಯಕ್ತ ಮೂರ್ತಿನಾ**" "ಇಂದ್ರಿಯಗಳಿಗೆ ಗೋಚರಿಸದೇ ಈ ಪ್ರಪಂಚವೆಲ್ಲಾ ನಾನು ವ್ಯಾಪಿಸಿದ್ದೇನೆ." ಎಂದು ಧರ್ಮಯುಕ್ತವಾಗಿ ಹೇಳಿದ ಭಗವಂತನ ಮಾತಿಗೇ ವಿರುದ್ಧವಾಗಿ ಹೇಳಿದವರಾ ಗುತ್ತಾರೆ. ಆದ್ದರಿಂದ ಗೀತೆಯನ್ನು ಜಾಗ್ರತೆಯಿಂದ ಪರಿಶೀಲಿಸಿ ಧರ್ಮಬದ್ಧವಾಗಿ

ಹೇಳಬೇಕೆಂದರೆ, ಸಂಜಯನು ತನ್ನ ಕಣ್ಣುಗಳಿಂದ ವಿಶ್ವರೂಪವನ್ನು ನೋಡಲಿಲ್ಲ. ರಾಯಭಾರದಲ್ಲಿ ವಿಶ್ವರೂಪವನ್ನು ತೋರಿಸುವುದಕ್ಕೆ ಅದೇನಾದರು ಗಾರುಡಿ ವಿದ್ಯೆಯಂತಹದ್ದಾ! ಅಗತ್ಯಬಂದಾಗಲೆಲ್ಲಾ ವಿಶ್ವರೂಪ ತೋರಿಸಿದರೆ ಅದಕ್ಕೆ ಬೆಲೆ ಇರುತ್ತದಾ! ಹಾಗೆ ತೋರಿಸುವುದೇ ಆದರೆ ವಿಶ್ವರೂಪಸಂದರ್ಶನ ಯೋಗದಲ್ಲಿ 47ನೇ ಶ್ಲೋಕದಲ್ಲಿ **"ನೀನು ಹೊರತು ಮತ್ತ್ಯಾರು ಇದನ್ನು ನೋಡಿದವರು ಇಲ್ಲ"** ಎನ್ನುವ ಮಾತು ಪುನಃ 52ನೇ ಶ್ಲೋಕದಲ್ಲಿ **"ಅರ್ಜುನಾ ಈ ರೂಪವನ್ನು ನೋಡಬೇಕೆಂದು ದೇವತೆಗಳೂ ಸಹ ಕೋರಿಕೆಯಿಂದಿದ್ದಾರೆ ಆದರೂ ನಿನ್ನನ್ನು ಹೊರತು ಯಾರು ಇದನ್ನು ನೋಡಿದವರು ಇಲ್ಲ."** ಎಂಬ ಮಾತು ಕೆಲಸಕ್ಕೆ ಬಾರದಂತೆ ಹೋಗುತ್ತದೆ. ಅಂತಹದರಲ್ಲಿ ಭಗವಂತನು ಹೇಳಿದ ಮಾತು ನಿಜವಾ ಅಥವಾ ಮಾನವರು ಹೇಳಿದ ಮಾತು ನಿಜವಾ? ಎಂದು ಪರಿಶೋಧಿಸಿ ನೋಡಿದರೆ, ಭಗವಂತನು ಹೇಳಿರುವುದು ಸಿದ್ಧಾಂತ ಪರವಾದ ಶಾಸ್ತ್ರವಚನವೆಂದು, ಮಾನವನು ಹೇಳಿರುವುದು ನಿರೂಪಣೆಗೆ ಬಾರದ ಅಶಾಸ್ತ್ರೀಯವಚನವೆಂದು ತಿಳಿಯುತ್ತಿದೆ. ಹಾಗಲ್ಲದೆ ವಿಶ್ವರೂಪವನ್ನು ಯುದ್ಧರಂಗದಲ್ಲಿ ಸಂಜಯನು, ರಾಯಭಾರದಲ್ಲಿ ಉಳಿದವರು, ನೋಡಿದ್ದಾ ರೆಂದರೆ ಯಾರೂ ನೋಡಲಿಲ್ಲವೆಂಬ ಭಗವಂತನ ಮಾತು ಅಸತ್ಯವಾಗಿ ಒಟ್ಟಾರೆ ಭಗವದ್ಗೀತೆಯೇ ಅಸತ್ಯವಾಗುತ್ತದೆ.

ಪುರುಷನಾದ ಪರಮಾತ್ಮ, ಪ್ರಕೃತಿಯಾದ ಮಾಯೆಯೊಂದರ ರಹಸ್ಯಗಳು ತಿಳಿಯಬೇಕೆಂದರೆ ಬಹಳ ಕಷ್ಟ. ಎಲ್ಲಿ ಪುರುಷನಿದ್ದಾನೋ ಅಲ್ಲಿ ಪ್ರಕೃತಿಯೂ ಸಹ ಇದೆ. ಎಲ್ಲಿ ಧರ್ಮವಿದೆಯೋ ಅಲ್ಲಿಯೇ ಅಧರ್ಮವೂ ಸಹ ಇದೆ. ಹಾಗೆಯೇ ಧರ್ಮಗಳ ಸಂಗಮವಾದ ಭಗವದ್ಗೀತೆಯಲ್ಲಿಯೂ ಸಹ ಅಧರ್ಮದ ವಾಸನೆ ಇದ್ದೇ ಇದೆ.

ಆದ್ದರಿಂದ ಪೂರ್ತಿ ವಿವರಣೆ ಮಾಡಿದಾಗಲೇ ಅದರಲ್ಲಿನ ಧರ್ಮ ಗಳನ್ನು ಸ್ವೀಕರಿಸಿ ಅಧರ್ಮಗಳನ್ನು ಬಿಡುತ್ತೇವೆ. ಅಂತಹ ವಿವರದ ಪ್ರಕಾರ ನೋಡಿದರೆ ಗೀತೆಯನ್ನು 700 ಶ್ಲೋಕಗಳ ರೂಪವಾಗಿ ಭಗವಂತನು ಹೇಳಲಿಲ್ಲ.

ಮತ್ತು ಸಂಜಯನು ವಿಶ್ವರೂಪವನ್ನಾಗಲಿ, ಯುದ್ಧರಂಗದಲ್ಲಿನ ಪ್ರಕೃತಿ ದೃಶ್ಯವನ್ನಾಗಲಿ ನೋಡಲಿಲ್ಲ ಎಂದರೆ ಯುದ್ಧರಂಗದಲ್ಲಿ ನಡೆಯುತ್ತಿರುವ ಪ್ರತ್ಯಕ್ಷ ದೃಶ್ಯವನ್ನೂ ಸಹ ನೋಡಲಿಲ್ಲ. ಇಲ್ಲಿ ಕೆಲವರಿಗೆ ಆಶ್ಚರ್ಯ ಉಂಟಾಗಿ ಸಂಜಯನು ಹೇಳಿದಾಗ ಧೃತರಾಷ್ಟ್ರನು ಕೇಳಿದ ಮಾತುಗಳೇ ತಾನೆ ಭಗವದ್ಗೀತೆ ರೂಪವಾಗಿರುವುದೆಂಬ ಅನುಮಾನವನ್ನು ವ್ಯಕ್ತಮಾಡಬಹುದು. ಅದಕ್ಕೆ ನಮ್ಮ ಸಮಾಧಾನ ಏನೆಂದರೆ! ಭಗವದ್ಗೀತೆ ಕೇವಲ ಶ್ರೀಕೃಷ್ಣನು ಅರ್ಜುನನು ಮಾತನಾಡಿದ ವಿಷಯವೇ ಹೊರತು ಇತರರಿಗೆ ಯಾವ ಸಂಬಂಧವಿಲ್ಲ. ಹಾಗಲ್ಲದೆ ಗೀತೆ, ಸಂಜಯ ಧೃತರಾಷ್ಟ್ರರ ಸಂಭಾಷಣೆಯೇ ಆಗಿದ್ದರೆ ಗೀತೆಗೆ ಸಂಜಯ ಧೃತರಾಷ್ಟ್ರರ ಸಂವಾದವೆಂದು ಹೆಸರು ಬಂದಿರುತ್ತಿತ್ತು. ಶ್ರೀಕೃಷ್ಣಾರ್ಜುನ ಸಂವಾದವೆಂದು ಹೆಸರು ಬರುತ್ತಿರಲಿಲ್ಲ.

ಗೀತೆಯನ್ನು ಬರೆದ ವ್ಯಾಸನು ಸಂಜಯ ಧೃತರಾಷ್ಟ್ರ ಮಾತನಾಡಿದಂತೆ ಬರೆದಿದ್ದಾನೆ! ಇದು ಅಸತ್ಯವಾ? ಎಂದೂ ಸಹ ಕೆಲವರು ಕೇಳಬಹುದು. ಅದಕ್ಕೆ ನಮ್ಮ ಸಮಾಧಾನ ಏನೆಂದರೆ! ವ್ಯಾಸನು ಜಾಣ್ಮೆಯಿಂದ ಶ್ರೀಕೃಷ್ಣಾರ್ಜುನರು ಮಾತನಾಡಿದ ವಿಷಯವೆನ್ನುತ್ತಲೇ ಆ ವಿಷಯವನ್ನು ಸಂಜಯ ಧೃತರಾಷ್ಟ್ರರು ಮಾತನಾಡಿದಂತೆ ಚಿತ್ರೀಕರಿಸಿದ್ದಾನೆ. ಆ ದಿನ ವ್ಯಾಸನು ಹಾಗೆ ಮಾಡುವುದರಲ್ಲಿ ಒಂದು ವಿಶೇಷವಿದೆ. ಪ್ರಜೆಗಳು ಸುಲಭವಾಗಿ ಅರ್ಥ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದಲೇ ಸಂಜಯ ಧೃತರಾಷ್ಟ್ರರ ಪಾತ್ರಗಳು ಕಲ್ಪಿಸಿ ಸ್ವಲ್ಪಮಟ್ಟಿನ ಗೀತೆಯನ್ನು 700 ಶ್ಲೋಕಗಳ ರೂಪವಾಗಿ ಮಾಡಿದ್ದಾನೆ. ಒಳ್ಳೆಯದನ್ನು ಬೋಧಿಸುವುದಕ್ಕೆ ಚಿಕ್ಕ ಮಕ್ಕಳಿಗೆ ಗುಮ್ಮನನ್ನು ಕಲ್ಪಿಸಿ ಕಥೆ ಹೇಳಿದಂತೆ, ವ್ಯಾಸನು ಸ್ವಲ್ಪ ಉದ್ದವಾಗಿ ಕೆಲವು ಪಾತ್ರಗಳನ್ನು ಕಲ್ಪಿಸಿ ಹೇಳುವುದರಲ್ಲಿ ತಪ್ಪಿಲ್ಲ. ಆದರೂ ಚಿಕ್ಕ ಮಕ್ಕಳಿಗೆ ಹೇಳುವ ಕಥೆಯಲ್ಲಿ ಗುಮ್ಮನಪಾತ್ರ ಎಷ್ಟು ಅಸತ್ಯವೊ, ಗೀತೆಯಲ್ಲಿನ ಸಂಜಯ ಧೃತರಾಷ್ಟ್ರರ ಪಾತ್ರಗಳು ಮತ್ತು 700 ಶ್ಲೋಕಗಳ ಉದ್ದ ಅಷ್ಟೇ ಅಸತ್ಯವಾಗಿರುತ್ತದೆ.

ಕೆಲವರು ಹಿರಿಯರು ತಮ್ಮ ಜ್ಞಾನವನ್ನು ಪುಸ್ತಕ ರೂಪದಲ್ಲಿ ಬರೆಯುವಾಗ ಅದನ್ನು ಹೇಗೆ ಹೇಳಬೇಕೆಂದು ಯೋಚಿಸಿ, ಹೇಗೆ ಹೇಳಿದರೆ ಪ್ರಜೆಗಳು ನಂಬುತ್ತಾರೆಂದು ಆಲೋಚಿಸಿ, ಕೆಲವು ಪಾತ್ರಗಳು ಕಲ್ಪಿಸಿ, ಅವರ ಸಂಭಾಷಣೆಯ ರೂಪದಲ್ಲಿ ಬರೆದಿದ್ದಾರೆ. ಉದಾಹರಣೆಗೆ ಅಂತವುಗಳೇ **"ಸೀತಾ ರಾಮಾಂಜನೇಯ ಸಂವಾದ", "ಶ್ರೀ ಕೃಷ್ಣರುಕ್ಮಿಣಿ ಸಂವಾದ", "ಶಿವ ಪಾರ್ವತಿ ಸಂವಾದ", "ಗುರುಶಿಷ್ಯ ಸಂವಾದ",** ಮೊದಲಾದವು ಇವೆ. ಹೀಗೆ ಎಷ್ಟೋ ಸಂವಾದರೂಪವಾಗಿ ಬರೆಯಲ್ಪಟ್ಟಿವೆ. ಆದರೆ ನಿಜವಾಗಲು ಸೀತಾ ರಾಮಾಂಜ ನೇಯರು, ಶ್ರೀಕೃಷ್ಣರುಕ್ಮಿಣಿಯರು ಮಾತನಾಡಲಿಲ್ಲ. ಹಾಗೆಯೇ ಶಿವಪಾರ್ವತಿ ಯರು, ಗುರುಶಿಷ್ಯರು ಮೊದಲಾದ ಪಾತ್ರಗಳೆಲ್ಲ ಕಲ್ಪಿತವೆ ಎಂದು ತಿಳಿಯಬೇಕು. ಹಾಗೆ ಇಲ್ಲಿ ಸಂಜಯ ಧೃತರಾಷ್ಟ್ರರು ಸಹ ಕಲ್ಪಿತವೆ ಆಗುತ್ತಾರೆ.

ಈಗ ಭಗವಂತನು ಹೇಳಿದ ಗೀತೆ ವ್ಯಾಸನಿಗೆ ಹೇಗೆ ತಿಳಿದಿದೆಯೆಂಬ ಪ್ರಶ್ನೆಯೂ ಸಹ ಬರಬಹುದು. ಹಾಗೂ ಗೀತೆಯನ್ನು ವ್ಯಾಸನು ಯಾರಿಂದ ತಿಳಿದುಕೊಂಡಿದ್ದಾನೆನ್ನುವ ಪ್ರಶ್ನೆಯೂ ಸಹ ಬರಬಹುದು. ಅದಕ್ಕೆ ನಮ್ಮ ಸಮಾಧಾನವೇನೆಂದರೆ ಸಾವಧಾನವಾಗಿ ಪರಿಶೀಲಿಸಿ ನೋಡಿದರೆ ಶ್ರೀಕೃಷ್ಣನ ಮೂಲಕ ತಿಳಿದುಕೊಂಡ ಅರ್ಜುನನೇ ತಾನು ತಿಳಿದುಕೊಂಡ ವಿಷಯವನ್ನು ಯುದ್ಧದನಂತರ ಸ್ವಲ್ಪ ಕಾಲಕ್ಕೆ ವ್ಯಾಸನಿಗೆ ಸ್ವತಃವಾಗಿ ತಿಳಿಸಿರಬೇಕು. ಅರ್ಜುನನ ಮುಖಾಂತರ ತಿಳಿದುಕೊಂಡ ವಿಷಯವನ್ನು ಹಳೆ ವಿಷಯ ಎನಿಸದಂತೆ, ಆಗಲೇ ನಡೆಯುತ್ತಿರುವ ತಾಜಾ ವಿಷಯವೆನ್ನುವಂತೆ, ಸಂಜಯ ಧೃತರಾಷ್ಟ್ರರ ಪಾತ್ರಗಳು ಕಲ್ಪಿಸಿ ವ್ಯಾಸನು ಬರೆದಿದ್ದಾನೆ. ಹಾಗೆ ವ್ಯಾಸನು ಬರೆಯುವುದರಿಂದ ಯಾರಿಗೂ ಅನುಮಾನ ಬರಲಿಲ್ಲ. ಆಲೋಚಿಸದ ಬೋಧಕರೂ ಸಹ ಹಾಗೆಯೇ ಹೇಳುತ್ತಾ ಹೋಗಿದ್ದಾರೆ. ಪ್ರಜೆಗಳೆಲ್ಲ ಅದೇ ನಿಜವೆಂದುಕೊಂಡಿದ್ದಾರೆ. ಆದರೆ ಯೋಚಿಸುವ ಕೆಲವರಿಗೆ ಮಾತ್ರ ಗೀತೆ ಅಡ್ಡಗೀತೆಯಾಗಿ ತೋಚುತ್ತದೆ. ಆಲೋಚಿಸುವವರಿಗೆ ಸ್ವಲ್ಪ ಅಸತ್ಯ ಅದರಲ್ಲಿ ಕಾಣಿಸುತ್ತದೆ. ಜ್ಞಾನದೃಷ್ಟಿ ಇರುವವರಿಗೆ ಗೀತಾರೂಪವೇ ಬೇರೆಯಾಗಿ ಕಾಣಿಸುತ್ತಿದೆ. ಅವರೆಲ್ಲರು ಏನು ನಂಬಬೇಕೋ,

ಏನು ನಂಬಬಾರದೋ ತಿಳಿಯದೆ ನಾಸ್ತಿಕರಾಗಿ ಬದಲಾಗಿದ್ದಾರೆ. ಇಂತಹ ಅರ್ಥವಾಗದ ಸಮಯದಲ್ಲಿ ಗೀತೆ ಸತ್ಯವಾದುದೆಂದು, ಹೇತುಬದ್ಧವಾದು ದೆಂದು, ಅದರಲ್ಲಿನ ವಿಷಯಗಳು ಸಿದ್ಧಾಂತಪರವಾದ ಶಾಸನಗಳೆಂದು ಹೇಳುವುದು ನಮ್ಮ ಉದ್ದೇಶವಾಗಿದೆ.

ಸಂಜಯನಿಗೆ ಸಂಬಂಧವಿಲ್ಲವೆಂದು ಹೇಳುವುದರಿಂದ ಭಗವದ್ಗೀತೆ ನಿಜವಾಗಲು ಭಗವದ್ಗೀತೆಯೇ ಆಗುತ್ತದೆ. ಮಧ್ಯದಲ್ಲಿ ಸಂಜಯ ಗೀತೆ ಅಲ್ಲ. ಇದರಿಂದ ಭಗವದ್ಗೀತೆ ದೊಡ್ಡ ಸಂಚಲನೆಯನ್ನು ಸೃಷ್ಟಿಸಿದಂತಾಗಿದೆ. ಇಷ್ಟು ದೊಡ್ಡ ಬದಲಾವಣೆ (ತಿರುವು) ಮಾಡದಿದ್ದರೆ ಚಿಕ್ಕುಗಳಿರುವ ತಪ್ಪುದಾರಿ ಬಿಟ್ಟು, ಆತಂಕಗಳಿಲ್ಲದ ಒಳ್ಳೆಯ ದಾರಿಯೊಳಗೆ ಸೇರಿಕೊಳ್ಳಲಾರೆವು. ಆದ್ದರಿಂದ ಓದುವವರು ಬಹಳ ಜಾಗ್ರತೆಯಾಗಿ ಸತ್ಯಾಸತ್ಯಗಳನ್ನು ಯೋಚಿಸಿ ತಿಳಿದುಕೊಳ್ಳ ಬೇಕೆಂದು ಕೋರುತ್ತಿದ್ದೇವೆ.

ಈಗೊಂದು ವಿಪ್ಲವಾತ್ಮಕವಾದ ಪ್ರಶ್ನೆ ಹಾಕಿಕೊಳ್ಳೋಣ. ಅದು ಏನೆಂದರೆ! ಭಗವಂತನು ಹೇಳಿರುವುದು ಭಗವದ್ಗೀತೆ ಎಂದು ಅರ್ಥವಲ್ಲವೆ! ಅಂತಹದರಲ್ಲಿ ನಾವು ಓದುತ್ತಿರುವ ಭಗವದ್ಗೀತೆ 18 ಅಧ್ಯಾಯಗಳಾಗಿ ಇದೆ. ಅದರಲ್ಲಿ ಮೊದಲನೆ ಅಧ್ಯಾಯ ಅರ್ಜುನ ವಿಷಾದ ಯೋಗದಿಂದ ಪ್ರಾರಂಭವಾಗಿದೆ. ಅರ್ಜುನನ ವಿಷಾದಯೋಗವೂ ಸಹ ಭಗವದ್ಗೀತೆಯೇನಾ! ಅಥವಾ ಅಲ್ಲವಾ? ಇದಕ್ಕೆ ಸಮಾಧಾನ ನೋಡೋಣ.

ಒಬ್ಬ ಡಾಕ್ಟರ್, ಒಬ್ಬರೋಗಿ ಮಾತನಾಡುಕೊಳ್ಳುತ್ತಿದ್ದಾರೆಂದುಕೊಳ್ಳೋಣ. ರೋಗಿ ತನಗಿರುವ ರೋಗವನ್ನು ಕುರಿತು ಹೇಳಿದಾಗ, ಡಾಕ್ಟರ್ ರೋಗ ನಿವಾರಣೆಗೆ ಬೇಕಾದ ಔಷಧಿಗಳು ಪತ್ಯಗಳು ಜಾಗ್ರತೆಗಳು ಮೊದಲಾದವೆಲ್ಲ ಹೇಳಿದ್ದಾನೆಂದುಕೊಳ್ಳೋಣ. ಈಗ ಏನನ್ನು ವೈದ್ಯ ಎನ್ನುತ್ತೇವೆ? ಡಾಕ್ಟರ್ ಹೇಳಿದ ವಿಷಯವನ್ನು ಮಾತ್ರ ವೈದ್ಯ ಎನ್ನುತ್ತೇವೆ! ರೋಗಿ ಹೇಳಿರುವುದನ್ನು ವೈದ್ಯವೆನ್ನುವುದಿಲ್ಲ! ಹಾಗೆಯೇ ಅರ್ಜುನನನ್ನು ರೋಗಿ ಎಂದುಕೊಳ್ಳೋಣ.

ಶ್ರೀಕೃಷ್ಣನನ್ನು ವೈದ್ಯನು ಎಂದುಕೊಳ್ಳೋಣ. ಅಂತಹದರಲ್ಲಿ ಶ್ರೀಕೃಷ್ಣನು ಹೇಳಿರುವುದೇ ವೈದ್ಯವಾಗಲಿ, ಅರ್ಜುನ ಹೇಳಿರುವುದು ವೈದ್ಯವಲ್ಲ! ಅರ್ಜುನನು ತನ್ನಲ್ಲಿರುವ ಅಜ್ಞಾನವೆನ್ನುವ ರೋಗವನ್ನು ಹೊರಗಿಟ್ಟಾಗ, ಜ್ಞಾನವೆಂಬ ವೈದ್ಯವನ್ನು ಶ್ರೀಕೃಷ್ಣನು ಹೇಳಿದಾಗ, ಆ ವಿಷಯಕ್ಕೆ ವೈದ್ಯವೆಂದು ಹೆಸರಿಟ್ಟರೆ, ಅದು ಕೇವಲ ಶ್ರೀಕೃಷ್ಣನ ಮಾತುಗಳಿಗೇ ಅನ್ವಯಿಸಬೇಕು. ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನು ತನ್ನಲ್ಲಿನ ವಿಷಾದವನ್ನು ಹೊರಗಿಟ್ಟಾಗ, ಸರ್ವದುಃಖಗಳನ್ನು ಹೋಗಲಾಡಿಸುವ ಜ್ಞಾನವನ್ನು ಶ್ರೀಕೃಷ್ಣನು ಹೇಳಿದ್ದಾನೆ. ಆಗ ಆತನ ಮಾತುಗಳಿಗೇ ಭಗವದ್ಗೀತೆ ಎನ್ನುವ ಹೆಸರು ಬಂದಿದೆ.

"ಭಗವದ್ಗೀತೆ" ಎಂದರೆ ಭಗವಂತನಾದ ಶ್ರೀಕೃಷ್ಣನು ಹೇಳಿರುವುದೇ ಹೊರತು ಅರ್ಜುನನು ಹೇಳಿರುವುದು ಅಲ್ಲವೆಂದು ತಿಳಿಯುತ್ತದೆ. ಅಂತಹದರಲ್ಲಿ ಭಗವದ್ಗೀತೆ ಎಲ್ಲಿಂದ ಪ್ರಾರಂಭವಾಗಿದೆ ಎನ್ನುವ ಪ್ರಶ್ನೆ ಉದ್ಭವಿಸಿದರೆ! ವೈದ್ಯರು ಹೇಳಿರುವುದೆ ವೈದ್ಯವೆನ್ನುವಂತೆ ಭಗವಂತನು ಹೇಳಿರುವುದೇ ಭಗವದ್ಗೀತೆ ಯಾಗುತ್ತದೆ. ಆದ್ದರಿಂದ ಭಗವಂತನ ಮಾತುಗಳು ಎಲ್ಲಿಂದ ಪ್ರಾರಂಭವಾಗಿ ವೆಯೋ ಅಲ್ಲಿಂದಲೇ ಭಗವದ್ಗೀತೆ ಪ್ರಾರಂಭವಾಗಿದೆ ಎಂದು ನಿಸ್ಸಂಕೋಚವಾಗಿ ಹೇಳಬಹುದು. ನಮಗೆ ಅವಶ್ಯಕವಾದ, ನಾವು ತಿಳಿದುಕೊಳ್ಳಬೇಕಾದ ವಿಷಯಗಳು, ಭಗವಂತನ ಮಾತುಗಳಿಂದಲೇ ಪ್ರಾರಂಭವಾಗಿವೆ. ಭಗವಂತನ ಮಾತುಗಳನ್ನು ಜೀವಾತ್ಮಗಳು ತಿಳಿದುಕೊಳ್ಳಬೇಕಾದ ಹದ್ದು ಆದ್ದರಿಂದ ಅವುಗಳನ್ನು **"ಗೀತೆ"** ಎಂದು ಕರೆಯಲಾಗಿದೆ.

ಇಲ್ಲಿ ಕೆಲವರಿಗೊಂದು ಸಂಶಯ ಬರಬಹುದು. ಅದೇನೆಂದರೆ! ರೋಗಿ ಇಲ್ಲದೆ ವೈದ್ಯನು, ರೋಗ ಇಲ್ಲದೆ ಚಿಕಿತ್ಸೆ ಅವಶ್ಯಕತೆ ಇಲ್ಲ! ಹಾಗಿರುವಾಗ ಅರ್ಜುನನು ಹೇಳಿದ ವಿಷಾದಯೋಗ ಭಗವದ್ಗೀತೆಯಲ್ಲಿ ಪ್ರಾಮುಖ್ಯ ಅಲ್ಲವೆ! ಎಂದು ಕೇಳಬಹುದು. ಅದಕ್ಕೆ ಸಮಾಧಾನ ಏನೆಂದರೆ ವಿಷಾದ ಎನ್ನುವುದು ಆ ದಿನದ ಅರ್ಜನನಿಗೇ ಅಲ್ಲದೇ ಈ ದಿನದ ಮಾನವರಿಗೆಲ್ಲರಿಗೂ ವಿಷಾದವಿದೆ. ಹಾಗಿರುವಾಗ ಗೀತೆ ಮಾನವರಿಗೆಲ್ಲರಿಗೂ ಅಗತ್ಯ. ವಿಷಾದ ಇದ್ದದ್ದು ಆ

ದಿನದ ಅರ್ಜುನನಿಗೇ ಎನ್ನುವಂತೆ ಆತನವೊಂದು ವಿಷಾದವನ್ನೇ ಹೇಳಿಕೊಳ್ಳುವ ಅವಶ್ಯಕತೆ ಇಲ್ಲ. ಶ್ರೀಕೃಷ್ಣನು ಹೇಳಿದ ಮಾತುಗಳು ಭವರೋಗಗಳು ಇರುವವರಿಗೆಲ್ಲರಿಗೂ ವೈದ್ಯವಂಥವು, ಭವರೋಗಗಳೆನ್ನುವವು ಮಾನವರಾದ ನಮ್ಮೆಲ್ಲರಿಗಿದ್ದೇ ಇವೆ. ಆದ್ದರಿಂದ ಅರ್ಜುನ ವಿಷಾದಯೋಗವೆಂಬ ಅಧ್ಯಾಯವನ್ನು ಭಗವದ್ಗೀತೆ ಎಂಬ ಹೆಸರಿನಿಂದ ಹೇಳಿಕೊಳ್ಳುವ ಅವಶ್ಯಕತೆ ಇಲ್ಲ. ಭಗವದ್ಗೀತೆಯನ್ನು ಪ್ರತಿ ಪುಸ್ತಕದಲ್ಲಿಯೂ ಭಗವಂತನು ಹೇಳಿದ ವಿಷಯಗಳಿಂದಲೇ ಪ್ರಾರಂಭಿಸಿ ಬರೆದಿದ್ದರೆ ಎಷ್ಟೋ ಚೆನ್ನಾಗಿರುತಿತ್ತು. ಹಾಗಲ್ಲದೆ ಪ್ರತಿ ಭಗವದ್ಗೀತೆಯಲ್ಲಿಯೂ ಅರ್ಜುನ ವಿಷಾದಯೋಗದಿಂದ ಪ್ರಾರಂಭಿಸಿರುವು ದರಿಂದ ಓದಿದವರೆಲ್ಲರೂ ಶ್ರೀಕೃಷ್ಣನು ಅರ್ಜುನನಿಗೇ ಹೇಳಿದ್ದಾನೆಂದು, ಆ ವಿಷಯಗಳು ಅರ್ಜುನನಿಗೋಸ್ಕರವೇ ಎಂದು, ಅರ್ಜುನನಿಂದ ಯುದ್ಧ ಮಾಡಿಸುವುದಕ್ಕೆಂದು, ಅಧೈರ್ಯಪಟ್ಟ ಪಾರ್ಥನನ್ನು ಧೈರ್ಯ ತುಂಬಿಸುವು ದಕ್ಕೆಂದು, ಕೇವಲ ಅರ್ಜುನನಿಗೋಸ್ಕರ ಭಗವದ್ಗೀತೆ ಇದ್ದಂತೆ ತಿಳಿಯುತ್ತಿದ್ದಾರೆ. ಅರ್ಜುನ ವಿಷಾದಯೋಗ ಓದಿದ ಕೆಲವರು "ಅರ್ಜುನನಿಗೆ ದುಃಖ ಇದೆ. ಆದ್ದರಿಂದ ಆತನಿಗದು ಅಗತ್ಯ. ನಮಗೇನು ದುಃಖವಿಲ್ಲ ಆದ್ದರಿಂದ ನಮಗೆ ಅವಶ್ಯಕತೆ ಇಲ್ಲ" ಎನ್ನುತ್ತಿದ್ದಾರೆ. ಇಲ್ಲಿ ಮುಖ್ಯವಾಗಿ ಓದುವವನಿಗೆ ತನಗೋಸ್ಕರವೇ ಇದರಲ್ಲಿನ ವಿಷಯಗಳು ಇವೆಯೆಂದು ಯಾರ ಆಲೋಚನೆಗೂ ಬರುತ್ತಿಲ್ಲ. ಆದ್ದರಿಂದ ಈ ದಿನ ಭಗವದ್ಗೀತೆ ಪಾರಾಯಣ ಮಾಡುವುದಕ್ಕೇ ಇದೆಯೆಂದು, ಕಂಠಪಾಠ ಮಾಡಿಕೊಂಡು ಪಾರಾಯಣ ಮಾಡುತ್ತಿದ್ದಾರೆ. ಆದರೆ ಅದರ ಅರ್ಥವನ್ನು ಕುರಿತು ಯಾರೂ ಯೋಚಿಸುತ್ತಿಲ್ಲ.

ಚೆನ್ನಾಗಿ ಪಾರಾಯಣ ಮಾಡುವ ಒಬ್ಬರ ಹತ್ತಿರಕ್ಕೆಹೋಗಿ ನೀವು ಶ್ಲೋಕಗಳನ್ನು ಬಹಳ ಚೆನ್ನಾಗಿ ಪಾರಾಯಣ ಮಾಡುತ್ತಿದ್ದೀರಾ. ಅದರಲ್ಲಿನ ಅರ್ಥವೂ ಸಹ ನಿಮಗೆ ಚೆನ್ನಾಗಿ ತಿಳಿದಿರುತ್ತದೆಂದು ಕೇಳಿದಾಗ! ಅದಕ್ಕೆ ಆತನು "ಅರ್ಥದಿಂದ ನಮಗೆ ಕೆಲಸವಿಲ್ಲ, ಪಾರಾಯಣ ಮಾಡುವುದು ಒಳ್ಳೆಯದೆಂದು ಮಾಡುತ್ತಿದ್ದೇವೆ" ಎಂದನು. ಆ ಶ್ಲೋಕಗಳು ಯಾವುದರ ನಿಮಿತ್ತವಾಗಿ

ಹೇಳಲ್ಪಟ್ಟಿವೆಯೋ ತಿಳಿಯದಂತೆ ಕೇವಲ ಪಾರಾಯಣ ಮಾಡುವುದು ಏನು ಒಳ್ಳೆಯದೆಂದು ನಾವು ಕೇಳಿದಾಗ! ಆತನು (ಶ್ರೀಕೃಷ್ಣನು) ಏನು ಹೇಳಿದರೆ ನಮಗೇನು? ಏನು ಹೇಳಿದ್ದಾನೆಂದು ನೋಡಿಕೊಳ್ಳಬೇಕಾಗಿರುವುದು ಅರ್ಜುನನೇ ಹೊರತು ನಾವಲ್ಲ. ನಾವು ಹಿರಿಯರು ಹೇಳಿದಂತೆ ಪಾರಾಯಣ ಮಾಡುವುದು ಒಳ್ಳೆಯದು, ಆದರೆ ಇದೇತಕ್ಕೆ ಅದೇತಕ್ಕೆಂದು ಕೇಳಬಾರದೆಂದು ಗದರಿಸಿ ಹೇಳಿದನು. ಹೀಗೆ ಬಹಳ ಜನರು ಗೀತೆಯಲ್ಲಿ ಮೊದಲ ಅಧ್ಯಾಯವಾದ ಅರ್ಜುನ ವಿಷಾದಯೋಗದಿಂದ ಗೀತೆಯೊಂದರ ಭಾವನೆಗೆ ದೂರವಾಗುತ್ತಿದ್ದಾರೆಂದು ತಿಳಿಯುತ್ತಿದೆ. ಆದ್ದರಿಂದ ನಾವು ಈಗ ಬರೆಯುವ ಭಗವದ್ಗೀತೆಯಲ್ಲಿ ಅರ್ಜುನ ವಿಷಾದಯೋಗ ಎನ್ನುವ ಅಧ್ಯಾಯ ಇಲ್ಲದಂತೆ ಕೇವಲ ಭಗವಂತನು ಹೇಳಿದ ಮಾತುಗಳಿಂದಲೇ ಪ್ರಾರಂಭಮಾಡಿ ಭಗವದ್ಗೀತೆ ಎನ್ನುವ ಹೆಸರಿಗೆ ಅರ್ಥ ಸಾರ್ಥಕವಾಗುವಂತೆ ಬರೆಯಬೇಕೆಂದುಕೊಂಡಿದ್ದೇವೆ.

ಕೆಲವರು ತಿಳುವಳಿಕೆಯುಳ್ಳವರು ಗೀತಾ ಪಾರಾಯಣದ ಮೇಲೆ ದೃಷ್ಟಿ ಇಡದೆ, ಅದರಲ್ಲಿ ಶ್ರೀಕೃಷ್ಣನು ಏನು ಹೇಳಿದ್ದಾನೆಂದು ನೋಡುವವರೂ ಸಹ ಇದ್ದಾರೆ. ಅಂತಹವರು, ಅದರಲ್ಲಿನ ಸತ್ಯವನ್ನು ತಿಳಿದುಕೊಳ್ಳಬೇಕೆನ್ನುವವರು, ಗೀತೆಯನ್ನು ಪೂರ್ತಿಯಾಗಿ ಓದಿದರೂ, ಅದರಿಂದ ಏನು ತಿಳಿದುಕೊಳ್ಳದೆ ಕೊನೆಗೆ ಎಷ್ಟೋ ಸಂಶಯಗಳನ್ನು ಹೊಂದಿ, ಇದು ನಮಗೇನು ಅರ್ಥವಾಗುತ್ತಿಲ್ಲ. ಇದರಲ್ಲಿನ ವಿಷಯಗಳು ಒಂದಕ್ಕೊಂದು ಹೋಲಿಕೆ ಇಲ್ಲದಂತೆ ಇವೆ. ಇದು ಅರ್ಜುನನಿಂದ ಯುದ್ಧ ಮಾಡಿಸುವುದಕ್ಕೋಸ್ಕರ ಆತನನ್ನು ಉತ್ಸಾಹಪಡಿಸುವುದಕ್ಕೆ ಹೇಳಿದ ಮಾತುಗಳೇ ಹೊರತು, ಸಿದ್ಧಾಂತಪರವಾಗಿ ಲೆಕ್ಕಿಸುವ ವಿಷಯಗಳು ಇಲ್ಲವೆನ್ನುತ್ತಿದ್ದಾರೆ. ಆ ಮಾತು ಕೇಳಿದ ನಾವು "ಭಗವದ್ಗೀತೆ ಧರ್ಮಯುಕ್ತವಾದದ್ದು, ಶಾಸ್ತ್ರಬದ್ಧವಾದದ್ದು. ಅಂತಹದ್ದನ್ನು ಸಿದ್ಧಾಂತಪರವಾಗಿ ಇಲ್ಲ ಎನ್ನುವುದು ಎಂತಹ ಮಾತು" ಎಂದು ಕೇಳಿದಾಗ! ಅವರು ಅವರಿಗಿರುವ ಅನುಮಾನಗಳನ್ನು ಹೀಗೆ ಹೇಳುತ್ತಿದ್ದಾರೆ. "ಏನಯ್ಯಾ ಗೀತೆಯಲ್ಲಿ ಇರೋದು? ಕುರುಡರಂತೆ ಓದುವವರಿಗಾದರೆ ಸರಿಹೋಗುತ್ತದೆ. ವಿವರಣಾ ದೃಷ್ಟಿಯಿಂದ

ಓದುವ ನಮ್ಮಂತವರಿಗೆ ಸರಿಹೋಗುವುದಿಲ್ಲ. ಒಂದು ಕಡೆ ಇಂದ್ರಿಯಗಳಿಗೆ ತಿಳಿಯದಿರುವುದು 'ಆತ್ಮ' ಎನ್ನುತ್ತಾರೆ, ಮತ್ತೊಂದು ಕಡೆ 'ಓಂ' ಎನ್ನುವ ಅಕ್ಷರವೇ ದೇವರೆನ್ನುತ್ತಾರೆ, ಅಲ್ಲಿ ಕಾಣಿಸದವನು, ಕೇಳಿಸದವನು ಇಲ್ಲಿ ಹೇಗೆ ಕಾಣಿಸಿ ಕೇಳಿಸುವ 'ಓಂ' ಆಗಿದ್ದಾನೆ? ಒಂದು ಕಡೆ ಪ್ರಕೃತಿಯೇ ಎಲ್ಲಾ ಮಾಡುತ್ತಿದೆ, ನಾನು ಏನು ಮಾಡಲಿಲ್ಲ ನೋಡುತ್ತಿದ್ದೇನೆ, ಕೇವಲ ಸಾಕ್ಷಿ ಮಾತ್ರವೆ ಎಂದು ಹೇಳಿ, ಮತ್ತೊಂದು ಕಡೆ ಎಲ್ಲಾ ನಾನೇ ಮಾಡುತ್ತಿದ್ದೇನೆ, ಗೊಂಬೆಗಳ ಆಟದಂತೆ ಆಡಿಸುತ್ತಿದ್ದೇನೆನ್ನುವುದು ಧರ್ಮವಾ? ಸಿದ್ಧಾಂತವಾ? ಒಂದು ಕಡೆ ನನಗೆಲ್ಲರು ಸಮಾನವೆಂದು, ಎಲ್ಲರಿಗೂ ನಾನು ಸಮಾನನೆಂದು ಹೇಳಿದವನು, ಮತ್ತೊಂದು ಕಡೆ ಹೆಚ್ಚು ಕಡಿಮೆ ಕುಲಗಳಾಗಿ ಹುಟ್ಟಿಸುತ್ತೇನೆಂದು ಹೇಳುವುದು ದೈವತ್ವವಾ? ಒಂದು ಕಡೆ ಗುಣಗಳಿಂದಲೇ ಕಾರ್ಯಗಳು ನಡೆಯುತ್ತಿವೆಯೆನ್ನುತ್ತಾನೆ ಮತ್ತು ಗುಣಗಳನ್ನು ತ್ಯಜಿಸೆನ್ನುತ್ತಾನೆ. ಮತ್ತೊಂದು ಕಡೆ ಗುಣಗಳನ್ನು ತ್ಯಜಿಸಿ ಕೆಲಸಗಳನ್ನು ಬಿಟ್ಟುಹಾಕುವುದು ತಾಮಸವೆನ್ನುತ್ತಾನೆ. ಹಾಗೆ ಕೆಲಸಗಳು ಬಿಡಬಾರದೆನ್ನುತ್ತಾನೆ. ಒಂದುಕಡೆ ನಾಯಿಯನ್ನು, ಆನೆಯನ್ನು, ಚಂಡಾಲರೆಲ್ಲರನ್ನು ಸಮಾನವಾಗಿ ನೋಡೆನ್ನುತ್ತಾನೆ. ಮತ್ತೊಂದು ಕಡೆ ಅವನು ಶತ್ರು, ಅವನನ್ನು ಕೊಲ್ಲು ಎನ್ನುತ್ತಾನೆ. ಒಂದುಕಡೆ ಆತ್ಮ ಸಾಯಲ್ಪಡುವುದಿಲ್ಲ ಎನ್ನುತ್ತಾನೆ, ಮತ್ತೊಂದು ಕಡೆ ಎಲ್ಲರನ್ನು ನಾಶಮಾಡುವ ಕಾಲನು ನಾನೇ ಎನ್ನುತ್ತಾನೆ. ಈ ವಿಧವಾಗಿ ಗೀತೆಯಲ್ಲಿ ಎಷ್ಟೋ ದಿಕ್ಕು ತೋಚದ ಮಾತುಗಳಿವೆ. ಆದ್ದರಿಂದ ಅರ್ಥದಿಂದ ಕೆಲಸವಿಲ್ಲದಂತೆ ಕಂಠಪಾಠವಾಗಿ ಓದುವವರಿಗೆ ಸರಿಹೋಗುತ್ತದೆ ಹೊರತು ನಮಗೆ ಇಷ್ಟವಿಲ್ಲ ಹೋಗು" ಎನ್ನುತ್ತಿದ್ದಾರೆ.

ಭಾವನೆಯೇನೆಂದು ನೋಡುವವರಿಗೆ ಗೀತೆಯಲ್ಲಿ ಕೆಲವು ಸಂಶಯಗಳು ಬರುವ ಮಾತು ನಿಜವೆ. ಅಷ್ಟುಮಾತ್ರಕ್ಕೆ ಗೀತೆಯನ್ನು ಅಶಾಸ್ತ್ರೀಯ, ಸಿದ್ಧಾಂತ ಅಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಗೀತೆಯನ್ನು ಕನ್ನಡದೊಳಗೆ ಅನುವಾದಿಸಿ ಅರ್ಥ ಹೇಳುವವರು ಸರಿಯಾದ ವಿಧವಾಗಿ ಹೇಳಲಾರದೆ ಹೋಗುವುದರಿಂದ ಮೇಲಿನ ವಿಧವಾಗಿ ಅನುಮಾನಗಳು ಕೆಲವರಿಗೆ ಬಂದಿರಬಹುದು. ಸತ್ಯ

ಹೇಳಬೇಕೆಂದರೆ ಆ ದಿನ ಭಗವಂತನು ತಿಳಿಸಿದ ಗೀತೆ ಇಂದಿನವರೆಗೂ ಅರ್ಥವಾಗಿಲ್ಲವೆಂದು ಹೇಳಬಹುದು. ಏಕೆಂದರೆ ಭಗವದ್ಗೀತೆಯನ್ನು ಸಕ್ರಮವಾಗಿ ಅರ್ಥ ಮಾಡಿಕೊಳ್ಳಬೇಕೆಂದರೆ ಮುಖ್ಯವಾಗಿ ನಾಲ್ಕು ಸೂತ್ರಗಳನ್ನು ಅನುಸರಿಸಿ ಓದಬೇಕಾಗಿರುತ್ತದೆ. ಬರೆಯುವವರೂ ಸಹ ಆ ನಾಲ್ಕು ಸೂತ್ರಗಳನ್ನು ಅನುಸರಿಸಿ ಬರೆದಿರಬೇಕು. ಹಾಗೆ ಸೂತ್ರಬದ್ಧವಾಗಲ್ಲದೆ ಇಷ್ಟಬಂದಂತೆ ಬರೆಯುವವರಿಗೆ, ಇಷ್ಟಬಂದಂತೆ ಓದುವವರಿಗೆ ಗೀತೆಯಲ್ಲಿನ ಅಂತರಾರ್ಥ ಎಂದಿಗೂ ಅರ್ಥವಾಗುವುದಿಲ್ಲ. ಇಲ್ಲಿಯವರೆಗೂ ಈ ನಾಲ್ಕು ಸೂತ್ರಗಳನ್ನು ಯಾರೂ ಅನುಸರಿಸಲಿಲ್ಲ. ಆದ್ದರಿಂದ ಗೀತೆಯೊಂದರ ಸ್ವರೂಪ ಯಾರಿಗೂ ಅರ್ಥ ವಾಗಲಿಲ್ಲವೆಂದೇ ಹೇಳಬಹುದು. ಈ ಮಾತಿಗೆ ಕೆಲವರಿಗೆ ಕೋಪ ಸಹ ಬಂದಿರಬಹುದು. ಗೀತೆ ನಮಗೆ ತಿಳಿದಿಲ್ಲವಾ? ಎಂದು ನಮ್ಮನ್ನು ದೂಷಿಸಿದರೂ ಪರವಾಗಿಲ್ಲ. ಇಲ್ಲಿಯವರೆಗೂ ಸಂಶಯ ರಹಿತವಾದ ಗೀತೆ ಇಲ್ಲ! ಆದ್ದರಿಂದ ಸಂಶಯ ರಹಿತವಾದ ಗೀತೆ ಬೇಕೆಂದರೆ ಮುಖ್ಯವಾದ ನಾಲ್ಕು ಸೂತ್ರಗಳು ಇಲ್ಲಿ ಗಮನದಲ್ಲಿಟ್ಟು ಓದಬೇಕು. ಆ ನಾಲ್ಕು ಸೂತ್ರಗಳು ಯಾವುವೆಂದರೆ!

1) **ಓದುತ್ತಿರುವ ಶ್ಲೋಕ ಜೀವಾತ್ಮನಿಗಾ, ಆತ್ಮನಿಗಾ, ಪರಮಾತ್ಮನಿಗಾ, ಪ್ರಕೃತಿಗಾ? ಯಾರನ್ನು ಕುರಿತು ಹೇಳಲಾಗಿದೆ?**

2) **ಓದುತ್ತಿರುವ ಶ್ಲೋಕ ಬ್ರಹ್ಮಯೋಗಕ್ಕಾ! ಅಥವಾ ಕರ್ಮಯೋಗಕ್ಕಾ ಯಾವುದಕ್ಕೆ ಸಂಬಂಧಿಸಿರುವುದು?**

3) **ಓದುತ್ತಿರುವ ಶ್ಲೋಕ ಸಾಕಾರಕ್ಕಾ, ನಿರಾಕಾರಕ್ಕಾ.! ಯಾರನ್ನು ಕುರಿತು ಹೇಳಿರುವುದು?**

4) **ಓದುತ್ತಿರುವ ಶ್ಲೋಕ ಶಾಸ್ತ್ರಬದ್ಧವಾ! ಅಲ್ಲವಾ?**

ಈ ನಾಲ್ಕು ಸೂತ್ರಗಳು ಗೀತೆಯ ಮೇಲೆ ಪ್ರಯೋಗಿಸಿ ನೋಡದೆ ಹೋದರೆ ಅದು ಆಕಾರಪ್ರಾಯವೇ ಆಗುತ್ತದೆ ಆದರೆ ಅರ್ಥಸಹಿತ ಆಗುವುದಿಲ್ಲ. ಈ ನಾಲ್ಕು ಸೂತ್ರಗಳ ಪ್ರಕಾರ ಇಲ್ಲಿಯವರೆಗೂ ಯಾವ ಭಗವದ್ಗೀತೆ

ಬರೆಯಲ್ಪಡಲಿಲ್ಲ. ಆದ್ದರಿಂದ ಅವುಗಳಲ್ಲಿ ಎಷ್ಟೋ ಸಂಶಯಗಳು ಉಳಿದಿವೆ ಎನ್ನುವುದರಲ್ಲಿ ತಪ್ಪಿಲ್ಲ. ಸಂಶಯರಹಿತ ಜ್ಞಾನ ಗೀತೆಯಿಂದ ಅರ್ಥವಾಗಬೇಕೆಂದರೆ ತಪ್ಪದೆ ಮೇಲಿನ ಸೂತ್ರಗಳನ್ನು ಅನುಸರಿಸಬೇಕಾಗಿರುತ್ತದೆ. ಮೇಲಿನ ಸೂತ್ರಗಳಲ್ಲಿ ನಾಲ್ಕನೇ ಸೂತ್ರವನ್ನು ಗೀತೆಯ ಮೇಲೆ ಉಪಯೋಗಿಸಿದರೆ, ಅದರಲ್ಲಿನ ಅಶಾಸ್ತ್ರೀಯ ಕಲ್ಪಿತ ಶ್ಲೋಕಗಳೆಲ್ಲವೂ ಹೊರಬೀಳುತ್ತವೆ. ಭಗವಂತನ ಉದ್ದೇಶಕ್ಕೆ ಯಾವ ಶ್ಲೋಕಗಳಾದರೆ ಭಿನ್ನವಾಗಿವೆಯೋ ಅವೆಲ್ಲವೂ ಈ ಸೂತ್ರದಿಂದ ಸಿಗುತ್ತವೆ. ಭಗವಂತನು ಹೇಳಿದ ಭಾವನೆಯೆಲ್ಲವೂ ಶಾಸ್ತ್ರಬದ್ಧವೆ, ಆದ್ದರಿಂದ ಆ ಮಾತುಗಳು ಓದಿದವರಿಗೆ ಎಂತಹ ಸಂಶಯಗಳು ಉಳಿಯುವುದಿಲ್ಲ. ಮೇಲಿನ ನಾಲ್ಕು ಸೂತ್ರಗಳಿಗೆ ಸಂಬಂಧವಿಲ್ಲದ ಶ್ಲೋಕಗಳು ಭಗವದ್ಗೀತೆಗೆ ಯಾವ ಸಂಬಂಧವಿಲ್ಲವೆಂದು ಹೇಳಬಹುದು. ಈಗ ಈ ಸೂತ್ರಗಳು ಪ್ರಯೋಗಿಸಿ ಗೀತಾಮಹತ್ವಕ್ಕು, ಗೀತೆಗೂ ಸಂಬಂಧ ಏನಾದರೂ ಇದೆಯೇನೊ ನೋಡೋಣ.

ಗತಕಾಲದಲ್ಲಿನ ಹಿರಿಯರು ಏನೋ ಒಂದು ಒಳ್ಳೆಯದು ಮಾಡ ಬೇಕೆಂದುಕೊಂಡರೆ ಆ ಕೆಲಸಗಳು ಈಗಿನ ಸಮಾಜದಲ್ಲಿ ದುರದೃಷ್ಟ ವಶಾತ್ ಅರ್ಥವಿಲ್ಲದಿರುವವಾಗಿ, ಅನರ್ಥಗಳೊಂದಿಗೆ ಕೂಡಿಕೊಂಡಿವೆ. ಹಿರಿಯರು ಆಸೆಪಟ್ಟ ಫಲಿತಗಳಿಗಿಂತ ಬೇರೆ ಫಲಿತಗಳು ಎದುರಾಗಿವೆ. ಉದಾಹರಣೆಗೆ ಯಮಲೋಕವನ್ನು ಕುರಿತು ಅದು ಎಲ್ಲೋ ಇದೆಯೆಂದು, ಅಲ್ಲಿ ಪಾಪಗಳ ಪಟ್ಟಿಯ ಪ್ರಕಾರ ನರಕವನ್ನು ಅನುಭವಿಸಬೇಕಾಗಿರುತ್ತದೆ ಎಂದು ಭಯ ಉಂಟಾಗುವಂತೆ ವಾಸ್ತವಕ್ಕೆ ಅಲ್ಲಿ ಇಲ್ಲದ ಯಮಲೋಕವನ್ನು ಕುರಿತು ವರ್ಣಿಸಿದ್ದಾರೆ. ಅದರಿಂದ ಪ್ರಜೆಗಳಿಗೆ ಪಾಪವೆಂದರೆ ಭಯವುಂಟಾಗಿ, ಪಾಪದ ಕೆಲಸಗಳು ಮಾಡದಂತಿರುತ್ತಾರೆಂದು ಹಿರಿಯರ ಭಾವನೆ. ಅವರದು ಒಳ್ಳೆಯ ಭಾವನೆಯೇ ಆದರೂ ಅದರ ಫಲಿತ ಆಸೆಪಟ್ಟಂತೆ ಇಲ್ಲದೆ ಅದು ಪ್ರಜೆಗಳಲ್ಲಿ ಬೇರೆ ವಿಧವಾಗಿ ತಯಾರಾಗಿಹೋಗಿದೆ. ಪಾಪ ಮಾಡುವವನಿಗೆ ಪಾಪಭೀತಿ ಉಂಟಾಗುತ್ತಿಲ್ಲ. ಮಾಡುವ ಕೆಲಸ ಕೆಟ್ಟದೆಂದು ತೋಚಿದರೂ ಅದು ಆ ಸಮಯಕ್ಕೆ ಅನುಕೂಲವಾದ ಕೆಲಸವೆಂದು ಪಾಪ ಬಂದರೆ ಬರಲಿಬಿಡು ಎಂದು,

ಯಮಲೋಕಕ್ಕೆ ಹೋದಾಗ ಅಲ್ಲವೆ ಅನುಭವಿಸುವುದೆಂದು, ಮರಣಿಸಿದ ನಂತರ ಏನೋ ನಡೆಯುತ್ತದೆಂದು ಈಗೇಕೆ ಬಿಡಬೇಕೆಂದು, ಆಗ ಏನು ನಡೆಯುತ್ತದೋ ಯಾವನು ನೋಡಿದ್ದಾನೆಂದು, ಯಮಲೋಕ ಎನ್ನುವುದು ದೃಷ್ಠಾಂತ ಇಲ್ಲದ ಮಾತೆಂದು ಇಷ್ಟಬಂದಂತೆ ಯಾರಿಷ್ಟಕ್ಕೆ ಅವರಂದುಕೊಳ್ಳುವುದು ಪ್ರಾರಂಭ ಮಾಡಿದ್ದಾರೆ. ವಾಸ್ತವಕ್ಕೆ ಪಾಪಭೀತಿ ಇಲ್ಲದಂತೆ ಹೋಗಿದೆ.

ಹಿರಿಯರು ಯಮಲೋಕ ಎಲ್ಲೋ ಇದೆಯೆಂದು ವರ್ಣಿಸದೆ ಇಲ್ಲೇ ಇದೆಯೆಂದು, ಭೂಮಿ ಮೇಲೆ ಅನುಭವಿಸುವ ಕಷ್ಟಬಾಧೆಗಳೆಲ್ಲ ಯಮಬಾಧೆಗಳೇ ಎಂದು, ವಾಸ್ತವ ತಿಳಿಸಿದ್ದರೆ ಪ್ರತ್ಯಕ್ಷವಾಗಿ ನಡೆಯುವ ಘೋರವಾದ ಬಾಧೆಗಳನ್ನು ನೋಡಿ, ಮಾನವನು ಪಾಪದ ಪರಿಣಾಮ ಹೀಗಿರುತ್ತದೆಂದು ತಿಳಿದುಕೊಂಡು, ಭಯ ಉಂಟಾಗಿ ಪಾಪದ ಕೆಲಸಗಳಿಂದ ತಪ್ಪಿಸಿಕೊಳ್ಳುತ್ತಿದ್ದನು. ಇರುವುದು ಇದ್ದಹಾಗೆ ಹೇಳದೆ ಮಾನವರಿಗೆ ಅರ್ಥವಾಗಬೇಕೆಂದು ಕಥೆಗಳ ರೂಪದಲ್ಲಿ ಎಣಿದು ಹೇಳಿದ ಮಾತುಗಳು ಮಾನವರಿಗೆ ಅಡ್ಡ ದಾರಿಯನ್ನು ತೋರಿಸಿವೆ. ಹಾಗೇ ಈದಿನ "ಗೀತಾಮಹತ್ವ" ದಿಂದ ಗೀತೆಯ ಬಗ್ಗೆ ಮಾನವರ ಭಾವನೆ ಅಡ್ಡದಾರಿಯೇ ಹಿಡಿದಿದೆ ಎಂದು ಹೇಳಬಹುದು.

ಕೆಲವರು ಹಿರಿಯರು ಗೀತೆಯನ್ನು ಎಲ್ಲರೂ ಓದಬೇಕೆಂದು, ಎಲ್ಲರಿಗೂ ಅದರಲ್ಲಿ ಭಕ್ತಿ ಉಂಟಾಗುವಂತೆ ಮಾಡಬೇಕೆಂದು, ಗೀತಾಮಹತ್ವವನ್ನು ಪ್ರಕಟಿಸಿದ್ದಾರೆ. ಅದರಿಂದ ಪ್ರಜೆಗಳು ಗೀತಾ ಮಹತ್ವದಲ್ಲಿ ಕಲ್ಪಿಸಿದ ಫಲಿತಗಳ ಮೇಲೆಯೇ ಮನಸ್ಸನ್ನು ಲಗ್ನವಾಡಿ ಗೀತೆಯಲ್ಲಿನ ವಿಷಯಗಳನ್ನು ಬಿಟ್ಟುಹಾಕಿದ್ದಾರೆ. ಮಹತ್ವದಲ್ಲಿ ಪ್ರಕಟಿಸಿದ ಫಲಿತಗಳೇ ಬೇಕೆಂದುಕೊಳ್ಳುತ್ತಿದ್ದಾರೆ. ಗೀತೆಯಲ್ಲಿ ಪ್ರಕಟಿಸಿದ ಧರ್ಮಗಳನ್ನು ನೋಡಲಾರದೆ ಹೋಗುತ್ತಿದ್ದಾರೆ. ಕೆಲವರು ಹಿರಿಯರು ಒಳ್ಳೆಯದೆಂದು ತಿಳಿಸಿದ ಗೀತಾಮಹತ್ವ, ಮಾನವರನ್ನು ಹದಗೆಡಿಸಿಟ್ಟು ಅಧರ್ಮಗಳ ಕಡೆ ಮರಳಿಸಿದೆ. ಆ ವಿಧವಾಗಿ ಬದಲಾಗುವುದಕ್ಕೆ ಗೀತಾಮಹತ್ವದಲ್ಲಿ ಭಗವದ್ಗೀತೆಗೆ ವಿರುದ್ಧವಾದ ಮತ್ತು ಧರ್ಮವಿರುದ್ಧವಾದ ಮಾತುಗಳೆಷ್ಟೋ ಇವೆ. ಆದ್ದರಿಂದ ನಾವೆಲ್ಲರೂ ಗೀತಾಮಹತ್ವ ಎಂದರೆ ಏನೋ ತಿಳಿದುಕೊಳ್ಳಬೇಕು.

ಭಗವಂತನು ಗೀತೆಯಲ್ಲಿ ಯಾವ ಉದ್ದೇಶವನ್ನು ಪ್ರಕಟಿಸಿದ್ದಾನೋ ಆ ಉದ್ದೇಶಕ್ಕೆ ವಿರುದ್ಧ ಭಾವನೆಗಳು ಗೀತಾಮಹತ್ವದಲ್ಲಿ ಬರೆದಿರುವುದು ವಿಚಿತ್ರ. ಗೀತೆಯಲ್ಲಿ ಭಗವಂತನು ಧರ್ಮಗಳನ್ನು ತಿಳಿಸಿದ್ದರೆ, ಧರ್ಮಗಳಿಗೆ ವಿರುದ್ಧ ವಾಗಿರುವ ವಾಕ್ಯಗಳನ್ನು ಗೀತಾ ಮಹತ್ವಗಳೆಂಬ ಹೆಸರಿನಿಂದ ಎಷ್ಟೋಜನ ಮತ್ತೆ ಮತ್ತೆ ಹೇಳುತ್ತಾ ಮಾನವರನ್ನು ಪಕ್ಕದಾರಿಯನ್ನಿಡಿಸುವುದು ಬಹಳ ವಿಚಿತ್ರ. ಅಷ್ಟೊ ಇಷ್ಟೊ ಜ್ಞಾನ ಇರುವವರೂ ಸಹ ಗೀತಾಮಹತ್ವ, ಗೀತೆಗೆ ವಿರುದ್ಧವಾಗಿದೆ ಎಂದು ಯೋಚಿಸದೆ ನಿತ್ಯ ಪಾರಾಯಣ ಮಾಡುವುದು ಬಹಳಷ್ಟು ವಿಚಿತ್ರ. ಈ ನಮ್ಮ ಮಾತುಗಳಿಗೆ ಕೆಲವರಿಗೆ ಕೋಪಬಂದು ನಮ್ಮ ಮಾತುಗಳು ಅಜ್ಞಾನಪರವಾಗಿರುವವೆಂದು ಹೇಳಬಹುದು. ಓದುವವರಾಗಿ ನೀವು ಸ್ವತಃವಾಗಿ ಯೋಚಿಸುವ ಸ್ಥಿತಿಗೆ ಬನ್ನಿ. ಒಂದು ದಿನ ಸತ್ಯವನ್ನು ಹೇಳಿದ ಯೇಸುಪ್ರಭುವನ್ನು ಆ ದಿನದ ಜ್ಞಾನಿಗಳು ದೈವದೂಷಣೆ ಮಾಡಿದವನಂತೆ ಲೆಕ್ಕಿಸಿ ಹಿಂಸಿಸಿ ಸಾಯಿಸಿದ್ದಾರೆ. ಸತ್ಯ ತಿಳಿದುಕೊಂಡ ನಂತರ ಆ ದಿನದ ಯೇಸುಮಾತುಗಳು ಈದಿನ ಶಿರೋಧಾರ್ಯವಾಗಿವೆ. ಹಾಗೆಯೇ ಒಂದು ದಿನ ಖಗೋಳ ರಹಸ್ಯಗಳನ್ನು ಹೇಳಿದ 'ಗೆಲೀಲಿಯೋ' ಎನ್ನುವಾತನನ್ನು ಆ ದಿನ ಜ್ಞಾನಿಗಳಾದವರು ಚಿತ್ರಹಿಂಸೆಗಳ ಪಾಲು ಮಾಡಿದ್ದಾರೆ. ಮತ್ತೆ ಈ ದಿನ ಆ ಗೆಲೀಲಿಯೋ ಮಾತುಗಳೇ ಖಗೋಳಶಾಸ್ತ್ರಜ್ಞರಿಗೆ ಆಧಾರವಾಗಿವೆ. ಆದ್ದರಿಂದ ನಮ್ಮ ಲೆಕ್ಕದಲ್ಲಿ ಜ್ಞಾನಿಗಳೆಂದು ಹೆಸರು ಹೊಂದಿದವರು ಇದು ಅಸತ್ಯವೆಂದು ಕಿರುಚಿದ ಮಾತ್ರಕ್ಕೆ ನೀವು ಆತುರಪಡದೆ ಆಲೋಚಿಸಿ ನೋಡಿರಿ. ಆಗಲೇ ಸತ್ಯ ತಿಳಿಯುತ್ತದೆ.

ನಾವು ಪ್ರಕಟಿಸಿದ ನಾಲ್ಕು ಸೂತ್ರಗಳಲ್ಲಿ ನಾಲ್ಕನೆ ಸೂತ್ರದ ಪ್ರಕಾರ ನೋಡಿದಂತಾದರೆ ಗೀತಾಮಹತ್ವ ಅಶಾಸ್ತ್ರೀಯವೆಂದು ತಿಳಿಯುತ್ತದೆ. ಗೀತೆಯು ಯೋಗಶಾಸ್ತ್ರವಾಗಿದ್ದು, ಗೀತಾಮಹತ್ವ ವರಾಹಪುರಾಣವಾಗಿರುವುದು ಗಮನಿಸಬೇಕಾದ ವಿಷಯ. ಶಾಸ್ತ್ರಗಳಿಗೂ ಪುರಾಣಗಳಿಗೂ ಎಷ್ಟೋ ವ್ಯತ್ಯಾಸವಿದೆ ಎನ್ನುವುದಕ್ಕೆ ನಿರೂಪಣೆಯಾಗಿ **ಶಾಸ್ತ್ರವಾದ ಗೀತೆ ಜನ್ಮರಾಹಿತ್ಯವನ್ನು ತಿಳಿಸಿದರೆ,**

ಪುರಾಣವಾದ ಗೀತಾಮಹತ್ವ ಗೀತಾಪಾರಾಯಣದಿಂದ ಪ್ರಪಂಚ ಇರುವವರೆಗೂ ಮಾನವ ಜನ್ಮ ಉಂಟಾಗುತ್ತದೆಂದು ತಿಳಿಸಿದೆ. ಗೀತಾಮಹತ್ವದಲ್ಲಿ 13ನೇ ಶ್ಲೋಕದಲ್ಲಿ ಗೀತೆಯನ್ನು ಪ್ರತಿದಿನ ಒಂದು ಅಧ್ಯಾಯ ಓದುವುದರಿಂದ ಮನ್ವಂತರದವರೆಗೂ ನರಜನ್ಮ ಹೊಂದಿ, ಭೂಮಿ ಮೇಲೆ ಹುಟ್ಟುತ್ತಾರೆಂದು ಇದೆ. ಇದು ಗೀತೆಗೆ ವಿರುದ್ಧವಾದ ಮಾತು ಅಲ್ಲವೆ!

ಹಗಲೆಲ್ಲ ಪಾಪ ಮಾಡಿ ಸಾಯಂಕಾಲ ಗೀತೆಯನ್ನು ಓದುವವರು, ಕೇಳುವವರು ಕೆಲವರಿದ್ದಾರೆ. ಏಕೆಂದರೆ! ಗೀತೆಯನ್ನು ಕೇಳುವುದರಿಂದ ಮಾಡಿಕೊಂಡ ಪಾಪವೆಲ್ಲವೂ ಪುಣ್ಯವಾಗಿ ಬದಲಾಗುತ್ತದೆಂದು ಗೀತಾಮಹತ್ವದಲ್ಲಿ 18ನೇ ಶ್ಲೋಕದಲ್ಲಿ ಇರುವುದರಿಂದ ಅವರು ನಿರ್ಭಯವಾಗಿ ಪಾಪ ಮಾಡುತ್ತಾ, ಸಾಯಂಕಾಲ ಅದನ್ನು ಪುಣ್ಯವಾಗಿ ಬದಲಾಯಿಸಿಕೊಳ್ಳುವುದಕ್ಕೆ ಗೀತೆಯನ್ನು ಕೇಳುವುದು ಓದುವುದು ಮಾಡುತ್ತಿದ್ದಾರೆ ಹೊರತು ಅದರಲ್ಲಿನ ಅರ್ಥವನ್ನು ಗ್ರಹಿಸುತ್ತಿಲ್ಲ. ಗೀತೆಯಲ್ಲಿ ಏನು ಹೇಳಿದ್ದಾರೋ ತಿಳಿದು ನಡೆದುಕೊಯೆಂದು ಹೇಳಿದರೆ ಅದು ನಮಗೆ ಅಗತ್ಯವಿಲ್ಲ, ಅದು ನಮಗೆ ಸಾಧ್ಯವಾಗುವುದಿಲ್ಲ, ಅದಕ್ಕಿಂತ ಗೀತಾಮಹತ್ವದಲ್ಲಿ ಹೇಳಿದಂತೆ ಗೀತೆಯನ್ನು ಕೇಳುತ್ತಾಬಂದರೆ ಪಾಪ ಪುಣ್ಯವಾಗಿ ಬದಲಾಗುತ್ತದೆ ಅಲ್ಲವೆ! ಇದೇ ಸುಲಭ ಅಲ್ಲವೆ! ಎನ್ನುತ್ತಿದ್ದಾರೆ.

ಭಗವದ್ಗೀತೆ, ಪಾಪಪುಣ್ಯ ರಹಿತನಾಗಿ ಮೋಕ್ಷ ಹೊಂದು ಎಂದು ತಿಳಿಸಿದರೆ, ಗೀತಾಮಹತ್ವ ಪಾಪಗಳನ್ನು ಪುಣ್ಯಗಳಾಗಿ ಬದಲಾಯಿಸಿಕೊಯೆಂದು ತಿಳಿಸುತ್ತಿದೆ. ವಾಸ್ತವಕ್ಕೆ ಪಾಪಪುಣ್ಯಗಳು ಮಾನವರು ಸಂಪಾದಿಸಿದಾಗ ಅವು ಅವನ ಕರ್ಮಚಕ್ರದಲ್ಲಿನ ಸಂಚಿತಕರ್ಮದಲ್ಲಿ ಸೇರಿಹೋಗಿ ಮರುಜನ್ಮಗಳಲ್ಲಿ ಅನುಭವಿಸಬೇಕಾಗಿಬರುತ್ತದೆ. ಆದರೆ ಗೀತೆಯನ್ನು ಕೇಳುವುದರಿಂದ ಪಾಪ ಪುಣ್ಯವಾಗಿ ಬದಲಾಗುತ್ತದೆ ಎನ್ನುವುದು ಅಭೂತ ಕಲ್ಪನೆಯೇ ಹೊರತು ಸತ್ಯವಲ್ಲ. ಕೇಳುವುದಕ್ಕೆ ಅವಕಾಶ ಇದ್ದರೂ ಸಹ ಗೀತೆಯನ್ನು ಕೇಳದ ಒಬ್ಬ ವ್ಯಕ್ತಿಯನ್ನು ಭೇಟಿಯಾಗಿ "ಏನಯ್ಯ! ನೀನು ಗೀತೆಯನ್ನು ಕನಿಷ್ಟ ಕೇಳುವುದೂ ಸಹ ಇಲ್ಲ. ನಿಮ್ಮ ಮನೆಯಪಕ್ಕ ದೇವಾಲಯದದಲ್ಲಿ ಪ್ರತಿದಿನ ಗೀತೆಯನ್ನು

ಪಾರಾಯಣ ಮಾಡುತ್ತಿದ್ದಾರೆ! ಕೇಳುವುದಕ್ಕೆ ಒಳ್ಳೆಯ ಅವಕಾಶವಿದೆ" ಎಂದು ಕೇಳಿದರೆ, ಆತನು "ನಾನೇನು ಪಾಪಗಳು ಮಾಡಿಲ್ಲ. ಪಾಪ ಮಾಡಿದರೆ ಅಲ್ಲವೆ ಪುಣ್ಯಗಳನ್ನಾಗಿ ಬದಲಾಯಿಸಿಕೊಳ್ಳುವುದಕ್ಕೆ ಗೀತೆಯನ್ನು ಕೇಳಬೇಕು. ನಾನು ಪುಣ್ಯವನ್ನೇ ಮಾಡುತ್ತಿದ್ದೇನೆ, ಆದ್ದರಿಂದ ಗೀತೆಯನ್ನು ಕೇಳಬೇಕಾದ ಕೆಲಸವಿಲ್ಲ" ಎಂದನು. ನೀವೇಕೆ ಹಾಗೆನ್ನುತ್ತಿದ್ದೀರೆಂದು ನಾವು ಕೇಳಿದಾಗ "ಗೀತಾಮಹತ್ವದಲ್ಲಿ ಬರೆದಿಟ್ಟಿದ್ದಾರಲ್ಲಯ್ಯ! ನಿಮಗಷ್ಟರಮಟ್ಟಿಗೆ ತಿಳಿಯುವುದಿಲ್ಲವೆ" ಎಂದನು. ಆ ಮಾತು ಕೇಳಿದ ನಾವು ಗೀತಾಮಹತ್ವ ಮುಖ್ಯ ಅಲ್ಲಯ್ಯ ಗೀತೆಯೇ ಮುಖ್ಯವೆಂದು ಹೇಳಿದಾಗ, ಆತನು ನಗುತ್ತಾ ಹೀಗೆ ಹೇಳಿದ್ದಾನೆ. "ಗೀತಾ ಮಹತ್ವದಲ್ಲಿ 20ನೇ ಶ್ಲೋಕವನ್ನು ನೋಡು. ಗೀತೆಯನ್ನು ಓದಿದರೂ ಗೀತಾಮಹತ್ವವನ್ನು ಓದದೆ ಹೋದರೆ ಫಲಿತವೇ ಇಲ್ಲವೆಂದು ಇದೆ. ಆದ್ದರಿಂದ ಗೀತೆಗಿಂತ ಗೀತಾಮಹತ್ವವೇ ಮುಖ್ಯವೆಂದು ನಮಗೆ ತಿಳಿಯುತ್ತಿದೆ."

ಹೀಗೆ ಎಷ್ಟೋ ಜನ ಗೀತೆಗಿಂತಲೂ ಗೀತಾಮಹತ್ವದಲ್ಲಿ ಹೇಳಿದ ಮಾತುಗಳನ್ನೇ ಹೆಚ್ಚಾಗಿ ನಂಬಿ ನಡೆದುಕೊಳ್ಳುತ್ತಿದ್ದಾರೆ. ಅಂತಹ ಮತ್ತೊಬ್ಬವ್ಯಕ್ತಿ ಹತ್ತಿರ ಭೇಟಿಯಾಗಿ ಗೀತೆಯಲ್ಲಿನ ವಿಷಯಗಳನ್ನು ಕೇಳಿದಾಗ ಅದರಲ್ಲಿನ ವಿವರ ನಮಗೆ ಗೊತ್ತಿಲ್ಲ ಎಂದಿದ್ದಾನೆ. ಇದೇನು ವಿಚಿತ್ರ ಗೀತೆಯನ್ನು ಪ್ರತಿದಿನ ಓದುತ್ತಿದ್ದೀರಲ್ಲವೆ! ಎಂದು ಕೇಳಿದರೆ "ಹೌದಯ್ಯ ಗೀತೆಯನ್ನು ಪ್ರತಿದಿನ ಓದಿದರೆ ಅದರಲ್ಲಿನ ವಿಷಯಗಳಿಂದ ನಮಗೇನು ಕೆಲಸ" ಎಂದನು. ಮತ್ತೆ ಆ ವಿಷಯಗಳ ಹತ್ತಿರ ಕೆಲಸವಿಲ್ಲದ್ದು ಏಕೆ ಗೀತೆಯನ್ನು ಓದುತ್ತಿದ್ದೀರೆಂದು ಕೇಳಿದರೆ ಮೋಕ್ಷಕ್ಕೋಸ್ಕರವೆಂದು ಸಮಾಧಾನ ಹೇಳಿದ್ದಾನೆ. ಮೋಕ್ಷ ಎಂದರೆ ಏನೆಂದು ವಿವರ ತಿಳಿದು ಅದನ್ನು ಹೊಂದಬೇಕೆಂದರೆ ಗೀತೆಯಲ್ಲಿನ ಧರ್ಮಗಳು ತಿಳಿಯಬೇಕಲ್ಲವೆ! ಎಂದು ಕೇಳಿದರೆ ಆತನು ನಗುತ್ತಾ ಬೆಟ್ಟವನ್ನು ಅಗೆದು ಇಲಿಯನ್ನು ಹಿಡಿದಂತೆ ಅಷ್ಟುಶ್ರಮ ಏಕಯ್ಯಾ ನಾವು ಸುಲಭವಾಗಿ ಮೋಕ್ಷಹೊಂದಿದ್ದೇವೆ ಎಂದನು. ಏನು ಬದುಕಿರುವಾಗಲೇ ಮೋಕ್ಷವಾ! ದೇಹದಿಂದ ಇದ್ದಾಗಲೇ ಮೋಕ್ಷ ಹೊಂದಿದ್ದೀರಾ! ಎಂದು ಕೇಳಿದರೆ "ಹೌದಯ್ಯ

ಗೀತಾಮಹತ್ವದಲ್ಲಿ 19ನೇ ಶ್ಲೋಕವನ್ನು ನೋಡಲಿಲ್ಲವಾ! ಗೀತೆಯನ್ನು, ಗೀತಾ ಅರ್ಥವನ್ನು ಓದುವುದರಿಂದ ದೇಹದಿಂದಿರುವಾಗಲೇ ಮೋಕ್ಷ ಹೊಂದಿರುತ್ತಾರೆಂದು ಇದೆ ಅಲ್ಲವೆ! ನಾನು ಚಾಚೂ ತಪ್ಪದೆ ಪ್ರತಿದಿನ ಗೀತಾ ಶ್ಲೋಕಗಳು ತಾತ್ಪರ್ಯಗಳನ್ನು ಓದುತ್ತಿದ್ದೇನೆ. ಆದ್ದರಿಂದ ಗೀತಾಮಹತ್ವದ ಪ್ರಕಾರ ನಾನು ಈಗ ಮೋಕ್ಷದಲ್ಲಿ ಇದ್ದಂತೆ" ಎಂದು ಹೇಳಿದನು. ಹಾಗಲ್ಲ ಮೋಕ್ಷ ಎಂದರೆ ಶರೀರವನ್ನು ಬಿಟ್ಟು, ಯಾವ ಶರೀರ ಧರಿಸದೆ ಅಣುಅಣುವಿನಲ್ಲಿರುವ ಪರಮಾತ್ಮನಲ್ಲಿ ಸೇರಿಹೋಗುವುದೆಂದು ನಾವು ಹೇಳಿದರೆ, ಆತನು ಕೋಪ ಮಾಡಿಕೊಂಡು "ವಿಷ್ಣು ಹೇಳಿದ ಗೀತಾಮಹತ್ವವನ್ನೇ ಅಲ್ಲವೆಂದು ಇದು ಮೋಕ್ಷ ಅಲ್ಲಾ ಎನ್ನುತ್ತೀಯಾ! ನಿನಗೇನು ತಿಳಿದಿಲ್ಲ ಹೋಗು" ಎಂದನು. ಹೀಗೆ ಎಷ್ಟೋಜನ ಗೀತಾಮಹತ್ವದಲ್ಲಿನ ಮಾತುಗಳನ್ನೇ ನಂಬಿ ಅಸಲಾದ ಧರ್ಮಗಳನ್ನು ಬಿಟ್ಟು ಗೀತೆಗೇ ವಿರುದ್ಧವಾಗಿ ಬದಲಾಗಿಹೋಗುತ್ತಿದ್ದಾರೆ. ಇದರಲ್ಲಿನ ಮೊದಲ ತಪ್ಪು ಗೀತಾಮಹತ್ವವನ್ನು ಹೇಳಿದವರದಾಗುತ್ತದೆ. ವಾಸ್ತವಕ್ಕೆ ಹೇಳಿದವರು ಪ್ರಜೆಗಳನ್ನು ತಪ್ಪುದಾರಿ ಹಿಡಿಸಬೇಕೆಂದು ಹೇಳಲಿಲ್ಲ, ಒಳ್ಳೆಯದೇ ಮಾಡಬೇಕೆಂದು ಹೇಳಿದ್ದಾರೆ. ಆದರೆ ಅದು ಪ್ರಜೆಗಳ ಬಳಿ ದುರಾದೃಷ್ಟವಶಾತ್ ತಪ್ಪಾಗಿ ಪರಿಣಮಿಸಿದೆ.

ಅದೇ ಪದ್ಧತಿಯಲ್ಲಿ ಮತ್ತೆ ಕೆಲವರು ಹಿರಿಯರು ಗೀತಾ ಶ್ಲೋಕಗಳನ್ನು ಓದುವುದರಿಂದ ಪ್ರಪಂಚ ಕೆಲಸಗಳು ನೆರವೇರುತ್ತವೆಂಬ ಆಸೆಯನ್ನು ಕಲ್ಪಿಸಿದ್ದಾರೆ. ಒಂದೊಂದು ಶ್ಲೋಕ ಒಂದು ಮಂತ್ರವೆಂದು ಇಂತಹ ಶ್ಲೋಕವನ್ನು ಮಂತ್ರದಂತೆ ಓದುವುದರಿಂದ ಇಂತಹ ಕೆಲಸ ನೆರವೇರುತ್ತಿದೆಂದು ಹೇಳಿದ್ದಾರೆ. ಈ ಶ್ಲೋಕವನ್ನು ಓದುವುದರಿಂದ ಈ ರೋಗ ಹೋಗುತ್ತದೆಂದು, ಮತ್ತೊಂದು ಶ್ಲೋಕದಿಂದ ಕೋರ್ಟಿನಲ್ಲಿನ ಕೇಸು (ವ್ಯಾಜ್ಯವನ್ನು) ಗೆಲ್ಲುತ್ತೀರೆಂದು, ಹಾಗೇ ಸಂತಾನಕ್ಕೊಂದು ಶ್ಲೋಕ, ಧನಪ್ರಾಪ್ತಿಗೊಂದು ಶ್ಲೋಕ ಕೆಲಸಕ್ಕೆ ಬರುತ್ತದೆಂದು ಹೇಳಿದವರೂ ಇದ್ದಾರೆ. ಅದನ್ನು ನೋಡಿದ ನಾವು ಪ್ರಪಂಚ ಕೆಲಸಗಳಿಗೆ ಅಲ್ಲಯ್ಯ ಗೀತೆ ಇರುವುದು, ನಾವು ಜ್ಞಾನ ತಿಳಿದುಕೊಳ್ಳುವುದಕ್ಕೆಂದು ಹೇಳಿದರೆ, ಜ್ಞಾನ

ಅರ್ಜುನನಿಗೆ ಹೇಳಿದ್ದಾನೆ ಆದರೆ ನಮಗೆ ಅಲ್ಲ ಎನ್ನುತ್ತಿದ್ದಾರೆ. ಅರ್ಜುನನಿಗೆ ಹೇಳಿರುವುದೆ ನಮಗೂ ಕೆಲಸಕ್ಕೆ ಬರುತ್ತದೆ. ಆದ್ದರಿಂದ ಜ್ಞಾನ ತಿಳಿದು ಮೋಕ್ಷ ಹೊಂದಬಹುದೆಂದು ನಾವು ಹೇಳಿದರೆ, ಅದಕ್ಕೆ ಉತ್ತರವಾಗಿ ಹಿರಿಯರು ಇದರಿಂದ ಮೋಕ್ಷಬರುತ್ತದೆಂದು ಹೇಳಲಿಲ್ಲವೆ! ಈ ಶ್ಲೋಕ ಓದಿದರೆ ಈ ಕೆಲಸ ನೆರವೇರುತ್ತದೆಂದು ಹೇಳಿದ್ದಾರೆ! ಈ ಅಧ್ಯಾಯ ಓದಿದರೆ ಈ ಫಲಿತವಿರುತ್ತದೆಂದು ಬರೆದಿದ್ದಾರೆ. ನನಗೆ ಈಗ ಕೋರ್ಟಿನಲ್ಲಿ ಕೇಸು ಇದೆ, ಆದ್ದರಿಂದ ಅದು ನೆರವೇರುವುದಕ್ಕೆ ಇದು ಸರಿಹೋಗುತ್ತದೆಂದು ಹಿರಿಯರು ಹೇಳಿದ ಶ್ಲೋಕವನ್ನು ಪ್ರತಿದಿನ ಪಠಿಸುತ್ತಿದ್ದೇನೆಂದನು. ಹೀಗೆ ಗೀತಾಮಹತ್ವವು ಪ್ರಜೆಗಳನ್ನು ಗೀತೆಗೆ ಹತ್ತಿರಮಾಡಿದೆ ಆದರೆ ಗೀತೆಯೊಂದರ ಭಾವನೆಗೆ ದೂರ ಮಾಡಿದೆ. ಗೀತೆಗೆ ಮಹತ್ವವಿದೆ ಎಂದು ತಿಳಿದುಕೊಂಡವರು ಶ್ಲೋಕಗಳನ್ನು ಪಾರಾಯಣ, ಪುಸ್ತಕಗಳನ್ನು ಪೂಜೆ ಮಾಡುತ್ತಿದ್ದಾರೆ ಹೊರತು ಗೀತೆಯಲ್ಲಿ ಜ್ಞಾನಕ್ಕೆ ಹತ್ತಿರವಾಗುತ್ತಿಲ್ಲ. ಇಂದಿನಿಂದ ಗೀತೆಯನ್ನು ಓದುವವರು ಶ್ರೀಕೃಷ್ಣನು ಆ ದಿನ ಅರ್ಜುನನಿಗೆ ಮಾತ್ರ ಅಲ್ಲ, ನಮಗೂ ಸಹ ಹೇಳಿದ್ದಾನೆಂದು ಅದರಲ್ಲಿನ ಭಾವನೆಯನ್ನು ಗ್ರಹಿಸಿ ಓದಿರಿ. ಅಷ್ಟೋ ಇಷ್ಟೋ ಜ್ಞಾನಿಗಳಾದವರು ಗೀತಾಮಹತ್ವವನ್ನು ಓದದಂತೆ ಗೀತೆಯಲ್ಲಿನ ವಿಷಯಗಳನ್ನೇ ಓದಿ ಅರ್ಥ ಮಾಡಿಕೊಳ್ಳಬೇಕು. ಗೀತಾಮಹತ್ವದ ಪ್ರಕಾರ ಯಾವುವೋ ಪ್ರಪಂಚ ಕೋರಿಕೆಗಳು ನೆರವೇರುತ್ತವೆಂಬ ಉದ್ದೇಶದಿಂದ ಗೀತೆಯನ್ನು ಓದಬಾರದು. ಫಲಿತದ ಮೇಲೆ ಆಸೆ ಇಲ್ಲದಂತೆ ಓದಬೇಕು. ಗೀತೆಗೂ, ಗೀತಾಮುಹತ್ವಕ್ಕೂ ಎಂತಹ ಸಂಬಂಧವಿಲ್ಲವೆಂದು, ಗೀತೆ ಶಾಸ್ತ್ರಬದ್ಧವಾದುದೆಂದು, ಗೀತಾಮಹತ್ವ ಶಾಸ್ತ್ರ ಅಲ್ಲವೆಂದು, ಅದು ಕೇವಲ ಪುರಾಣವೆಂದು ತಿಳಿಯಬೇಕು. ಹೀಗೆ ವಿಶದೀಕರಿಸಿಕೊಳ್ಳುತ್ತಾ ಹೋದರೆ ಕುರುಕ್ಷೇತ್ರ ಧರ್ಮಕ್ಷೇತ್ರವೇನಾ! ಎನ್ನುವ ಪ್ರಶ್ನೆಯೂ ಉದ್ಭವಿಸುತ್ತದೆ. ಗೀತೆ ಯುದ್ಧರಂಗದಲ್ಲಿ ಪ್ರಾರಂಭವಾಗಿದೆ. ಆ ಯುದ್ಧ ಏಕೆ ಸಂಭವಿಸಿದೆಯೋ ಎಲ್ಲರಿಗೂ ತಿಳಿದಿದೆ. ನಿಜ ಹೇಳಬೇಕೆಂದರೆ ಹೊತ್ತು ಹೋಗದೆ ಜೂಜಾಡಿ ಇಟ್ಟುಕೊಂಡ ಯುದ್ಧವೆಂದು ಎಲ್ಲರಿಗೂ ತಿಳಿದಿದೆ. ಆ ಯುದ್ಧ ಕುರುಕ್ಷೇತ್ರದಲ್ಲಿ ನಡೆದಿದೆ. ಆ ಕುರುಕ್ಷೇತ್ರವನ್ನು ಧರ್ಮಕ್ಷೇತ್ರ ಎನ್ನುವುದೂ

ಸಹ ನಡೆದಿದೆ. ವಾಸ್ತವಕ್ಕೆ ಕುರುಕ್ಷೇತ್ರ ಧರ್ಮಕ್ಷೇತ್ರವೇನಾ? ಎನ್ನುವುದು ಪ್ರಶ್ನೆ, ಅದನ್ನು ಪರಿಶೀಲಿಸಿ ನೋಡೋಣ.

ಪ್ರಪಂಚದಲ್ಲಿ ಮೊದಲಿನಿಂದ ಬಡವನಿಗೊಂದು ನ್ಯಾಯ, ಧನಿಕನಿಗೊಂದು ನ್ಯಾಯ ಸಹಜವಾಗಿದೆ. ಬಡವನು ಚಿಕ್ಕ ತಪ್ಪು ಮಾಡಿದರೆ ಅವನನ್ನು ತಪ್ಪಿತಸ್ತನನ್ನಾಗಿ ಪ್ರಚಾರ ಮಾಡುತ್ತಾರೆ. ಅದೇ ಧನಿಕನು ಮಾಡಿದರೆ ಅವನನ್ನು ಏನೂ ಅನ್ನದೆ ಅವನು ಮಾಡಿದ ತಪ್ಪನ್ನೂ ಸಹ ಸಮರ್ಥಿಸುತ್ತಾರೆ. ಒಂದು ಊರಿನಲ್ಲಿ ಒಬ್ಬ ಬಡವನು ಒಬ್ಬ ಸ್ತ್ರೀಯಜೊತೆ ಅಕ್ರಮ ಸಂಬಂಧ ಏರ್ಪಡಿಸಿಕೊಂಡರೆ ಅವನನ್ನು ಬೈದ ಪ್ರಜೆಗಳೆ, ಅದೇ ಊರಿನಲ್ಲಿ ಅದೇ ಕೆಲಸವನ್ನು ಒಬ್ಬ ಧನಿಕನು ಮಾಡಿದರೆ ಅವನು ಗಂಡಸು ಏನು ಮಾಡಿದರು ತಪ್ಪಿಲ್ಲ ಎಂದಿದ್ದಾರೆ. ಹೀಗೆ ಅನೇಕ ಕಡೆ ಅನೇಕ ವಿಧಗಳ ತಪ್ಪುಗಳನ್ನು ಧನಿಕರ ಬಳಿ ಒಂದು ವಿಧವಾಗಿ, ಬಡವರ ಬಳಿ ಮತ್ತೊಂದು ವಿಧವಾಗಿ ಮಾತನಾಡುವುದು ನಡೆಯುತ್ತಿದೆ. ನನಗೆ ತಿಳಿದ ಮತ್ತೊಬ್ಬ ವ್ಯಕ್ತಿ ಜೂಜಾಡಿ ಇರುವ ಆಸ್ತಿ ಎಲ್ಲವನ್ನೂ ಕಳೆದುಕೊಂಡರೆ ಆತನನ್ನು ಛೀ ಎಂದಿದ್ದಾರೆ. ಹಾಗಂದವರೇ ಆಸ್ತಿಯನ್ನು ಮತ್ತು ಹೆಂಡತಿಯನ್ನೂ ಸಹ ಜೂಜಿನಲ್ಲಿಟ್ಟು ಸೋತುಹೋದ ಧರ್ಮರಾಜನನ್ನು ಧರ್ಮಪರನು ಎಂದಿದ್ದಾರೆ. ಇದೇ ಬಡವ ಧನಿಕರಿಗಿರುವ ವ್ಯತ್ಯಾಸ ನೋಡಿರಿ.

ಆಸ್ತಿಯನ್ನು, ಅಣ್ಣತಮ್ಮಂದಿರನ್ನು ಕೊನೆಗೆ ಹೆಂಡತಿಯನ್ನೂ ಸಹ ಕಳೆದುಕೊಂಡ ಧರ್ಮರಾಜ ಮತ್ತೆ ತನ್ನ ಆಸ್ತಿಗೋಸ್ಕರ ಯುದ್ಧಕ್ಕೆ ಸಿದ್ಧನಾಗಿದ್ದಾನೆ. ಆ ಯುದ್ಧ ಈ ದಿನ ಪಂಜಾಬ್ ರಾಷ್ಟ್ರದಲ್ಲಿರುವ ಕುರುಕ್ಷೇತ್ರದಲ್ಲಿ ನಡೆದಿದೆ. ಆ ಕ್ಷೇತ್ರದಲ್ಲಿ ಧರ್ಮ ಈಗಾಗಲಿ, ಆಗಾಗಲಿ ಇಲ್ಲ ಎಂದೇ ಹೇಳಬಹುದು. ಏಕೆಂದರೆ ಈದಿನ ಆ ಸ್ಥಳ ದೊಡ್ಡ ಪಟ್ಟಣವಾಗಿದೆ. ಎಲ್ಲಾ ಸ್ಥಳಗಳಲ್ಲಿ ನಡೆದಂತೆ ಅಲ್ಲಿಯೂ ಸಹ ಮೋಸಗಳು, ಕುತಂತ್ರಗಳು, ಹತ್ಯೆಗಳು, ಗಲಾಟೆಗಳು ನಡೆಯುತ್ತಲೇ ಇವೆ. ಈ ದಿನ ಸಿಕ್ಕರು ತಮಗೆ ಪ್ರತ್ಯೇಕವಾದ ರಾಷ್ಟ್ರ ಬೇಕೆಂದು ಹೋರಾಟ ನಡೆಸಿ ಎಷ್ಟೋಜನ ಹತವಾಗಿದ್ದಾರೆ. ಆ ದಿನ ಭೂಮಿಗಾಗಿಯೇ ಯುದ್ಧ ನಡೆದಿದೆ. ಭಾರತ ದೇಶದ ಚರಿತ್ರೆಯಲ್ಲಿ ಇಂದಿಗೂ, ಅಂದಿಗೂ ಯುದ್ಧದಲ್ಲಿ

ಹೆಸರುಗಳಿಸಿ ರಕ್ತದಿಂದ ನೆಂದ ಆ ಭೂಮಿಯನ್ನು ಧರ್ಮಕ್ಷೇತ್ರ ಎನ್ನುವುದು ಸರಿಯಾದ ಭಾವನೆ ಅಲ್ಲವೆಂದೇ ಹೇಳಬಹುದು.

ಕುರುಕ್ಷೇತ್ರವನ್ನು ಧರ್ಮಕ್ಷೇತ್ರವೆಂದು ಶ್ರೀಕೃಷ್ಣನು ಕರೆದಿಲ್ಲ. ಮಧ್ಯದಲ್ಲಿರುವ ವರು ಕರೆದಿದ್ದಾರೆಂದುಕೊಳ್ಳಿ, ಅದಕ್ಕೆ ಆ ಹೆಸರು ಸರಿಯೋ? ಸರಿಯಲ್ಲವೋ ಎನ್ನುವ ಪ್ರಶ್ನೆಯನ್ನು ಹಾಕಿಕೊಂಡು ಯೋಚಿಸಬೇಕು. ಮೊದಲು ಧರ್ಮ ಎಂದರೆ ಏನೋ ತಿಳಿಯಬೇಕು. ಧರ್ಮ ಎಂದರೆ ಇಂತಹುದೆಂದು ತಿಳಿದಾಗಲೇ ಅದು ಧರ್ಮಕ್ಷೇತ್ರವೋ ಅಲ್ಲವೋ ಎಂಬ ವಿವರ ನಮಗೆ ತಿಳಿಯುತ್ತದೆ. ಆದೂ ಅಲ್ಲದೆ ಧರ್ಮಯುಕ್ತವಾದ ಭಗವದ್ಗೀತೆಯನ್ನು ತಿಳಿದುಕೊಳ್ಳವುದಕ್ಕೆ ಮೊದಲು ಧರ್ಮಗಳನ್ನು ಕುರಿತು ಸ್ವಲ್ಪವಾದರೂ ತಿಳಿದಿರಬೇಕು. ಆಗಲೇ ಗೀತೆಯಲ್ಲಿ ಇವು ಭಗವಂತನು ಹೇಳಿದ ಧರ್ಮಯುಕ್ತವಾದ ವಾಕ್ಯಗಳೆಂದು, ಇವು ಮನುಷ್ಯರು ಹೇಳಿದ ಅಧರ್ಮಯುಕ್ತಗಳಾದ ಮಾತುಗಳೆಂದು ಗುರುತಿಸುವುದಕ್ಕೆ ಸಾಧ್ಯವಾಗುತ್ತದೆ.

ಜಡ್ಜ್‌ಗಳ ಮೀಟಿಂಗ್‌ನಲ್ಲಿ ಮಂತ್ರಿಯವರು ಉಪನ್ಯಸಿಸುತ್ತಾ ನ್ಯಾಯ ವನ್ನು ನಿರ್ಣಯಿಸಿ ತೀರ್ಪು ಹೇಳುವ ನ್ಯಾಯಮೂರ್ತಿಗಳನ್ನು ಧರ್ಮಪರರೆಂದು ವರ್ಣಿಸುತ್ತಾ, ನೀವು ಧರ್ಮದ ಪ್ರಕಾರ ತೀರ್ಪು ಹೇಳುತ್ತಾ ಧರ್ಮವನ್ನು ಕಾಪಾಡಬೇಕಾಗಿರುವುದು ನಿಮ್ಮ ಕೈಯಲ್ಲಿ ಇದೆಯೆಂದು, ಯಾವ ಪ್ರಲೋಭೆಗಳಿಗೂ ಒಳಗಾಗದಂತೆ ಧರ್ಮವನ್ನು ನಿರ್ವಹಿಸಬೇಕೆಂದಿದ್ದಾನೆ. ಇಲ್ಲಿ ಮಂತ್ರಿಗಳು ನ್ಯಾಯವನ್ನು ಮತ್ತು ಧರ್ಮವನ್ನು ಎರಡನ್ನು ಸೇರಿಸಿ ನ್ಯಾಯಮೂರ್ತಿಗಳನ್ನು ಧರ್ಮಮೂರ್ತಿಗಳು ಎಂದಿದ್ದಾರೆ. ಹಾಗೆಯೇ ಬಹಳ ಜನರೂ ಸಹ ನ್ಯಾಯ, ಧರ್ಮ ಒಂದೇ ಎಂದು ತಿಳಿದು ನ್ಯಾಯವೆಂದು ಹೇಳುವ ಸಂದರ್ಭಗಳಲ್ಲಿ ಧರ್ಮವೆಂಬ ಪದ ಬಳಸುತ್ತಿದ್ದಾರೆ. ಇದು ಪ್ರಜೆಗಳ ತಪ್ಪಾದರೆ ಇನ್ನೂ ಸ್ವಾಮಿಗಳಾದವರು ಜ್ಞಾನ, ನೀತಿ ಎರಡೂ ಒಂದೇ ಎಂದು ತಿಳಿದು, ಅವರು ಜ್ಞಾನ ಹೇಳಬೇಕಾದ ಸಂದರ್ಭಗಳಲ್ಲಿ ನೀತಿಯನ್ನು ಹೇಳುತ್ತಿದ್ದಾರೆ. ಹೀಗೆ ಪ್ರಜೆಗಳಿಗೆ ನ್ಯಾಯಧರ್ಮಗಳ ವ್ಯತ್ಯಾಸ ತಿಳಿಯದೇ

ಹೋಗಿ, ಜ್ಞಾನ, ನೀತಿ ವ್ಯತ್ಯಾಸಗಳು ಸ್ವಾಮಿಗಳಿಗೂ ಸಹ ತಿಳಿಯದಂತೆ ಹೋಗಿವೆ.

ನೀತಿ, ನ್ಯಾಯಗಳು ಒಂದು ಜಾತಿಯಾಗಿದ್ದು, ಜ್ಞಾನ ಧರ್ಮಗಳು ಮತ್ತೊಂದು ಜಾತಿ ಆಗುತ್ತವೆ. ನೀತಿ, ನ್ಯಾಯ ಪ್ರಪಂಚ ಸಂಬಂಧವಾಗಿದ್ದರೆ, ಜ್ಞಾನಧರ್ಮಗಳು ಪರಮಾತ್ಮ ಸಂಬಂಧವಾಗುತ್ತವೆ. ನೀತಿ ನ್ಯಾಯಯುಕ್ತವಾದರೆ, ಜ್ಞಾನ ಧರ್ಮಯುಕ್ತವಾಗುತ್ತದೆ. ನೀತಿಯನ್ನು ಆಚರಿಸಿದರೆ ನ್ಯಾಯವಾಗುತ್ತದೆ, ಅವಿನೀತಿಯನ್ನು ಆಚರಿಸಿದರೆ ಅನ್ಯಾಯವಾಗುತ್ತದೆ. ಹಾಗೆಯೇ ಜ್ಞಾನವನ್ನು ಆಚರಿಸಿದರೆ ಧರ್ಮವಾಗುತ್ತದೆ. ಅಜ್ಞಾನವನ್ನು ಆಚರಿಸಿದರೆ ಅಧರ್ಮವಾಗುತ್ತದೆ. ನೀತಿ ನ್ಯಾಯಗಳನ್ನು ಆಚರಿಸುವುದನ್ನನುಸರಿಸಿ ಪುಣ್ಯ, ಅವಿನೀತಿ ಅನ್ಯಾಯಗಳ ಆಚರಣೆಯನ್ನನುಸರಿಸಿ ಪಾಪ ಬರುತ್ತದೆ. ಹಾಗೆಯೇ ಜ್ಞಾನ ಧರ್ಮಗಳನ್ನನುಸರಿಸಿ ಪಾಪಪುಣ್ಯಗಳೆಂಬ ಕರ್ಮ ನಶಿಸಿಹೋಗುವುದು ನಡೆಯುತ್ತದೆ.

ನೀತಿ ಪ್ರಪಂಚದಲ್ಲಿ ಮಾನವನ ಪ್ರವರ್ತನೆಯನ್ನು ಸೂಚಿಸಿ ಸತ್‌ಪ್ರವರ್ತನನ್ನಾಗಿ ಮಾಡುತ್ತದೆ. ಮಾನವನ ಪ್ರವರ್ತನೆಯ ಮೇಲೆಯೇ ನ್ಯಾಯ ಅನ್ಯಾಯಗಳು ಆಧಾರಪಟ್ಟಿರುತ್ತವೆ. ಪ್ರವರ್ತನೆ ಸರಿಯಾದಾಗ ನ್ಯಾಯವೆಂದು, ಪ್ರವರ್ತನೆ ಸರಿಯಲ್ಲದಿರುವಾಗ ಅನ್ಯಾಯವೆಂದು ನಿರ್ಣಯಿಸಬೇಕಾಗಿರುತ್ತದೆ. ಹಾಗೇ ಜ್ಞಾನ ಆಧ್ಯಾತ್ಮಿಕವಾಗಿ ಮಾನವನ ಕಟ್ಟುಪಾಡುಗಳನ್ನು ಸೂಚಿಸಿ ಸತ್ಪುರುಷನನ್ನಾಗಿ (ಯೋಗಿಯನ್ನಾಗಿ) ಬದಲಾವಣೆ ಮಾಡುತ್ತದೆ. ಜ್ಞಾನವನ್ನು ಆಚರಿಸುವುದರ ಮೇಲೆಯೇ ಧರ್ಮಾಧರ್ಮಗಳು ಆಧಾರಪಟ್ಟಿರುತ್ತವೆ. ಮಾನವನ ಬಾಹ್ಯಾಚರಣೆಗೆ ಸಂಬಂಧಿಸಿರುವುದು ನ್ಯಾಯವಾದರೆ, ಅಂತರ್ಭಾವನೆಗಳ ಮೇಲೆ ಆಧಾರಪಟ್ಟಿರುವುದು ಧರ್ಮ. ಅಂತರಾಚರಣೆಯಲ್ಲಿ ಧರ್ಮ ಬಾಹ್ಯದಲ್ಲಿ ಅವನೀತಿ, ಅನ್ಯಾಯವಾಗಿ ಕಾಣಿಸಬಹುದು. ಆದ್ದರಿಂದ ಧರ್ಮಗಳು ಇವು ಎಂದು ಹೇಳಿದ ಶ್ರೀಕೃಷ್ಣನೂ ಸಹ ಬಾಹ್ಯ ಪ್ರಪಂಚದಲ್ಲಿ ಕೆಲವರಿಗೆ ಅಸತ್ಯಪರನಾಗಿ ಅಕ್ರಮಗಳು ಮಾಡಿದವನಾಗಿ ಕಾಣಿಸಿದ್ದಾನೆ.

ವಾಸ್ತವಕ್ಕೆ ನೀತಿನ್ಯಾಯವಿದು ಎಂದು, ಜ್ಞಾನ ಧರ್ಮಗಳು ಇವು ಎಂದು ತಿಳಿದರೆ ಮಾತ್ರವೇ ಎದುರಿಗಿರುವವನನ್ನು ಪೂರ್ತಿಯಾಗಿ ಗುರುತಿಸಲಾರೆವು. ನೀತಿ ನ್ಯಾಯ ತಿಳಿದರೆ ಮಾತ್ರ, ಪ್ರಪಂಚ ಮಾನವರ ಸ್ಥಾನವನ್ನು ಗುರುತಿಸಿ ಹೇಳಬಹುದು. ಆದರೆ ಯೋಗಮಾರ್ಗದಲ್ಲಿ ಯಾರೆಷ್ಟುಮಟ್ಟದವರೋ ಹೇಳಲಾರೆವು. ಭೂಮಿ ಮೇಲೆ ಮಾನವರು ನೀತಿ ನ್ಯಾಯವನ್ನು ಗುರುತಿಸುತ್ತಾರೆನೋ ಆದರೆ, ಜ್ಞಾನ ಧರ್ಮಗಳನ್ನು ಗುರುತಿಸುವುದು ಬಹಳ ಕಷ್ಟ. ಆದ್ದರಿಂದ ಈಗಿನ ಕಾಲದಲ್ಲಿ ಬಹಳಜನರು ಸ್ವಾಮಿಗಳೂ ಸಹ ಜ್ಞಾನ ಧರ್ಮಗಳಿವು ಎಂದು ಗುರುತಿಸಲಾರದೆ ಹೋಗಿದ್ದಾರೆ. ಜ್ಞಾನವೆಂದು ಕೊಂಡು ನೀತಿಯನ್ನು ಹಿಡಿದುಕೊಂಡು ನೇತಾಡುತ್ತಿದ್ದಾರೆ. ಪ್ರಜೆಗಳಿಗೆ ಪುಣ್ಯಬರುವ ಕೆಲಸಗಳನ್ನೇ ಬೋಧಿಸುತ್ತಾ ಅದೇ ಜ್ಞಾನಾಚರಣೆ ಎಂದು ಕೊಳ್ಳುತ್ತಿದ್ದಾರೆ. ಪಾಪಪುಣ್ಯಗಳು ನಶಿಸುವ ಜ್ಞಾನವನ್ನು ತಿಳಿಸಲಾರದೆ ಹೋಗುತ್ತಿದ್ದಾರೆ. ಆದ್ದರಿಂದ ಬಹಳ ಜನರು ನೀತಿಯನ್ನೇ ಜ್ಞಾನವೆಂದು, ನ್ಯಾಯವನ್ನೇ ಧರ್ಮವೆಂದು ತಿಳಿಯುತ್ತಿದ್ದಾರೆ. ಕೋರ್ಟಿನಲ್ಲಿರುವ ನ್ಯಾಯ ಮೂರ್ತಿಗಳನ್ನು ಧರ್ಮಮೂರ್ತಿಗಳೆಂದು, ಅವರ ಆಸನಗಳನ್ನು ಧರ್ಮಾ ಸನಗಳೆಂದು ಹೇಳುವುದೂ ಸಹ ಕೇಳುತ್ತಿದ್ದೇವೆ.

ಎಷ್ಟೋ ಪುಣ್ಯಗಳು ಮಾಡುತ್ತಿರುವ ಮಾನವನು ಅವುಗಳನ್ನು ಧಾರ್ಮಿಕ ಕಾರ್ಯಗಳು ಮಾಡುತ್ತಿರುವ ಹಾಗೆ ಹೇಳುತ್ತಿದ್ದಾನೆಂದರೆ ಧರ್ಮ ಎನ್ನುವುದು ಪ್ರತ್ಯೇಕವಾದುದೆಂದು ತಿಳಿಯದೆ ಹೋಗಿರುವುದೇ ಕಾರಣ. ಅಷ್ಟೇ ಅಲ್ಲದೆ ನೀತಿ ಕಾರ್ಯವಾದ ದಾನ ಮಾಡುವ ಪ್ರತಿ ಸಂದರ್ಭದಲ್ಲಿಯೂ ಧರ್ಮ ಮಾಡುತ್ತಿದ್ದೇನೆನ್ನುವುದೂ ಸಹ ಗ್ರಹಿಸಬಹುದು. ಒಂದು ದೇವಾಲಯದಲ್ಲಿ ಫ್ಯಾನನ್ನು ಒಬ್ಬನು ದಾನ ಮಾಡಿದ್ದಾನೆಂದುಕೊಳ್ಳೋಣ. ಅಲ್ಲಿ ಫ್ಯಾನ್ ಮೇಲೆ ಇಂತಹವರ ಧರ್ಮವೆಂದು ದಾನ ಮಾಡಿದವರ ಹೆಸರನ್ನು ಬರೆದಿರುತ್ತಾರೆ. ಇಂತಹವರ ದಾನವೆಂದು ಮಾತ್ರ ಇರುವುದಿಲ್ಲ. ಆತನು ಮಾಡಿರುವುದು ದಾನವೇ ಆದರೂ ಧರ್ಮವೆಂದು ಬರೆಯುವುದರಲ್ಲಿ ಅರ್ಥವೇ ಇಲ್ಲ. ಹೀಗೆ

ತಿಳಿಯದತನ ಎಲ್ಲರಲ್ಲಿ ವ್ಯಾಪಿಸಿ ಕೊನೆಗೆ ಭಿಕ್ಷೆ ಕೇಳುವವನೂ ಸಹ ದಾನ ಮಾಡಿ ಎನ್ನದೇ, ಧರ್ಮಮಾಡಿ ಎನ್ನುವುದು ನೋಡುತ್ತಲೇ ಇದ್ದೇವೆ. ಈ ಪರಿಸ್ಥಿತಿಯನ್ನು ಅನುಸರಿಸಿ ನೋಡಿದರೆ ಧನಿಕರಿಂದ ಪ್ರಾರಂಭಿಸಿ ಭಿಕ್ಷುಕನವರೆಗೂ ಧರ್ಮ ಎಂದರೆ ಏನೆಂದು ತಿಳಿಯದೇ ಹೋಗಿದೆಯೆಂದು ಅರ್ಥವಾಗುತ್ತಿದೆ. ಸ್ವಾಮಿಗಳು ಸಹಿತ ಪುಣ್ಯ ಬರುವ ಸಿಹಿಯಾದ ನೀತಿಮಾತುಗಳೇ ಹೇಳುತ್ತಿದ್ದಾರೆಂದರೆ ಧರ್ಮಕ್ಕೆ ಭೂಮಿ ಮೇಲೆ ಗುರುತು ಇಲ್ಲವೆಂದು ಅರ್ಥವಾಗುತ್ತಿದೆ.

ಹೀಗೆ ಧರ್ಮಾಧರ್ಮಗಳ ವಿವರದ ಪ್ರಕಾರ ನೋಡಿದರೆ ಯಾವ ಕಾರಣಕ್ಕೂ ಕುರುಕ್ಷೇತ್ರವು ಧರ್ಮಕ್ಷೇತ್ರವಲ್ಲ. ಅವಿನೀತಿ, ಅನ್ಯಾಯಗಳಿಗೆ ಅಭ್ಯಾಸವಾದ ಮನುಷ್ಯರ ಮಧ್ಯೆ ನಡೆದ ಹೋರಾಟದ ಸ್ಥಳವನ್ನು ಧರ್ಮಕ್ಷೇತ್ರ ಎನ್ನುವುದು ಸಮಂಜಸವಲ್ಲ. ಆ ದಿನ ಕೌರವ ಪಾಂಡವರು ನೀತಿಯನ್ನು ಉಲ್ಲಂಘಿಸಿ, ಸಂಗ್ರಾಮದಲ್ಲಿ ಯುದ್ಧದ ಕಟ್ಟುಪಾಡುಗಳನ್ನು ಅತಿಕ್ರಮಿಸಿ, ಮೋಸದಿಂದ ಒಬ್ಬರನ್ನೊಬ್ಬರುಕೊಂದು ರಕ್ತಸಿಕ್ತವಾಗಿ ಚರಿತ್ರೆಗೆ ಏರಿದ ಸ್ಥಳ ಧರ್ಮಕ್ಷೇತ್ರವಾ? ಹಾಗೆ ಅದು ಧರ್ಮಕ್ಷೇತ್ರವಾದರೆ, ಪೌರುಷವನ್ನೇ ಉಸಿರಾಗಿ ವರ್ಗಗಳ ದ್ವೇಷದಿಂದ ಹೆಸರುವಾಸಿಯಾದ ಆಂಧ್ರಪ್ರದೇಶ್ ರಾಜ್ಯದಲ್ಲಿನ ರಾಯಲಸೀಮೆಯ ಜಿಲ್ಲೆಗಳೂ ಸಹ ಧರ್ಮಕ್ಷೇತ್ರಗಳೇ ಆಗುತ್ತವೆ.

ಆಚರಣೆಗೆ ಯೋಗ್ಯವಾದುದು ಧರ್ಮ, ಅದು ಚಲನೆ ಹೊಂದಿದ ಮಾನವರು ಮಾತ್ರವೇ ಆಚರಿಸುವುದಕ್ಕೆ ಉಪಯೋಗಪಡುತ್ತದೆ. ಆದ್ದರಿಂದ ಧರ್ಮಪರನು ಅಧರ್ಮಪರರೆಂದು ಮನುಷ್ಯರನ್ನು ಕರೆಯಬಹುದು. ಆದರೆ ಚೈತನ್ಯವಿಲ್ಲದ ಭೂಮಿಗೆ ಧರ್ಮಕ್ಷೇತ್ರವೆಂದು ಹೆಸರು ಇಡುವುದರಲ್ಲಿ ಅರ್ಥವಿಲ್ಲ. ಸೈನ್ಸ್ (ವಿಜ್ಞಾನದ) ಪ್ರಕಾರ ಒಂದೊಂದು ವಸ್ತುವಿಗು ಒಂದೊಂದು ಧರ್ಮವಿದೆ. ಹಾಗೇ ಬ್ರಹ್ಮವಿದ್ಯೆಯನ್ನು ತಿಳಿಸುವ ಯೋಗಶಾಸ್ತ್ರದ ಪ್ರಕಾರ ದೈವಕ್ಕೂ ಸಹ ಧರ್ಮವಿದೆ. ದೈವಧರ್ಮವನ್ನು ಆಚರಿಸಿದಾಗ ಮಾನವನು ಸಹ ದೇವರಾಗಿ ಬದಲಾಗುತ್ತಾನೆ. ಮಾನವನು ಪರಮಾತ್ಮನಿಂದ ಹೊರಗೆ ಬಂದ ಜೀವಾತ್ಮ. ಜೀವಾತ್ಮ ತನ್ನ ಪೂರ್ವದ ಧರ್ಮವಾದ ಪರಮಾತ್ಮ ಧರ್ಮವನ್ನು ಎಂದರೆ

ತನ್ನ ಸ್ವಧರ್ಮವನ್ನು ಆಚರಿಸಿದ ಪಕ್ಷದಲ್ಲಿ ಪುನಃ ಪರಮಾತ್ಮನ ಸ್ಥಾನದಲ್ಲಿ ಸೇರಿಹೋಗುತ್ತಾನೆ. ಗಾಳಿ ನೀರು ಬೇರೆ ಬೇರೆಯಾದರೂ ಗಾಳಿಯಿಂದಲೇ ನೀರು ಹುಟ್ಟಿದೆ. ಆದ್ದರಿಂದ ಪುನಃ ಗಾಳಿಯಾಗಿ ಬದಲಾವಣೆಯಾಗಬಲ್ಲದು. ನೀರು ಗಾಳಿಯಾಗಿ ಬದಲಾವಣೆಯಾಗುವುದಕ್ಕೆ ಪ್ರಯೋಗ ಅಗತ್ಯ. ಹಾಗೆಯೇ ಜೀವಾತ್ಮ ಪರಮಾತ್ಮನಾಗಿ ಬದಲಾಗುವುದಕ್ಕೆ ಯೋಗ ಅಗತ್ಯ. ಯಾವ ಪ್ರಯೋಗದ ಮೂಲಕ ನೀರು ಗಾಳಿಯಾಗಿ ಬದಲಾಗುತ್ತದೋ ಆ ವಿಧಾನವನ್ನು ಶಾಸ್ತ್ರಜ್ಞರು ತಿಳಿಸಿದಂತೆ, ಯಾವ ಯೋಗದ ಮೂಲಕ ಜೀವಾತ್ಮ ಪರಮಾತ್ಮನಾಗಿ ಬದಲಾಗುತ್ತಾನೋ ಆ ವಿಧಾನವನ್ನು ಭಗವಂತನಾದ ಶ್ರೀಕೃಷ್ಣನು ತಿಳಿಸಿದ್ದಾನೆ. ಪ್ರಯೋಗದಲ್ಲಿ ಯಾವ ಪದ್ಧತಿಗಳನ್ನು ಅನುಸರಿಸಬೇಕೋ ಎಂದು ಶಾಸ್ತ್ರಜ್ಞರು ತಿಳಿಸಿದಂತೆ ಯೋಗದಲ್ಲಿ ಯಾವ ಪದ್ಧತಿಗಳು ಅನುಸರಿಸಬೇಕೋ ಎಂದು ಶ್ರೀಕೃಷ್ಣನು ತಿಳಿಸಿದ್ದಾನೆ. ಆ ಪದ್ಧತಿಗಳೇ ಗೀತೆಯಲ್ಲಿವೆ. ನೀರು ಗಾಳಿಯಾಗಿ ಬದಲಾಗುವುದು ಶಾಸ್ತ್ರಬದ್ಧವಾದ ವಿಷಯ. ಹಾಗೆಯೇ ಜೀವಾತ್ಮ ಪರಮಾತ್ಮನಾಗಿ ಬದಲಾಗುವುದೂ ಸಹ ಶಾಸ್ತ್ರಬದ್ಧವಾದ ವಿಷಯ.

ಕೌರವರಿಗೂ, ಪಾಂಡವರಿಗೂ ಮಧ್ಯ ನಡೆದ ಯುದ್ಧದಲ್ಲಿ ಶ್ರೀಕೃಷ್ಣನು ರಥಸಾರಥ್ಯವನ್ನು ವಹಿಸಿದ್ದಾನೆ. ಯುದ್ಧ ಪ್ರಾರಂಭದಲ್ಲಿ ಅರ್ಜುನನು ಮೋಹ ಗುಣದಿಂದ ಅಲ್ಲಿರುವವರೆಲ್ಲರನ್ನೂ ತನ್ನವರೆಂದು, ಅವರನ್ನು ಸಾಯಿಸುವುದರಿಂದ ಪಾಪ ಬರುತ್ತದೆಂದು, ಚಿಂತಿಸಿ ನಿಶ್ಚೇಷ್ಟನಾಗಿರುವಾಗ ಆಗ ಶ್ರೀಕೃಷ್ಣನು ಮಾತನಾಡುತ್ತಾ ಯುದ್ಧ ಮಾಡದೆ ಹೋದರೆ ಮೊದಲು, ಅವರು ನಿನ್ನನ್ನು ಪೌರುಷ ಇಲ್ಲದವನಾಗಿ ಲೆಕ್ಕಿಸುತ್ತಾರೆಂದು, ಯುದ್ಧಮಾಡಿ ವೀರನೆನೆಸಿಕೋ ಎಂದು, ಪ್ರಪಂಚ ಸಂಬಂಧ ವಚನಗಳೇ ಹೇಳಿದಾಗ ಅರ್ಜುನ ಯುದ್ಧ ಮಾಡುವುದಕ್ಕೆ ಉತ್ಸಾಹ ಇಲ್ಲವೆಂದು, ಏನು ತೋಚದ ಸ್ಥಿತಿಯಲ್ಲಿ ಇದ್ದೇನೆಂದು, ನನ್ನನ್ನು ಶಿಷ್ಯನನ್ನಾಗಿ ತಿಳಿದು ನೀನು ಆದೇಶಿಸಿ ಏನು ಮಾಡಬೇಕೋ ಹೇಳೆಂದು ಕೇಳಿದಾಗ ಶ್ರೀಕೃಷ್ಣನು ತನ್ನ ಗೀತೆಯನ್ನು ಪ್ರಾರಂಭಿಸಿ ಹೇಳಿದ್ದಾನೆ. ಯಾವ ವಸ್ತುವಾದರೂ ಅವಶ್ಯಕತೆ ಇದ್ದಾಗ ಲಭಿಸಿದರೆ ಅದಕ್ಕೆ ಬೆಲೆ ಇರುತ್ತದೆ. ಅಗತ್ಯ

ಇಲ್ಲದಿರುವಾಗ ಆ ವಸ್ತುವನ್ನು ದೊಡ್ಡದಾಗಿ ಲೆಕ್ಕಿಸುವುದಿಲ್ಲ. ಹಾಗೆಯೇ ಅರ್ಜುನನಿಗೆ ಅಗತ್ಯವಾದಾಗ ಗೀತೆಯನ್ನು ಹೇಳುವುದರಿಂದ ಅದಕ್ಕೆ ಬೆಲೆ ಇರುತ್ತದೆ. ಹಾಗೆ ಅಗತ್ಯ ಇಲ್ಲದಿರುವಾಗ ಹೇಳಿದರೆ ಗುಡಾಕೇಶನು (ನಿದ್ರೆಯನ್ನು ಜಯಿಸಿದವನು) ಎಂದು ಹೆಸರು ಗಳಿಸಿದ ಅರ್ಜುನನೂ ಸಹ ಆಕಳಿಸಿ ನಿದ್ರೆಹೋಗುತ್ತಾನೆಂದು ತಿಳಿದ ಶ್ರೀಕೃಷ್ಣನು ತನ್ನ ಜ್ಞಾನವನ್ನು ಅರ್ಜುನನು ಕೇಳುವವರೆಗೂ ಹೇಳಲಿಲ್ಲ. ಹಾಗೆಯೇ ಈಗಿನ ಮಾನವನೂ ಸಹ ತನಗೆ ಜ್ಞಾನ ಅವಶ್ಯವೆಂದು ತಿಳಿಯದವರೆಗೂ ಗೀತೆಯನ್ನು ಕುರಿತು ಹೇಳಿದರೂ ತಿಳಿಯಲಾರನು. ಯಾವಾಗಲೋ ಒಂದುಸಲ ಅರ್ಜುನನಿಗೆ ಉಂಟಾದ ಅನುಭೂತಿಯಂತೆ ನಮಗೂ ಪಾಪ ಭೀತಿ ಏರ್ಪಟ್ಟಾಗ ಅರ್ಜುನನಿಗೆ ಅಗತ್ಯವಾದ ಗೀತೆಯೇ ನಮಗೂ ಸಹ ಅಗತ್ಯವಾಗುತ್ತದೆ. ಪಾಪಭೀತಿ ಈಗಿನ ಮಾನವನಿಗೆ ಎಲ್ಲಿಯೂ ಕಾಣಿಸುತ್ತಿಲ್ಲ. ಅದರಿಂದ ಶ್ರೀಕೃಷ್ಣನು ಏನು ಹೇಳಿದ್ದಾನೆಂಬುವುದು ಇವರಿಗೆ ಅವಶ್ಯಕತೆ ಇಲ್ಲದಾಗಿದೆ. ಈಗಿನ ಮಾನವನಿಗೆ ಕಷ್ಟಭೀತಿ ಹೊರತು ಪಾಪಭೀತಿ ಇಲ್ಲ. ಕಷ್ಟಗಳು ಹೇಗೆ ಹೋಗುತ್ತವೆಂಬ ಆಲೋಚನೆ ಇದೆಯೇ ಹೊರತು, ಕಷ್ಟಗಳಿಗೆ ಕಾರಣವಾದ ಪಾಪ ಹೇಗೆ ಹೋಗುತ್ತದೆಂದು ಯೋಚಿಸುತ್ತಿಲ್ಲ. ಕಷ್ಟಗಳಿಗೆ ಕಾರಣವಾದ ಪಾಪವನ್ನು ಕುರಿತು ಯೋಚಿಸದೆ ಕೇವಲ ಕಷ್ಟನಿವಾರಣೆ ಉಪಾಯಗಳನ್ನು ಹುಡುಕುತ್ತಿದ್ದಾನೆ. ಅಂತಹ ಸಮಯದಲ್ಲಿ ದಾರಿ ತೋರಿಸಿ ಇದು ನಿಮ್ಮ ಕಷ್ಟಗಳಿಗೆ ಕಾರಣವೆಂದು ತಿಳಿಸಬೇಕಾದವರು ಗುರುಗಳು. ಈಗಿನ ಕಾಲದಲ್ಲಿ ಗುರುಗಳೂ ಸಹ ಜ್ಞಾನವೆಂಬ ಅಗ್ನಿಯಿಂದ ಪಾಪ ಕರ್ಮಗಳು ಸುಟ್ಟುಹೋಗುತ್ತವೆಂದು, ಆಗ ಕಷ್ಟಗಳಿಂದ ಹೋರಬೀಳುತ್ತೀರೆಂದು ಹೇಳದೇ ಕಷ್ಟನಿವಾರಣೆಗೆ ಈ ಪ್ರದಕ್ಷಣೆ ಮಾಡೆಂದೋ, ಈ ಯಜ್ಞಗಳು ಮಾಡೆಂದೋ, ದಾನಗಳು ಮಾಡೆಂದೋ ಅಥವಾ ಪೂಜೆಗಳು ಮಾಡೆಂದೋ ಹೇಳುತ್ತಿದ್ದಾರೆ. ಅದರಿಂದ ತಾತ್ಕಾಲಿಕ ಕಷ್ಟನಿವಾರಣೆಗಾಗಿಯೇ ಮಾನವನು ಕೈ ಮುಗಿಯುವುದೋ ಅಥವಾ ಯಜ್ಞಯಾಗಾದಿ ದಾನಗಳು ಮಾಡುವುದೋ ನಡೆಯುತ್ತಿದೆ. ಹಾಗಿರುವಾಗ ಗೀತೆಯೊಂದರ ಅವಶ್ಯಕತೆ ಎಂತಹದೆಂದು ತಿಳಿಯದಂತೆ ಹೋಗಿದೆ. ಒಂದು ವೇಳೆ ಎಲ್ಲಿಯಾದರೂ ಗೀತೆಯನ್ನು

ಓದುವುದಿದ್ದರೆ ಅದೂ ಸಹ ಇಂತಹ ಲಾಭ ಬರುತ್ತದೆಂಬ ಉದ್ದೇಶದಿಂದಲೇ ಓದುತ್ತಿದ್ದಾರೆಯೇ ಹೊರತು ಇದರಿಂದ ಜ್ಞಾನವೆಷ್ಟೋ ತಿಳಿಯುತ್ತದೆಂದು, ಜ್ಞಾನ ತಿಳಿಯುವುದರಿಂದ ಕರ್ಮದಿಂದ ಹೊರಬಿದ್ದು ಮುಕ್ತಿ ಹೊಂದಬಹುದೆಂಬ ಉದ್ದೇಶದಿಂದ ಓದುತ್ತಿಲ್ಲ. ಒಂದು ವಿಧವಾಗಿ ಹೇಳಬೇಕೆಂದರೆ ಗೀತೆ ಕೆಲವು ಗ್ರಾಮಗಳಲ್ಲಿ ಹೆಚ್ಚಾಗಿ ಪ್ರಚಾರದೊಳಗೆ ಬಂದಿದೆ. ಗೀತಾಮಂದಿರಗಳು ಕಟ್ಟಿಸಿಕೊಂಡು ಅಲ್ಲಿ ಗೀತೆಯನ್ನು ಇಟ್ಟುಕೊಂಡಿದ್ದಾರೆ. ಅಂತಹ ಕಡೆಯೂ ಸಹ ಗೀತಾಶ್ರವಣವೆಂದು ಕೇಳುವುದಕ್ಕೆ ಹೋಗುತ್ತಿದ್ದಾರೆ ಹೊರತು, ಅದರಲ್ಲಿ ಸಾರಾಂಶ ಏನೆಂದು ಗ್ರಹಿಸುವುದಕ್ಕೆ ಹೋಗುತ್ತಿಲ್ಲ.

ಇಂತಹ ಕಾಲದಲ್ಲಿಯೂ ಸಹ ಗೀತೆ ಎಂದರೆ ಏನು? ಗೀತಾ ಸಾರಾಂಶ ಏನೆಂದು ಯೋಚಿಸುವವರೂ ಸಹ ಅಲ್ಲಲ್ಲಿ ಇದ್ದಾರೆ. ಅಂತಹವರಿಗೆ ಇಲ್ಲಿಯವರೆಗಿರುವ ಗೀತೆಭಾವನೆಗಳಲ್ಲಿ ಎಷ್ಟೋ ಲೋಪಗಳು ಕಾಣಿಸಿದಾಗ ಅವುಗಳ ನಿಜಸ್ವರೂಪವೇನೆಂದು ಅನ್ವೇಷಿಸುತ್ತಿದ್ದಾರೆ. ಹಾಗೆಯೇ ಗೀತೆಯ ನಿಜಸ್ವರೂಪವೇನೋ ತಿಳಿದುಕೊಳ್ಳಬೇಕೆಂಬ ಆಸಕ್ತಿಹೊಂದಿದವರು ಇದ್ದಾರೆಂದು, ಅವರಿಗೋಸ್ಕರವೇ ಈ ಗೀತೆ ಹೊರಬೀಳುತ್ತಿದೆ ಎಂದು, ಅಂತಹವರಿಗೆ ಎಷ್ಟೋ ತಿಳಿಯದ ರಹಸ್ಯಗಳನ್ನು ತಿಳಿಸುತ್ತಾ **"ತ್ರೈತ ಸಿದ್ಧಾಂತ ಭಗವದ್ಗೀತೆ** ಮುಂದಕ್ಕೆ ಸಾಗಿಹೋಗುತ್ತದೆಂದು ಭಾವಿಸುತ್ತೇವೆ.

ಮಾನವ ಶರೀರದಲ್ಲಿ ಹೆಸರುಗಳಿಸಿದ ಗುಣಗಳು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆನ್ನುವವು ಇವೆ. ಕಾಮ ಎಂದರೆ ಆಸೆ, ಕ್ರೋಧ ಎಂದರೆ ಕೋಪ, ಲೋಭವೆಂದರೆ ಜಿಪುಣತನ, ಮೋಹ ಎಂದರೆ ನನ್ನದು ನನ್ನವರೆಂಬ ಭಾವನೆ. ಮದವೆಂದರೆ ಗರ್ವ, ಮತ್ಸರವೆಂದರೆ ಅಸೂಯೆ ಎಂದು ಹೇಳಿಕೊಳ್ಳಬಹುದು. ಅಂತಹ ಗುಣಗಳಿಂದ ಸರ್ವಮಾನವರು ಚಲಿಸಲ್ಪಟ್ಟು ಕೆಲಸಗಳು ಮಾಡುತ್ತಿದ್ದಾರೆ. ಈ ಭೂಮಿ ಮೇಲೆ ಯಾವ ಜೀವರಾಶಿಯಾದರೂ ಗುಣಗಳಿಂದಲೇ ಚಲಿಸಿ ಕಾರ್ಯಗಳು ಮಾಡುತ್ತಿವೆ. ಈ ಪದ್ಧತಿ ಪ್ರಕಾರ ಅರ್ಜುನನು ಯುದ್ಧ ಮಾಡುವುದಿಲ್ಲ ಎನ್ನುವುದಕ್ಕೆ

ಕಾರಣವಾದ ಗುಣ ಮೋಹಗುಣ. ಮೊದಲು ಆಸೆ, ಕೋಪ ಯುದ್ಧಕ್ಕೆ ಪ್ರೇರೇಪಿಸಿದಾಗ ನಂತರ ಮೋಹಗುಣದಿಂದ ಇವರು ನನ್ನವರು ಇವರನ್ನು ಹೇಗೆ ಸಾಯಿಸುವುದೆಂದು ಕೊಂಡಿದ್ದಾನೆ. ಈ ವಿಧವಾಗಿ ಗುಣಗಳ ಮಧ್ಯೆ ಅಶಾಂತಿ ಪ್ರತಿ ಜೀವಿಗೂ ಏರ್ಪಡುತ್ತಿದೆ. ಅರ್ಜುನನಿಗೆ ಏರ್ಪಟ್ಟಂತೆ ಮೋಹ ಗುಣವನ್ನು ಬುದ್ಧಿ ಯೋಚಿಸಿ ಇವರನ್ನು ಸಾಯಿಸುವುದರಿಂದ ಪಾಪ ಬರುತ್ತದೆಂದು ಸಂಕಲ್ಪ ಹುಟ್ಟಿದಾಗ ಅದೇ ಸರಿಯಾದ ಸಮಯವೆಂದು ಶ್ರೀಕೃಷ್ಣನು ಗೀತೆಯನ್ನು ಹೇಳಿದ್ದಾನೆ, ಅರ್ಜುನನಿಗೆ ಏರ್ಪಟ್ಟಂತೆ ಗುಣಗಳ ಮಧ್ಯೆ ಮಾನವನಿಗೆ ಅಶಾಂತಿ ಏರ್ಪಟ್ಟ ಪಾಪವೆಂಬ ಭಾವನೆ ಬಂದರೂ ಶ್ರೀಕೃಷ್ಣನಂತೆ ತಕ್ಷಣ ಹೇಳುವ ಗುರು ಇಲ್ಲದಿರುವುದರಿಂದ ಮಾನವನು ವಿವರ ತಿಳಿಯದೇ ಅಶಾಂತಿಯಲ್ಲಿಯೇ ಮುಳಗಿಹೋಗುತ್ತಿದ್ದಾನೆ. ಅರ್ಜುನನಿಗೆ ಉಂಟಾದಂತೆ ಪ್ರತಿ ಮಾನವನಿಗೂ ಗುಣಗಳಿಂದ ದುಃಖ ಉಂಟಾಗುತ್ತಲೇ ಇದೆ. ಒಂದುಗುಣ ಒಂದು ಕಡೆಗೆ ಸೆಳೆದರೆ ಮತ್ತೊಂದು ಗುಣ ಇನ್ನೊಂದು ಕಡೆಗೆ ಸೆಳೆಯುತ್ತದೆ. ಗುಣಗಳ ಮಧ್ಯದಲ್ಲಿ ಸಿಲುಕಿ ನಲುಗುತ್ತಿರುವ ಮಾನವನಿಗೆ ಅಶಾಂತಿ ಇರುತ್ತದೆ. ಆದ್ದರಿಂದ ಶ್ರೀಕೃಷ್ಣನ ಗೀತೆ ಅರ್ಜುನನಿಗೊಬ್ಬನಿಗೇ ಅಲ್ಲದೆ ಗುಣಗಳಿರುವ ಜೀವರಾಶಿಗಳೆಲ್ಲರಿಗೂ ಅಗತ್ಯ. ಶ್ರೀಕೃಷ್ಣನು ಹೇಳಿರುವುದು ಅರ್ಜುನನಿಗೇ ಎಂದು ತಿಳಿಯಬೇಡಿರಿ. ಗುಣಪ್ರಭಾವದಲ್ಲಿ ಸಿಲುಕಿಕೊಂಡವರೆಲ್ಲರಿಗೂ ಅನ್ವಯಿಸುವುದಾಗಿ ತಿಳಿದು, ಪ್ರತಿಯೊಬ್ಬರು ಗೀತೆ ತನಗಾಗಿಯೇ ಹೇಳಿದ್ದಾರೆಂದು ತಿಳಿದು ಓದಬೇಕು. ಈಗ ಇಲ್ಲಿ ಬರೆದ ಗೀತೆ ಅರ್ಜುನನಿಗೇ ಎಂದುಕೊಳ್ಳದೆ ಶ್ರೀಕೃಷ್ಣನು ನಿನಗೇ ಹೇಳುತ್ತಿದ್ದಾನೆಂಬ ಭಾವನೆಯಿಂದ ಶ್ರದ್ಧೆಯಿಂದ ಓದಿರಿ.

ಭಗವದ್ಗೀತೆ ಶ್ರೀ ಭಗವಾನುವಾಚದಿಂದ ಪ್ರಾರಂಭವಾಗಿದೆ. ಶ್ರೀಕೃಷ್ಣನು ಹೇಳಿದ ಮಾತುಗಳನ್ನು ಭಗವಾನುವಾಚ ಎನ್ನುವುದು ಏಕೆ? ಶ್ರೀಕೃಷ್ಣ ಉವಾಚ ಎಂದು ಏಕೆ ಅನ್ನಲಿಲ್ಲವೆಂಬ ಸಂಶಯ ಕೆಲವರಿಗಿರಬಹುದು. ಅದಕ್ಕೆ ನಮ್ಮ ಸಮಾಧಾನ ಏನೆಂದರೆ! ಶ್ರೀಕೃಷ್ಣನು ಎಲ್ಲರಂತಹ ಮಾನವನಲ್ಲ. ಆತನು ಎಲ್ಲರಂತೆ ಜನ್ಮಿಸಲಿಲ್ಲ. ಈ ಪ್ರಪಂಚವೆಲ್ಲಾ ಯಾವ ಶಕ್ತಿಯ ಆಧಾರದಿಂದ ನಿಂತಿದೆಯೋ,

ಆಕಾಶದಲ್ಲಿ ಸೂರ್ಯ, ಚಂದ್ರ, ನಕ್ಷತ್ರ ಗೋಳಗಳು ಯಾವ ಶಕ್ತಿ ಆಧಾರದಿಂದ ತಮ್ಮ ಗಮ್ಯಗಳು ತಪ್ಪದೆ ತೇಲಾಡುತ್ತಿವೆಯೋ, ಅಣುಅಣುವಿನಲ್ಲಿ ಯಾವಶಕ್ತಿ ದೈವವಾಗಿ ನಿಂತು ಅಧಿಪತಿಯಾಗಿದೆಯೋ, ಭೂಮಿ ಮೇಲಿರುವ ಎಲ್ಲಾ ಮತಗಳಿಗೂ ಯಾವ ಶಕ್ತಿ ದೇವರಾಗಿದೆಯೋ ಆ ಶಕ್ತಿಯೇ ಒಬ್ಬ ಮಾನವನಾಗಿ ಬಂದಿರುವ ಜನ್ಮ ಶ್ರೀಕೃಷ್ಣನದು.! ಶ್ರೀಕೃಷ್ಣನು ಭಗದಿಂದ ಹುಟ್ಟಿದವನಾದ್ದರಿಂದ ಭಗವಂತನೆಂಬ ಹೆಸರು ಬಂದಿದೆ. ಭಗ ಎಂದರೆ ಸ್ತ್ರೀಯ ಯೋನಿ ಭಾಗವೆಂದು ಅರ್ಥ. ಹಾಗಿರುವಾಗ ನಾವೂ ಸಹ ತಾಯಿ ಭಗದಿಂದಲೇ ಹುಟ್ಟಿದ್ದೇವಲ್ಲವೆ! ನಾವೆಲ್ಲಾ ಭಗವಂತರೇನಾ? ಎನ್ನುವ ಪ್ರಶ್ನೆ ಬರುತ್ತದೆ. ಇಲ್ಲಿರುವವರಿಗೆಲ್ಲ ತಿಳಿಯದಿರುವ ಸತ್ಯ ಏನೆಂದರೆ **ನಾವೆಲ್ಲರೂ ಭಗದಿಂದ ಹುಟ್ಟಲಿಲ್ಲ.** ಈ ಮಾತು ಬಹಳ ಜನರಿಗೆ ಆಶ್ಚರ್ಯವನ್ನು ಉಂಟುಮಾಡುತ್ತದೆ. ಇದರಲ್ಲಿ ಸತ್ಯ ತಿಳಿದರೆ ಆಶ್ಚರ್ಯಪಡಬೇಕಾದುದು ಏನೂ ಇಲ್ಲ. ಭಗದಿಂದ ನಮ್ಮ ಶರೀರಗಳು ಹುಟ್ಟಿವೆ, ಆದರೆ ಜೀವಾತ್ಮಗಳಾದ ನಾವು ಹುಟ್ಟಲಿಲ್ಲ. ಶಿಶು ಶರೀರ ಭಗದಿಂದ ಹೊರಗೆ ಬಂದ ಸ್ವಲ್ಪ ಸಮಯಕ್ಕೆ ಎಂದರೆ ಐದು ನಿಮಿಷಗಳಿಗೊ, ಹತ್ತು ನಿಮಿಗಳಿಗೊ, ಅರ್ಧಗಂಟೆಗೊ, ಅಥವಾ ಗಂಟೆಗೊ ಎಲ್ಲೋ ಶರೀರವನ್ನು ಬಿಟ್ಟ ನಂತರ ನಾವು ಶಿಶು ಶರೀರದಲ್ಲಿ ಸೇರಿ ಅರಚುತ್ತಿದ್ದೇವೆ. ಒಂದು ಕಡೆ ಮರಣಿಸಿದ ಜೀವಾತ್ಮ ಗುಣಗಳು, ಪಾಪಪುಣ್ಯಗಳಿಂದ ಕೂಡಿಕೊಂಡು ಬಂದು ನಿರ್ಣಯಿಸಲ್ಪಟ್ಟು ಸಿದ್ಧವಾಗಿ ಹೊರಗೆ ಬಂದಿರುವ ಹೊಸ ಶರೀರದಲ್ಲಿ ಪ್ರವೇಶಿಸುತ್ತಿದ್ದಾನೆ. ಸರ್ವವ್ಯಾಪಿಯಾದ ಪರಮಾತ್ಮ ನಮ್ಮಂತೆ ಒಂದು ಕಡೆ ಮರಣಿಸಿ ಮತ್ತೊಂದು ಕಡೆಗೆ ಹೋಗಬೇಕಾದ ಅವಶ್ಯಕತೆ ಇಲ್ಲ. ಆತನು ಶರೀರ ಧರಿಸಿ ಮಾತನಾಡಿ ಧರ್ಮಗಳು ತಿಳಿಸಬೇಕೆಂದುಕೊಂಡಾಗ ಸ್ತ್ರೀ ಶರೀರದಲ್ಲಿಯೂ, ಗರ್ಭದಲ್ಲಿಯೂ, ಗರ್ಭಸ್ಥ ಶಿಶುವಿನಲ್ಲಿಯೂ, ಸರ್ವವೂ ವ್ಯಾಪಿಸಿ ಇದ್ದಾನಾದ್ದರಿಂದ ಶಿಶು ಶರೀರದೊಂದಿಗೆ ಸಜೀವವಾಗಿ ಹುಟ್ಟುತ್ತಿದ್ದಾನೆ. ಆದ್ದರಿಂದ ಆತನು ಒಬ್ಬನೇ ಭಗವಂತನಾಗುವನು, ಸರ್ವವ್ಯಾಪಿ, ಸರ್ವವು ತಾನಾಗಿರುವವನು ಮತ್ತೊಂದರ ಪ್ರಮೇಯ ಇಲ್ಲದಂತೆ ಹುಟ್ಟಬಲ್ಲನು. **"ಸ್ವಯಂಭು" ಆದ ಪರಮಾತ್ಮ ಹುಟ್ಟಬೇಕಾಗಿ ಬಂದಾಗ ಶಿಶುಶರೀರ ತಯಾರಾಗುವ**

ದಕ್ಕೆ ಪುರುಷ ವೀರ್ಯಕಣಗಳಿಂದ ಸಹ ಕೆಲಸವಿಲ್ಲ. ಆದ್ದರಿಂದ ಸರ್ವ ವ್ಯಾಪಿಯಾದವನು ಕನ್ಯೆ ಗರ್ಭದಿಂದಾದರೂ ಹುಟ್ಟಿಬರಬಲ್ಲನು. ಖುದ್ ಎಂದರೆ ತನಗೆ ತಾನಾಗಿ ಹುಟ್ಟುವವನು ಖುದಾ ಆಗುತ್ತಾನೆ. ಖುದಾ ಆದ ಪರಮಾತ್ಮನು ಸಜೀವವಾಗಿ ಹುಟ್ಟಿದ ಶರೀರಕ್ಕೆ ಶ್ರೀಕೃಷ್ಣ ಎನ್ನುವ ಹೆಸರು ಇಟ್ಟಿದ್ದಾರೆ. ಆದ್ದರಿಂದ ಶ್ರೀಕೃಷ್ಣನು ಭಗವಂತನು, ಆತನು ಹೇಳಿರುವುದೇ ಭಗವದ್ಗೀತೆ.

ಧರ್ಮಗಳೆಂದರೆ ಏನೋ ತಿಳಿಯದಂತೆ ಹೋಗಿ ಅಧರ್ಮಗಳು ಮಾನವರಲ್ಲಿ ಹೆಚ್ಚಾದಾಗ ತಾನೇ ಉದ್ಭವಿಸಿ, ಧರ್ಮಗಳನ್ನು ಕುರಿತು ತಿಳಿಸುತ್ತೇನೆಂದು ಗೀತೆಯಲ್ಲಿ ಭಗವಂತನು ತಿಳಿಸಿದ್ದಾನೆ. ಆ ಮಾತಿನ ಪ್ರಕಾರ ದ್ವಾಪರಯುಗ ಅಂತ್ಯದಲ್ಲಿ ಭಗವಂತನು ಹುಟ್ಟಿದ್ದಾನೆಂದರೆ ಆಗ ಧರ್ಮಗಳಿಗೆ ಹಾನಿ (ಮುಪ್ಪು) ಏರ್ಪಟ್ಟು ಅಧರ್ಮಗಳು ಹೆಚ್ಚಾಗಿವೆಯೆಂಬ ಮಾತು. ಇಲ್ಲಿ ಕೆಲವರಿಗೊಂದು ಅನುಮಾನ ಬರಬಹುದು. ದ್ವಾಪರಯುಗ ಅಂತ್ಯದಲ್ಲಿ ವ್ಯಾಸನು, ಭೀಷ್ಮನು, ಮೊದಲಾದ ಎಷ್ಟೋ ಜನ ದೊಡ್ಡವರಿರುತ್ತಿದ್ದರು! ಆ ಸಮಯದಲ್ಲಿಯೇ ಧರ್ಮಗಳಿಗೆ ಮುಪ್ಪು ಏರ್ಪಟ್ಟಿದೆಯಾ? ಎನ್ನುವುದು ಪ್ರಶ್ನೆ. ಅದಕ್ಕೆ ಉತ್ತರ ಏನೆಂದರೆ! ಆ ಕಾಲದಲ್ಲಿ ತಪಸ್ಸುಗಳು, ಯಜ್ಞ ಯಾಗಾದಿಗಳು, ವ್ರತಕ್ರತುಗಳು ಹೆಚ್ಚಾಗಿರುತ್ತಿದ್ದವು. ವಾಸ್ತವಿಕ ಧರ್ಮಗಳು ತಿಳಿಯದ ಕಾರಣದಿಂದ ಆ ದಿನದ ಪ್ರಜೆಗಳಲ್ಲಿ ಭಕ್ತಿ ಎಂಬುವುದು ಇದ್ದರೂ ಅದು ಬಾಹ್ಯ ದೇವತಾರಾಧನೆಗಳ ಮೇಲೆ ಇರುತಿತ್ತು. ಅಂತರ್ಮುಖ ಆಧ್ಯಾತ್ಮಿಕದ ಮೇಲೆ ಇಲ್ಲದಂತಿತ್ತು. ಎಷ್ಟೋ ಜನ ಋಷಿಗಳು ಇದ್ದರೂ ಅವರೆಲ್ಲರೂ ದೇವತೆಗಳ ಮೇಲೆ ದೃಷ್ಟಿಯನ್ನಿಟ್ಟು ತಾವೇನೋ ಹೊಂದಬೇಕೆಂಬ ಚಿಂತನೆಯೇ ಹೊರತು, ಯೋಗವೆಂದರೇನೊ ತಿಳಿಯದಂತೆ ಇದ್ದರು. ಎಂತಹ ದೊಡ್ಡ ಋಷಿಗಳಾದರೂ ಪುಣ್ಯ ಬರುವ ಸತ್ಕಾರ್ಯಗಳನ್ನು ಹೊರತು, ಪುಣ್ಯ ಅಂಟದ ಕಾರ್ಯವಿಧಾನ ತಿಳಿಯ ದಂತಿದ್ದರು. ನೀತಿ ಹೊರತು ಜ್ಞಾನ ತಿಳಿಯದ ಆ ಕಾಲದಲ್ಲಿ, ನ್ಯಾಯ ಹೊರತು, ಧರ್ಮ ತಿಳಿಯದಂತಹ ಸಮಯದಲ್ಲಿ ಭಗವಂತನು ಉದ್ಭವಿಸಿದ್ದಾನೆ. ಆ ಭಗವಂತನು ಹೇಳಿರುವುದೇ ಭಗವದ್ಗೀತೆ. ಗೀತೆ ಭಗವಂತನ ಮೂಲಕ

ಬೋಧಿಸಲ್ಪಟ್ಟಿದೆ, ಭಗವಂತನು ಗೀತೆಯನ್ನು ಶಾಶ್ವತವಾಗಿರುವಂತೆ ಗೀಚಿ ಹೋದರೂ ಆ ಹದ್ದಿನಲ್ಲಿನ ಆಧ್ಯಾತ್ಮಿಕ ರೂಪವನ್ನು ಅಜ್ಞಾನವೆಂಬ ಕುರುಡುತನದಿಂದ ಮಾನವನು ಸರಿಯಾಗಿ ನೋಡಲಾರದೆ ಹೋಗಿದ್ದಾನೆ. ಇವು ಧರ್ಮಗಳೆಂದು ಗುರುತಿಸದೆ ಹೋಗಿದ್ದಾನೆ. ಇದು ಆಧ್ಯಾತ್ಮಿಕವೆಂದು ಭೋದಿಸುವುದಕ್ಕೆ ಮಾನವರಾದ ಕೆಲವರು ಗುರುಗಳಾಗಿ ಹೋರಬಂದರೂ ಅವರಲ್ಲಿ ಮಾಯೆ ಪ್ರಭಾವಬೀರಿ ಆಧ್ಯಾತ್ಮಿಕವನ್ನೇ ಬೋಧಿಸುತ್ತೇವೆಂದು ಭ್ರಮೆಯನ್ನುಂಟುಮಾಡಿ, ಅವರಿಂದ ಅಧರ್ಮಗಳನ್ನೇ ಬೋಧಿಸುವಂತೆ ಮಾಡಿದೆ. ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಮಾಯೆ, ಪರಮಾತ್ಮನಿಗೆ ವಿರುದ್ಧವಾಗಿ ಬೋಧಿಸುವಂತೆ ಮತ್ತು ಅನ್ವಯಿಸುವಂತೆ ಮಾಡುವುದು ಅದರ ಕರ್ತವ್ಯ. ಆದ್ದರಿಂದ ಮಾನವರ ಶರೀರಗಳಲ್ಲಿ ಗುಣಗಳಲ್ಲಿ ಅಡಗಿದ್ದು, ಯಾರೂ ಗುರುತಿಸದಿರುವಂತೆ ಮಾಯೆ ಮಾನವರನ್ನು ಸುಲಭವಾಗಿ ತನ್ನಕಡೆ ನಡೆಸಿಕೊಳ್ಳುತ್ತಿದೆ. ಎಷ್ಟೋ ಜನ ಗುರುಗಳನ್ನು ಸಹಿತ ಭ್ರಮೆಯಲ್ಲಿ ಮುಳುಗಿಸಿ, ಪರಮಾತ್ಮನ ವಿಧಾನವಾಗಲಿ, ಪರಮಾತ್ಮನ ಧರ್ಮಗಳನ್ನಾಗಲಿ, ಗುರುತಿಸದಂತೆ ಮಾಡಿ, ಅವರು ಮಾಡುತ್ತಿರುವುದು ಮತ್ತು ಹೇಳುತ್ತಿರುವುದು ಪರಮಾತ್ಮನ ಜ್ಞಾನವೇ ಎನ್ನುವಂತೆ ತಿಳಿಯುವಹಾಗೆ ಮಾಡುತ್ತದೆ. ಆದ್ದರಿಂದ ಎಷ್ಟೋ ಜನ ಮಹಾನುಭಾವರೂ ಸಹ ಆಧ್ಯಾತ್ಮಿಕದಲ್ಲಿ ಪರಮಾತ್ಮ ಹೇಳಿದಂತೆ ಅಲ್ಲದೆ, ಸ್ವಲ್ಪ ಪಕ್ಕದ ಮಾರ್ಗದಲ್ಲಿ ಹೋಗಿದ್ದಾರೆಂದೇ ಹೇಳಬಹುದು.

ತಿಳಿದವರೂ ಸಹ ಮುಖ್ಯವಾದ ಧರ್ಮಗಳ ಹತ್ತಿರ ಗೊಂದಲ ಬೀಳುವಂತೆ ಮಾಯೆ ಮಾಡಿದೆ. ಪ್ರಜೆಗಳಿಗೆ ಜ್ಞಾನವನ್ನು ಬೋಧಿಸುವ ಬೋಧಕರಿಂದಲೇ ಪಕ್ಕದಾರಿಯನ್ನು ಭೋಧಿಸುವಂತೆ ಮಾಡುತ್ತಿದೆ. ಉದಾಹರಣೆಗೆ ಒಂದು ವಿಷಯವನ್ನು ನೋಡೋಣ. ಒಂದು ಸಿನಿಮಾ ಶತದಿನೋತ್ಸವ ಸಭೆಯಲ್ಲಿ ಒಬ್ಬ ಸ್ವಾಮಿ ಉಪನ್ಯಾಸಮಾಡುತ್ತಾ, ಡೈರೆಕ್ಟರ್ ಬಹಳ ಶ್ರಮೆ ಮಾಡಿದ್ದಾನೆಂದು ಹೇಳುತ್ತಾ, **"ಈ ಸಿನಿಮಾ ನಿರ್ದೇಶಕನು ಒಬ್ಬ ದೊಡ್ಡ ಯೋಗಿಯಾಗಿ ಎಷ್ಟೋ ತಪಸ್ಸು ಮಾಡಿ ಚಿತ್ರವನ್ನು ತಯಾರು ಮಾಡಿದ್ದಾನೆ,**

ಈ ಸಿನಿಮಾ ಬಗ್ಗೆ ಆತನು ಮಾಡಿದ ತಪಸ್ಸಿಗೆ ಮೆಚ್ಚಿಕೊಳ್ಳಬೇಕಾಗಿದ್ದೆ" ಎಂದಿದ್ದಾರೆ. ಇಲ್ಲಿ ಸಿನಿಮಾ ನಿರ್ದೇಶಕನು ಪಟ್ಟಿರುವ ಶ್ರಮವನ್ನು ತಪಸ್ಸಾಗಿ ಹೋಲಿಸಿ ಹೇಳುವುದಲ್ಲದೆ ಆತನನ್ನೇ ಯೋಗಿ ಎನ್ನುವುದೂ ಸಹ ನಡೆದಿದೆ. ಇದನ್ನು ಅನುಸರಿಸಿ ನೋಡಿದರೆ ಆತನ ಉಪನ್ಯಾಸದಲ್ಲಿ ಯೋಗಿ, ತಪಸ್ವಿ ಇಬ್ಬರೂ ಒಂದೇ ಎಂದು ತಿಳಿಯುತ್ತದೆ. ಇದು ಒಂದು ಸಂಘಟನೆಯಾಗಿದ್ದು ಮತ್ತೊಂದು ವಿಷಯವನ್ನು ನೋಡೋಣ. ಒಬ್ಬ ಸ್ವಾಮಿಯನ್ನು ಒಂದು ಪಟ್ಟಣಕ್ಕೆ ಅಲ್ಲಿನ ಪ್ರಜೆಗಳು ಅಹ್ವಾನಿಸಿದ್ದಾರೆ. ಮೊದಲೇ ಆ ವಿಷಯವನ್ನು ಪ್ರಜೆಗಳಿಗೆ ತಿಳಿಸುವುದಕ್ಕೆ ಎಲ್ಲರನ್ನು ಸ್ವಾಮಿಯವರ ದರ್ಶನಾರ್ಥವಾಗಿ ಬರಬೇಕೆಂದು ಹೇಳುವುದಕ್ಕೆ ಒಂದು ಆಹ್ವಾನ ಪತ್ರಿಕೆಯನ್ನು ಅಚ್ಚು ಹಾಕಿಸಿ ಹಂಚಿದ್ದಾರೆ. ಆ ಆಹ್ವಾನಪತ್ರಿಕೆಯನ್ನು ಅಚ್ಚು ಹಾಕಿದವರು ಆಧ್ಯಾತ್ಮಿಕ ವಿದ್ಯೆಯನ್ನು ಚೆನ್ನಾಗಿ ತಿಳಿದವರೆ. ಅವರು ಅಚ್ಚು ಹಾಕಿಸಿದ ಪತ್ರಿಕೆಯಲ್ಲಿ ಸಮಾಚಾರ ಈ ವಿಧವಾಗಿದೆ. **"ದ್ವಾದಶ ಸಂವತ್ಸರಗಳು ರುದ್ರ ಭೂಮಿಯಲ್ಲಿ ತಪವಾಚರಿಸಿ ಯೋಗಿಯಾಗಿ ಬದಲಾದ ಶ್ರೀಶ್ರೀಶ್ರೀ ಬಾಲ ಭಾರತಿ ಯೋಗಿಯವರು ನಮ್ಮ ಪಟ್ಟಣಕ್ಕೆ ಬರುತ್ತಿದ್ದಾರೆ. ಭಕ್ತರೆಲ್ಲರು ಬಂದು ದರ್ಶನ ಮಾಡಿಕೊಳ್ಳಬೇಕೆಂದು ಕೋರುತ್ತಿದ್ದೇವೆ"** ಎಂದು ಬರೆದಿದ್ದಾರೆ. ಇಲ್ಲಿ ಸಹ ಹನ್ನೆರಡು ವರ್ಷಗಳು ಸ್ಮಶಾನದಲ್ಲಿ ತಪಸ್ಸು ಮಾಡಿದ ತಪಸ್ವಿಯನ್ನು ಯೋಗಿ ಎಂದಿದ್ದಾರೆ. **"ತಪಸ್ಸು ಮಾಡಿ ಯೋಗಿಯಾಗಿ ಬದಲಾಗಿರುವ"** ಎಂದಿದ್ದಾರೆ. ಈ ವಿಷಯವನ್ನು ಬರೆದವರು ದೊಡ್ಡ ತತ್ತ್ವಜ್ಞರೇ ಆದರೂ ತಪಸ್ಸಿಗೂ ಯೋಗಕ್ಕೂ ಭೇದವನ್ನು ತಿಳಿಯಲಾರದೆ ಹೋಗಿದ್ದಾರೆ. ತಪಮಾಡಿದವನನ್ನು ಯೋಗಿಯಾಗಿ, ಯೋಗ ಮಾಡಿದವನನ್ನು ತಪಸ್ವಿಯಾಗಿ ಹೇಳಿಕೊಳ್ಳುವುದರಿಂದ ಭಗವದ್ಗೀತೆಯಲ್ಲಿ ದೇವರು ಹೇಳಿದ ಧರ್ಮಗಳಿಗೆ ಮುಪ್ಪು ಏರ್ಪಡುತ್ತದೆ. ಧರ್ಮಗಳಿಗೆ ಗ್ಲಾನಿ ಏರ್ಪಟ್ಟಿದೆಯೆಂದು ಧರ್ಮಗಳನ್ನು ಕಾಪಾಡುವುದಕ್ಕಾಗಿ ದೇವರೇ ಇಳಿದುಬಂದು *"ತಪಸ್ವಿಭ್ಯೋಧಿ ಕೋ ಯೋಗಿ"* ಎಂದು ಹೇಳಿದರೂ, ಯೋಗಕ್ಕಿರುವ ದೊಡ್ಡತನವನ್ನು ತಿಳಿಯದೇ ತಪಸ್ವಿಕರನ್ನು, ಯೋಗಿಗಳನ್ನು ಒಂದೇ ಎಂದುಕೊಳ್ಳುವುದು ತಪ್ಪು ಅಲ್ಲವೆ! ದೇವರು ಹೇಳಿದ

ಧರ್ಮಕ್ಕೆ ವಿರುದ್ಧವಾಗಿ ಹೇಳಿದವರಾಗುವುದಿಲ್ಲವೆ! ದೇವರು ಹೇಳಿದ ಧರ್ಮಕ್ಕೆ ಹಾನಿಯನ್ನುಂಟುಮಾಡಿದವರಾಗಿ, ದೇವರ ಮಾತಿಗೆ ಬೆಲೆ ಇಲ್ಲದಂತೆ ಮಾಡಿದವರಾಗುತ್ತೇವೆ ಅಲ್ಲವೆ!

ಎಷ್ಟೋ ಚಿಕ್ಕ ಜ್ಞಾನವನ್ನೂ ಸಹ ಗ್ರಹಿಸಲಾರದೆ, ಎಷ್ಟೋ ದೊಡ್ಡ ಸ್ವಾಮಿಗಳೂ ತಪ್ಪಾಗಿ ಅರ್ಥೈಸಿಕೊಳ್ಳುವುದು ವಿಚಿತ್ರವಾಗಿದೆ! ಈಗಲೂ ಸಹ ನೂರಕ್ಕೆ ತೊಂಭತ್ತು ಜನರಿಗೆ ತಪಸ್ಸು ಬೇರೆ, ಯೋಗ ಬೇರೆಯೆಂದು ತಿಳಿಯದೆ ಹೋಗಿರುವುದು ವಿಚಿತ್ರವಾಗಿದೆ. ಬಹಳ ಪುರಾಣಗಳಲ್ಲಿ ತಪಸ್ಸು ಮತ್ತು ಯೋಗ ಎರಡನ್ನು ಒಂದಾಗಿಯೇ ಹೇಳಿಕೊಂಡಿದ್ದಾರೆ. ಒಬ್ಬ ಮಹರ್ಷಿ ಕಾಡಿನಲ್ಲಿ ಕುಳಿತುಕೊಂಡು ತಪಸ್ಸು ಮಾಡುತ್ತಿರುವಾಗ ಆತನ ಯೋಗದೀಕ್ಷೆಗೆ ಮೆಚ್ಚಿ ಇಂದ್ರನು ಪ್ರತ್ಯಕ್ಷನಾಗಿದ್ದಾನೆಂದು ಒಂದು ಪುಸ್ತಕದಲ್ಲಿ ಬರೆದಿದ್ದಾರೆ. ಹಾಗೆಯೇ ಒಬ್ಬ ರಾಜನು ಯೋಗ ಮಾಡುತ್ತಿರುವಾಗ ಆತನ ತಪಸ್ಸಿಗೆ ಮೆಚ್ಚಿ ಬ್ರಹ್ಮ ದೇವರೇ ಪ್ರತ್ಯಕ್ಷನಾಗಿದ್ದಾನೆಂದು ಮತ್ತೊಂದು ಪುಸ್ತಕದಲ್ಲಿ ಬರೆದಿದ್ದಾರೆ. ಈ ಬರಹಗಳಾಗಲಿ, ಕೆಲವರ ಬೋಧನೆಗಳಾಗಲಿ ಭಗವದ್ಗೀತೆಯಲ್ಲಿನ ಆತ್ಮಸಂಯಮ ಯೋಗ 46ನೇ ಶ್ಲೋಕದಲ್ಲಿ **"ತಪಸ್ವಿ ಬ್ಯೋಧಿಕೋ ಯೋಗಿ"**ಎನ್ನುವ ಮಾತಿಗೆ ವಿರುದ್ಧ ಶೈಲಿಯಲ್ಲಿ ಇವೆ. ಜ್ಞಾನಿಗಳನ್ನೂ ಸಹ ದೇವರ ಮಾತಿಗೆ ವಿರೋಧಿಗಳನ್ನಾಗಿ ಮಾಡಬಲ್ಲದು. ಆದ್ದರಿಂದ ಶಾಸ್ತ್ರವನ್ನು ಆಧಾರ ಮಾಡಿಕೊಂಡು ಜ್ಞಾನಮಾರ್ಗದಲ್ಲಿಯೇ ನಡೆಯಬೇಕು. ಹಾಗೆ ನಡೆಯದೆ ಹೋದರೆ ದಾರಿ ತಪ್ಪುವ ಅಪಾಯವಿದೆ.

ಈಗಿನ ಕಾಲದಲ್ಲಿ ಎಷ್ಟೋಜನ ಗುರುಗಳಾಗಿ ಹೆಸರುವಾಸಿಯಾದವರು ಇದ್ದಾರೆ. ಅವರಲ್ಲಿ ಸ್ವಚ್ಛವಾದ ಜ್ಞಾನ ವಿವರಗಳಲ್ಲದೆ ಪುರಾಣ ಇತಿಹಾಸಗಳಾದ ಭಾರತ, ಭಾಗವತ, ರಾಮಾಯಣ ಕಥೆಗಳನ್ನು ಹೇಳಿಕೊಳ್ಳುವ ಗುರುಗಳನ್ನು ಬಿಟ್ಟು, ಆತ್ಮ ವಿವರವನ್ನು ತಿಳಿಸುವಂತಹ ಜಗತ್ ಗುರುಗಳನ್ನು ಸಹಿತ ನೋಡಿದ ಪಕ್ಷದಲ್ಲಿ ಅವರಲ್ಲಿಯೂ ಸಹ ಸ್ವಲ್ಪ ಮಾಯೆ ಕೆಲಸ ಮಾಡಿದೆಯೆಂದು ಹೇಳಬಹುದು. ಉದಾಹರಣೆಗೆ ಅದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡಿದ

ವರಿದ್ದಾರೆ. ಮತ್ತು ದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡಿದವರೂ ಸಹ ಇದ್ದಾರೆ. ಪೀಠಾಧಿಪತಿಗಳಾಗಿ ದೊಡ್ಡ ಗುರುಗಳೆಂದು ಹೆಸರುವಾಸಿಯಾದವರೆ ಒಬ್ಬರ ಸಿದ್ಧಾಂತವನ್ನು ಮತ್ತೊಬ್ಬರು ಒಪ್ಪಿಕೊಳ್ಳದೆ ದ್ವೈತ ಸರಿಯಾದುದಲ್ಲವೆಂದು ಅದ್ವೈತರು, ಅದ್ವೈತ ಸರಿಯಾದುದಲ್ಲವೆಂದು ದ್ವೈತರವಾದ. ಆಲೋಚಿಸಿ ನೋಡಿದಂತಾದರೆ ಒಬ್ಬರದು ಸರಿಯಾದ ಸಿದ್ಧಾಂತವಾದರೆ ಮತ್ತೊಬ್ಬರದು ತಪ್ಪು ಸಿದ್ಧಾಂತವಾಗುತ್ತದೆ! ಆದ್ದರಿಂದ ಸಿದ್ಧಾಂತಗಳನ್ನೇ ಹೊರಡಿಸಿದ ಗುರುಗಳ ಹತ್ತಿರವೂ ಸಹ ಮಾಯೆ ಕೆಲಸಮಾಡಿದೆ ಎಂದು ಹೇಳಬಹುದು.

ಸಿದ್ಧಾಂತ ಎನ್ನುವುದು ಎಂದಿಗೂ ಬದಲಾಗದಂತದ್ದಾಗಿರಬೇಕು, ಮತ್ತು ಅಸತ್ಯವಾದುದಾಗಿರಬಾರದು, ಇನ್ನೂ ವಿವರ ಹೇಳಿಕೊಂಡರೆ ಸಿದ್ಧಿ ಎಂದರೆ ಪ್ರಾಪ್ತಿಸುವುದು, ಸಿದ್ಧಿಸುವುದು ಎಂದರೆ ಅನುಭವಕ್ಕೆ ಬರುವುದೆಂದು ಅರ್ಥ. ಅನುಭವಕ್ಕೆ ಬರುವ ವಿಷಯ ತಿಳಿಸುವವನು ಸಿದ್ಧಾಂತಿಯಾಗುತ್ತಾನೆ. ಶಾಸನಗಳಿಂದ ಕೂಡಿಕೊಂಡಿರುವುದು ಶಾಸ್ತ್ರ. ಶಾಸನ ಮತ್ತು ಸಿದ್ಧಾಂತ ಎರಡೂ ಒಂದೇ. ಶಾಸ್ತ್ರ ತಿಳಿಸುವವನು ಶಾಸ್ತ್ರಿಯೆಂದು, ಸಿದ್ಧಾಂತವನ್ನು ತಿಳಿಸುವವನು ಸಿದ್ಧಾಂತಿಯೆಂದು ಪೂರ್ವದಲ್ಲಿ ಕರೆಯುತ್ತಿದ್ದರು. ಚಿಕ್ಕ ಚಿಕ್ಕ ಶಾಸನಗಳಿಂದ ಕೂಡಿಕೊಂಡಿರುವುದೇ ಒಂದು ಸಿದ್ಧಾಂತವಾಗುತ್ತದೆ. ಇದರ ಪ್ರಕಾರ ಎಲ್ಲಾ ವಿದ್ಯೆಗಳಿಗಿಂತ ದೊಡ್ಡ ವಿದ್ಯೆಯಾದ ಆಧ್ಯಾತ್ಮಿಕವು ಶಾಸನಪರವಾದ ಸಿದ್ಧಾಂತ ರೂಪವಾಗಿರಬೇಕು. ಹಾಗೆಯೇ ಜಗತ್ ಗುರುಗಳಾಗಿ ಹೆಸರುವಾಸಿಯಾದ ಶಂಕರಾ ಚಾರ್ಯರು ಅದ್ವೈತ ಸಿದ್ಧಾಂತವನ್ನು, ಮದ್ವಾಚಾರ್ಯರು ದ್ವೈತ ಸಿದ್ದಾಂತವನ್ನು ಪ್ರಚಾರ ಮಾಡಿದ್ದಾರೆ. ಇವು ಒಂದಕ್ಕೊಂದು ಭಿನ್ನವಾಗಿರುವುರಿಂದ ಯಾವುದು ಸತ್ಯ, ಯಾವುದು ಅಸತ್ಯವೆಂದು ಪರಿಶೀಲಿಸಿ ನೋಡಬೇಕಾಗಿದೆ. ಅವುಗಳ ವ್ಯತ್ಯಾಸಗಳು ಅವುಗಳಲ್ಲಿನ ಸತ್ಯಾಸತ್ಯಗಳು ತಿಳಿದುಕೊಳ್ಳುವುದಕ್ಕೆ ಪ್ರಮಾಣವಾಗಿ ಇಟ್ಟುಕೊಂಡು ನೋಡಬೇಕಾಗಿರುವುದೇ **ಭಗವಂತನು ಹೇಳಿದ ಭಗವದ್ಗೀತೆ.**

ಬ್ರಹ್ಮವಿದ್ಯೆಗೆ ಪ್ರಮಾಣ ಗ್ರಂಥವಾದ ಭಗವದ್ಗೀತೆ ನೂರಕ್ಕೆನೂರು ಪಾಲು ಶಾಸ್ತ್ರಬದ್ಧವಾದ ಸಿದ್ಧಾಂತಗಳಿಂದ ಕೂಡಿಕೊಂಡಿದೆ. ಪರಮಾತ್ಮ ಸ್ವತಃವಾಗಿ ತಿಳಿಸಿದ ಭಗವದ್ಗೀತೆಯ ಪ್ರಕಾರ ನೋಡಿದರೆ ಪರಮಾತ್ಮ, ಜೀವಾತ್ಮಗಳು ಎರಡೂ ಇಲ್ಲವೆಂದು ಪರಮಾತ್ಮ ಒಂದೇ ಇದೆಯೆಂದು ಅದ್ವೈತ, ಜೀವಾತ್ಮ ಮತ್ತು ಪರಮಾತ್ಮ ಎರಡೂ ಇವೆಯೆಂದು ಹೇಳುವುದು ದ್ವೈತ, ಎರಡೂ ಗೀತೆಗೆ ಸ್ವಲ್ಪ ಪಕ್ಕದಮಾರ್ಗದಲ್ಲಿ ಇವೆಯೆಂದು ತಿಳಿಯುತ್ತದೆ, ಎಂದರೆ ಪೂರ್ತಿಸರಿಯಾದ ಸಿದ್ಧಾಂತಗಳು ಅಲ್ಲವೆಂದು ಅರ್ಥವಾಗುತ್ತಿದೆ. ಗೀತೆಯನ್ನು ಪ್ರಮಾಣವಾಗಿ ಇಟ್ಟುಕೊಂಡು ನೋಡಿದಂತಾದರೆ ಮಾನವ ಮಾತ್ರರಾದ ಗುರುಗಳು ಹೇಳಿದ ದ್ವೈತ, ಅದ್ವೈತ ಸಿದ್ಧಾಂತಗಳು ಎರಡೂ ಹೇತುಬದ್ಧವಾಗಿಲ್ಲ. ದ್ವೈತ ಸಿದ್ಧಾಂತವನ್ನು ಪರಿಶೀಲಿಸಿ ನೋಡಿದಂತಾದರೆ ಭೂಮಿ ಮೇಲೆ ಬೇರುಗಳು ಇಲ್ಲದಂತೆ ಗಿಡವಿದೆ ಎನ್ನುವುದು ಎಷ್ಟುಸತ್ಯವೋ ಅಷ್ಟೇ ಸತ್ಯವಾಗಿರುವಂತೆ ತಿಳಿಯುತ್ತಿದೆ. ಹಾಗೇ ಅದ್ವೈತ ಸಿದ್ಧಾಂತವನ್ನು ಪರಿಶೀಲಿಸಿದರೆ ಭೂಮಿ, ಬೇರುಗಳು ಎರಡೂ ಇಲ್ಲದಂತೆಯೇ ಗಿಡ ಇದೆಯೆನ್ನುವುದು ಎಷ್ಟು ಸತ್ಯವೋ ಅಷ್ಟೇ ಸತ್ಯವಾಗುತ್ತದೆ. ಅಂದರೆ ಎರಡು ಸಿದ್ಧಾಂತಗಳು ಅಶಾಸ್ತ್ರೀಯವಾಗಿ ವೆಯೆಂದು, ಹೇತುಬದ್ಧವಾಗಿಲ್ಲವೆಂದು ತಿಳಿಯುತ್ತಿದೆ. **ಈ ಎರಡು ಸಿದ್ಧಾಂತಗಳು ಅಶಾಸ್ತ್ರೀಯ ಅಹೇತುಕ ಎನ್ನುವುದಕ್ಕೆ ಗೀತೆಯಲ್ಲಿನ ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿರುವ 16, 17 ನೇ ಶ್ಲೋಕಗಳೇ ಆಧಾರ. ಈ ಎರಡು ಶ್ಲೋಕಗಳು ದ್ವೈತ ಅದ್ವೈತ ಸಿದ್ಧಾಂತಗಳೆರಡನ್ನು ಒಂದೇ ಏಟಿಗೆ ಹೊಡೆದುಹಾಕುವವು. ಈ ಎರಡು ಶ್ಲೋಕಗಳೇ ಅಸಲಾದ ಆಧ್ಯಾತ್ಮಿಕ ಸಿದ್ಧಾಂತವಾದ ತ್ರೈತ ಸಿದ್ಧಾಂತವನ್ನು ಬೋಧಿಸುತ್ತಿವೆ. ಈ ಎರಡು ಶ್ಲೋಕಗಳೇ ಅಲ್ಲದೆ ಗೀತೆಯೊಂದರ ಸಾರಾಂಶವೆಲ್ಲವೂ ತ್ರೈತದ ಮೇಲೆ ಬೋಧಿಸಲ್ಪಟ್ಟಿದೆ.** ಕಲಿಯುಗದಲ್ಲಿ ದ್ವೈತ, ಅದ್ವೈತ ಸಿದ್ಧಾಂತಗಳು ಹೊರಗೆಬಂದರೆ, ದ್ವಾಪರಯುಗ ಅಂತ್ಯದಲ್ಲಿಯೇ ತ್ರೈತಸಿದ್ಧಾಂತ ಭಗವಂತನಿಂದ ಬೋಧಿಸಲ್ಪಟ್ಟಿದೆ. ಆದರೆ ಮಾಯಾ ಪ್ರಭಾವದಿಂದ ತ್ರೈತ ಅರ್ಥವಾಗದಂತೆ ಹೋಗಿದೆ. ಮಾಯ ಪ್ರಭಾವದಿಂದಲೇ ದ್ವೈತ, ಅದ್ವೈತಗಳು ಹೊರಬಿದ್ದಿವೆ. ಈಗಲೂ ದ್ವೈತ, ಅದ್ವೈತ ಗುರುಪರಂಪರೆಗಳಾದ ಮದ್ವಾಚಾರ್ಯ,

ಶಂಕರಚಾರ್ಯ ಪೀಠಗಳು ಭೂಮಿ ಮೇಲೆ ಇವೆ. **ತ್ರೈತವೆಂಬ ಹೆಸರಾಗಲಿ ಅದನ್ನು ಬೋಧಿಸುವವರಾಗಲಿ ಇಲ್ಲದಂತೆ ಹೋಗಿದ್ದಾರೆ. ಇಂತಹ ಪರಿಸ್ಥಿತಿಗಳಲ್ಲಿ ತ್ರೈತ ಹೊರಗೆ ಬರುವುದು ನಮ್ಮ ಅದೃಷ್ಟವೆಂದು ತಿಳಿಯಬೇಕು. ತ್ರೈತದ ಪ್ರಕಾರವೇ ಭಗವದ್ಗೀತೆ ಇದೆ. ಭಗವದ್ಗೀತೆಯ ಪ್ರಕಾರವೆ ತ್ರೈತವಿದೆ.** ನಾವು ಇಲ್ಲಿ ಹೊಸದಾಗಿ ಹೇಳಿಕೊಳ್ಳುತ್ತಿರುವ ತ್ರೈತ ಸಿದ್ಧಾಂತವನ್ನು ಕುರಿತು ಸ್ವಲ್ಪ ವಿವರಿಸಿಕೊಳ್ಳೋಣ.

ಪರಮಾತ್ಮನನ್ನು ಹೊರತುಪಡಿಸಿ ಎರಡನೆಯದು ಇಲ್ಲ ಎನ್ನುವುದು ಅದ್ವೈತ, ಪರಮಾತ್ಮ ಜೀವಾತ್ಮಗಳೆರಡೂ ಇವೆಯೆನ್ನುವುದು ದ್ವೈತ. ಪರಮಾತ್ಮ ಮತ್ತು ಜೀವಾತ್ಮಕ್ಕೆ ಮಧ್ಯೆ ಆತ್ಮ ಇದೆಯೆಂದು ಮೂರನ್ನು ಕುರಿತು ತಿಳಿಸುವುದು ತ್ರೈತ. ಯಾವ ವಿಧವಾಗಿ ಭೂಮಿಗೂ ಗಿಡಕ್ಕೂ ಮಧ್ಯದಲ್ಲಿ ಕಾಣಿಸದಂತೆ ಬೇರುಗಳಿವೆಯೋ, ಹಾಗೆಯೇ ಪರಮಾತ್ಮಕ್ಕೂ ಜೀವಾತ್ಮಕ್ಕೂ ಮಧ್ಯದಲ್ಲಿ ಆತ್ಮ ಇದೆ. ಭೂಮಿಗೂ, ಗಿಡಕ್ಕೂ ಮಧ್ಯದಲ್ಲಿ ಬೇರುಗಳು ಎಷ್ಟು ಪ್ರಾಮುಖ್ಯತೆ ವಹಿಸಿವೆಯೋ, ಹಾಗೇ ಪರಮಾತ್ಮಕ್ಕೂ ಜೀವಾತ್ಮಕ್ಕೂ ಮಧ್ಯದಲ್ಲಿ ಆತ್ಮ ಅಷ್ಟೇ ಪ್ರಾಮುಖ್ಯತೆಯನ್ನು ವಹಿಸಿದೆ. ಪರಮಾತ್ಮ ಸರ್ವವ್ಯಾಪಿ, ಅನಂತವಾದರೆ ಆತ್ಮ ಶರೀರವೆಲ್ಲಾ ವ್ಯಾಪಿಸಿ, ಶರೀರದಲ್ಲಿ ಒಂದು ಸ್ಥಾನದಲ್ಲಿರುವ ಜೀವಾತ್ಮವೊಂದರ ಜೀವನವನ್ನು ಸಾಗಿಸುತ್ತಿದೆ. ಬೇರುಗಳು ಇಲ್ಲದೆಹೋದರೆ ಗಿಡ ಹೇಗೆ ಇಲ್ಲವೋ ಹಾಗೆಯೇ ಆತ್ಮ ಇಲ್ಲದೆಹೋದರೆ ಜೀವಾತ್ಮನೇ ಇರುವುದಿಲ್ಲ. ಭೂಮಿ ಮೇಲೆ ಗಿಡ ಎಲ್ಲಿದ್ದರೂ, ಅದಕ್ಕೆ ತಪ್ಪದೆ ಬೇರುಗಳು ಅನುಸಂಧಾನವಾಗಿದ್ದು ಗಿಡದ ಜೀವನವನ್ನು ಸಾಗಿಸುವುದಕ್ಕೆ ಆಧಾರವಾಗಿ ಹೇಗಿವೆಯೋ, ಹಾಗೆಯೇ ಪರಮಾತ್ಮ ವ್ಯಾಪಿಸಿದ ಜಗತ್ತಿನಲ್ಲಿ ಜೀವಾತ್ಮ ಎಲ್ಲಿದ್ದರೂ ಆತ್ಮ ಅನುಸಂಧಾನವಾಗಿದ್ದು ಜೀವಾತ್ಮ ಜೀವನವನ್ನು ಸಾಗಿಸುವುದಕ್ಕೆ ಆಧಾರವಾಗಿದೆ. **ಜಗತ್ತಿನಲ್ಲಿ ಪರಮಾತ್ಮ, ಆತ್ಮ, ಜೀವಾತ್ಮ, ಇಲ್ಲದ ಆಧ್ಯಾತ್ಮಿಕವೇ ಇಲ್ಲ. ಈ ವಿಷಯವನ್ನೇ ವಿವರಿಸುತ್ತಾ ಕ್ಷರನೆಂದು ಜೀವಾತ್ಮನನ್ನು, ಅಕ್ಷರನೆಂದು ಆತ್ಮನನ್ನು, ಪುರುಷೋತ್ತಮನೆಂದು ಪರಮಾತ್ಮನನ್ನು ಗೀತೆಯಲ್ಲಿ ಬೋಧಿಸಿದ್ದಾರೆ. ಜೀವಾತ್ಮ, ಆತ್ಮಗಳೆರಡೂ ಕೂಟಸ್ಥವಾಗಿ ಕೂಡಿವೆಯೆಂದು, ಅವುಗಳಿಗೆ ಅತೀತವಾಗಿ ಪರಮಾತ್ಮ ಇದೆಯೆಂದು,**

ಜೀವಾತ್ಮ ಆತ್ಮಗಳೆಂಬ ಇಬ್ಬರು ಪುರುಷರಿಗಿಂತ ಅತೀತವಾಗಿರುವ ಪರಮಾತ್ಮ ಪುರುಷೋತ್ತಮನೆಂದು ಹೇಳಲ್ಪಟ್ಟಿದೆ. ಈ ವಿಷಯ ಬ್ರಹ್ಮವಿದ್ಯಾಶಾಸ್ತ್ರವಾದ ಗೀತೆಯಲ್ಲಿ ಪರಮಾತ್ಮ ಮಾತುಗಳ ರೂಪದಲ್ಲಿ ಹೇಳಿರುವುದಲ್ಲದೆ ಪ್ರತಿ ಮಾನವನು ಈ ವಿಷಯವನ್ನು ತಿಳಿದುಕೊಳ್ಳುವಂತೆ, ಪ್ರತಿ ಮಾನವನ ಹಸ್ತದಲ್ಲಿಯೂ ಜೀವಾತ್ಮ, ಆತ್ಮ, ಪರಮಾತ್ಮರ ಗುರುತಾಗಿ ಮೂರು ರೇಖೆಗಳು ಮುದ್ರಿಸಿಟ್ಟಿದ್ದಾನೆ. ಪ್ರತಿ ಮನುಷ್ಯನ ಹಸ್ತದಲ್ಲಿನ ಮೂರು ರೇಖೆಗಳು ಮುಖ್ಯವಾಗಿರುತ್ತವೆ. ಅವುಗಳಲ್ಲಿ ಎರಡು ಕೆಳಗಿನ ರೇಖೆಗಳ ತುದಿಗಳು ಒಂದಕ್ಕೊಂದು ಸೇರಿರುತ್ತವೆ. ಮೇಲಿನ ರೇಖೆ ಒಂದು ಮಾತ್ರ ಪ್ರತ್ಯೇಕವಾಗಿರುವುದು ಗಮನಿಸಬಹುದು. ಬೆರೆತಿರುವ ಎರಡು ರೇಖೆಗಳು ಜೀವಾತ್ಮ, ಆತ್ಮಗಳಿಗೆ ಪ್ರತೀಕಗಳಾಗಿರುವಾಗ ಪ್ರತ್ಯೇಕವಾಗಿ ಮೇಲಿರುವ ರೇಖೆ ಮಾತ್ರ ಪರಮಾತ್ಮಕ್ಕೆ ಗುರುತಾಗಿದೆ. ಇದು ಪ್ರತಿ ಹಸ್ತದಲ್ಲಿರುವಾಗ, ಗುರುಗಳಾಗಿರುವವರೂ ಸಹ ಇದನ್ನು ಗಮನಿಸಲಿಲ್ಲವೆಂದರೆ, ಮಾಯೆವೊಂದರ ಪ್ರಭಾವ ಎಷ್ಟು ಹೆಚ್ಚಾಗಿದೆಯೋ ಅರ್ಥ ಮಾಡಿಕೊಳ್ಳಬಹುದು. ಸೃಷ್ಟಿ ಆದಿಯಲ್ಲಿಯೇ ಮಾನವನ ಅಂಗೈಯಲ್ಲಿ ಮೂರು ಆತ್ಮಗಳ ರಹಸ್ಯವನ್ನಿಟ್ಟಿರುವ ಪರಮಾತ್ಮ ದ್ವಾಪರಯುಗ ಅಂತ್ಯದಲ್ಲಿಯೂ ಸಹ ಅದೇ ವಿಷಯವನ್ನೇ ಗೀತೆಯಲ್ಲಿ ಹೇಳಿದ್ದಾನೆ. ಕೈಯಲ್ಲಿಟ್ಟರೂ, ಬಾಯಿಂದ ಹೇಳಿದರೂ, ಮಾನವನು ಗ್ರಹಿಸಲಾರದೆ ಹೋಗುತ್ತಿದ್ದಾನೆಂದು ಪೂರ್ವದಲ್ಲಿ ತಿಳಿದ ಹಿರಿಯರು ಪುರುಷನನ್ನು ಸೂಚಿಸುವ ಲಿಂಗಾಕೃತಿಯನ್ನು ದೇವಾಲಯಗಳಲ್ಲಿ ಪ್ರತಿಷ್ಠಾಪಿಸಿ ಗೀತೆಯಲ್ಲಿ ಹೇಳಿದಂತೆ **ಜೀವಾತ್ಮ, ಆತ್ಮ, ಪರಮಾತ್ಮಗಳಾಗಿ, ಪುರುಷನು ಮೂರು ಭಾಗಗಳಾಗಿ ಇದ್ದಾನೆಂದು ತಿಳಿಯುವಂತೆ, ಮೂರು ವಿಭೂತಿರೇಖೆಗಳನ್ನು ಲಿಂಗದ ಮೇಲೆ ರೂಪಿಸಿಟ್ಟಿದ್ದಾರೆ. ಮೂರು ಆತ್ಮಗಳ ವಿಷಯ ಪ್ರತಿ ಈಶ್ವರ ದೇವಾಲಯಗಳಲ್ಲಿಯೂ ಇರುವಂತೆ ಮಾಡಿದ್ದಾರೆ.** ಆದರೆ ಕಾಲಕ್ರಮವಾಗಿ ಧರ್ಮ ಯಾವಾಗಲೋ ಅಧರ್ಮವಾಗಿ ಬದಲಾಗಿಹೋಗಿ ಈಶ್ವರ ದೇವಾಲಯ ಕೊನೆಗೆ ಕತ್ತಿನಲ್ಲಿ ಹಾವು ಇರುವ ಶಿವನ ಆಲಯವಾಗಿ ಲೆಕ್ಕಿಸಲ್ಪಡುತ್ತಿದೆ. ಈಶ್ವರನೆಂದರೆ ಅಧಿಪತಿ ಎಂಬ ಅರ್ಥಹೋಗಿ ಈಶ್ವರನೇ ಶಂಕರನೆಂಬ ಅಪಾರ್ಥ ಉಳಿದುಹೋಗಿದೆ. ಆದಿಯಲ್ಲಿ ಸ್ವಚ್ಛವಾಗಿರುವ ಲಿಂಗ ಒಂದೇ ಇರುವ

ಈಶ್ವರಾಲಯದಲ್ಲಿ ನಂತರ ಲಿಂಗದ ಪಕ್ಕದಲ್ಲಿ ಪಾರ್ವತಿ, ಎದುರಿಗೆ ನಂದಿಯನ್ನು ಪ್ರತಿಷ್ಠಾಪಿಸಿದ್ದಾರೆ. ಹೀಗೆ ಕೊನೆಗೆ ಈಶ್ವರಾಲಯ ಶಂಕರಾಲಯವಾಗಿ ಬದಲಾಗಿ ಶೈವರ ದೇವಾಲಯವಾಗಿದೆ. ಹೀಗೆ ಮೂರು ವಿಭೂತಿ ರೇಖೆಗಳ ಅರ್ಥವಾದ ಆತ್ಮಗಳ ಗುರುತು ಬದಲಾದರೂ ಅಸಲು ಸತ್ಯ ಸ್ಥಿರವಾಗಿರುವಂತೆ ನಮ್ಮ ಹಿರಿಯರು ಒಂದು ನಿಯಮವನ್ನು ಇಟ್ಟಿದ್ದಾರೆ. ಅದೇನೆಂದರೆ ಪ್ರತಿದಿನ ಬೆಳಗ್ಗೆ ನಿದ್ರೆಯಿಂದ ಎದ್ದಾಗ ಯಾರ ಮುಖವನ್ನೂ ಸಹ ನೋಡದಂತೆ ಮೊಟ್ಟಮೊದಲು ತನ್ನ ಅಂಗೈಯನ್ನು ನೋಡಬೇಕೆಂದು ಹೇಳಿದ್ದಾರೆ. ಎದ್ದ ತಕ್ಷಣವೆ ಅಂಗೈಯನ್ನು ನೋಡುವುದರಿಂದ ಮೂರು ರೇಖೆಗಳು ಕಾಣಿಸುತ್ತವೆಂದು, ಎಂದಿಗಾದರೂ ಅವುಗಳನ್ನು ಕುರಿತು ಆಲೋಚಿಸುವುದಿಲ್ಲವಾ! ಎಂದು ಹಿರಿಯರ ಭಾವನೆಯಾಗಿರಬಹುದು. ಈ ಆಚಾರ ಈ ಕಾಲದಲ್ಲಿ ಎಲ್ಲಿಯಾದರು ಉಳಿದಿದ್ದರೂ ಅರ್ಥ ತಿಳಿದುಕೊಳ್ಳದೆ ಹೋಗುತ್ತಿದ್ದಾರೆ. ಅಂಗೈಯಲ್ಲಿಯೇ ಮೂರು ಆತ್ಮಗಳಿವೆಯೆಂದು, ಅಂಗೈಯಲ್ಲೆ ಎಲ್ಲಾ ಇದೆಯೆಂದು, ಅಂಗೈಯಲ್ಲೆ ವೈಕುಂಠ ಇದೆಯೆಂದು, ಅಂಗೈಯಲ್ಲಿಯೇ ತ್ರೈತ ಸಿದ್ಧಾಂತ ಇದೆಯೆಂಬ ಅರ್ಥದಿಂದ, ಯಾವ ಮತದವನಾದರೂ ನನ್ನ ಅಭಿಮತದಲ್ಲಿಯೇ ಇದ್ದಾನೆಂದು ಪರಮಾತ್ಮ ಮಾನವರ ಕೈಯಲ್ಲಿ ಮೂರು ರೇಖೆಗಳನ್ನು ಅಳವಡಿಸಿಟ್ಟಿದ್ದಾನೆ.

ಕೈಯಲ್ಲಿನ ಮೂರುರೇಖೆಗಳೇ ಶರೀರದಲ್ಲಿನ ಮೂರು ಆತ್ಮಗಳೆಂದು, ಶರೀರದಲ್ಲಿನ ಮೂರು ಆತ್ಮಗಳನ್ನೇ ತ್ರೈತವೆನ್ನುತ್ತಿದ್ದೇವೆಂದು, ತ್ರೈತವನ್ನು ತಿಳಿಸುವುದೇ ತ್ರೈತಸಿದ್ಧಾಂತ ಭಗವದ್ಗೀತೆ ಎಂದು ತಿಳಿಸುತ್ತಿದ್ದೇವೆ. ತ್ರೈತಸಿದ್ಧಾಂತ ಮುಖ್ಯವಾಗಿ ಮೂರು ಆತ್ಮಗಳ ವಿವರವನ್ನು ಕುರಿತು ಹೇಳುತ್ತಾಹೋಗಿದೆ. ತ್ರೈತ ಎಂದರೂ, ಮೂರು ಆತ್ಮಗಳೆಂದರೂ ಓದುವವರಿಗೆ ಹೊಸದಾಗಿರುತ್ತದೆ. ಆದ್ದರಿಂದ ಮೊದಲು ಗೀತಾ ಪರಿಚಯವನ್ನು ಓದಬೇಕಾದ ಅವಶ್ಯಕತೆ ಇದೆ. ಏಕೆಂದರೆ ಒಬ್ಬ ಹೊಸಬನನ್ನು ನಾವು ನೇರವಾಗಿ ಮಾತನಾಡಿಸಲಾರೆವು. ಅವನೊಂದಿಗೆ ಸ್ನೇಹ ಮಾಡಲಾರೆವು. ಹೊಸ ವ್ಯಕ್ತಿಯನ್ನು ಪರಿಚಯ ಮಾಡಿಕೊಳ್ಳುವುದಕ್ಕೆ ಮೊದಲು ಒಬ್ಬ ಮಧ್ಯವರ್ತಿ ಇದ್ದರೆ ಅವನೊಂದಿಗೆ

ಸುಲಭವಾಗಿ ಪರಿಚಯ ಏರ್ಪಡುತ್ತದೆ. ಮಧ್ಯವರ್ತಿಯ ತಿಳಿವಳಿಕೆಯನ್ನನುಸರಿಸಿ, ಅವನು ತಿಳಿಸುವುದನ್ನನುಸರಿಸಿ, ಹೊಸ ವ್ಯಕ್ತಿಯ ವಿಷಯವೆಲ್ಲವೂ ನಮಗೆ ಮೊದಲೇ ಅವಗಾಹನೆ ಆಗಬಲ್ಲದು. ಅದರ ನಂತರ ಅವನೊಂದಿಗೆ ಸುಲಭವಾಗಿ ಬೆರೆತು ಹೋಗಬಹುದು. ಹಾಗೆಯೇ ತ್ರೈತ ಸಿದ್ಧಾಂತ ಭಗವದ್ಗೀತೆಯಲ್ಲಿನ ಸಾರಾಂಶವನ್ನು ತಿಳಿಯಬೇಕೆಂದರೆ, ಅದರ ಅವಗಾಹನೆ ಬೇಕೆಂದರೆ, ಮೊದಲು ಗೀತಾ ಪರಿಚಯವೆಂಬ ಮಧ್ಯವರ್ತಿ ಬೇಕಾಗಿದೆ. ಗೀತಾ ಪರಿಚಯವನ್ನು ಓದಿದ ನಂತರ ತ್ರೈತ ಸಿದ್ಧಾಂತ ಭಗವದ್ಗೀತೆ ಎನ್ನುವ ಹೊಸ ಗೀತೆ ಅರ್ಥ ವಾಗಬಲ್ಲದು. ಈ ಗೀತಾ ಪರಿಚಯ ನಿಮ್ಮನ್ನು ತ್ರೈತದ ಜೊತೆ ಪರಿಚಯ ಮಾಡಿಸಿ, ತ್ರೈತ ಎಂದರೆ ಏನೋ ತಿಳಿಸಬಲ್ಲದು. ಗೀತಾಪರಿಚಯವನ್ನು ಓದಿದ ನಂತರ ನಮ್ಮಿಂದ ರಚಿಸಲ್ಪಟ್ಟ **"ತ್ರೈತಸಿದ್ಧಾಂತ ಭಗವದ್ಗೀತೆಯನ್ನು"** ಓದುತ್ತೀರೆಂದು ಕೋರುತ್ತಿದ್ದೇವೆ.

ಇಂತಿ,

ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ

ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು

ಒಂದು ವಿಷಯವನ್ನು ಸಮರ್ಥಿಸುವುದಕ್ಕೆ ಶಾಸ್ತ್ರ ಎಷ್ಟು ಅವಶ್ಯವೋ, ಹಾಗೆಯೇ ಒಂದು ವಿಷಯವನ್ನು ಖಂಡಿಸುವುದಕ್ಕೂ ಶಾಸ್ತ್ರ ಅಷ್ಟೇ ಅವಶ್ಯವಾಗುತ್ತದೆ.

ಅಸತ್ಯವನ್ನು ಸಾವಿರ ಮಂದಿ ಹೇಳಿದರೂ ಅದು ಸತ್ಯವಲ್ಲ,
ಸತ್ಯವನ್ನು ಸಾವಿರ ಮಂದಿ ಅಲ್ಲ ಎಂದರೂ ಅದು ಅಸತ್ಯವಲ್ಲ.

ಇಂದೂ– ಹಿಂದೂ

ಇಂದೂ = ಚಂದ್ರನು = ಜ್ಞಾನಿ
ಹಿಂದೂ = ಅರ್ಥರಹಿತ = ಜ್ಞಾನವಿಲ್ಲದ } ಪ್ರಬೋಧಾನಂದ ಯೋಗೀಶ್ವರರು

ಹಿಂದೂ = ಕಳ್ಳ = ದಯಾನಂದ ಸರಸ್ವತಿ (ಗುರೂಜೀ ಸಮಗ್ರ ಗ್ರಂಥಾವಲಿ)

ಹಿಂದೂ=ಬೇವಕೂಫ್=ನೃಸಿಂಹಾನಂದ ಭಾರತಿ (ಹೈಂದವ ಶಂಖಾರಾವಮು)

▶ ಚಿನಜೀಯರ್ ಮುಂತಾದ ಬಹಳ ಮಂದಿ ಸ್ವಾಮೀಜಿಯರು ಹಿಂದೂ ಶಬ್ದವನ್ನು ಬಳಸಬಾರದೆಂದಿದ್ದಾರೆ. ಆ ಪದವನ್ನು ಬಳಸಿದರೇ ನಮ್ಮ ತಲೆಯನ್ನು ನಾವೇ ಕಡೆದುಕೊಂಡಂತೆ ಎಂದು ತಮ್ಮ ಉಪನ್ಯಾಸಗಳಲ್ಲಿ ಹೇಳಿದ್ದಾರೆ. ಬಹಳ ಮಂದಿ ಸ್ವಾಮೀಜಿಯರು ಈ ಶಬ್ದವನ್ನು ವಿದೇಶೀಯರಾದ ಮುಸ್ಲೀಮ್‌ರು ನಮಗೆ ಅತ್ತಗಟ್ಟುತ್ತಿದ್ದಾರೆ. ಅವರ ಭಾವದಲ್ಲಿ ಹಿಂದೂ ಎಂದರೇ ಬುದ್ಧಿ ಕಡಿಮೆಯವರೆಂದು ಅರ್ಥವಂತೆ.

▶ ಬೃಹಸ್ಪತಿ ಆಗಮವನ್ನು ಅನುಸರಿಸಿ ಪೂರ್ವದಲ್ಲಿ ಈದಿನ ನಾವು ಕರೆಯುವ ಹಿಂದೂ ಸಮುದ್ರವನ್ನು **"ಇಂದೂ ಸರೋವರವೆಂದು"** ಕರೆಯುತ್ತಿದ್ದರು.

▶ ನೆಹ್ರೂ ತನ್ನ ಮಗಳಾದ ಇಂದಿರಾಗಾಂಧೀಯನ್ನು ಪ್ರೀತಿಯಿಂದ ಇಂದೂ ಎಂದು ಕರೆಯುತ್ತಿದ್ದನು. ಇಂದೂ ಎಂದರೇ **'ಜ್ಞಾನಿ'** ಎಂದು ಅರ್ಥ.

▶ ಕಾಶೀ ಇನ್ನೂ ಮುಂತಾದ ನತರಗಳು ಅರ್ಧ ಚಂದ್ರಾಕಾರದ ಆಕೃತಿಯಲ್ಲಿ ಡೊಂಕು ತಿರಿಗಿವೆ. ಚಂದ್ರನನ್ನು **'ಇಂದೂ'** ಎನ್ನುತ್ತಾರೆ.

▶ ಹಿಂದೂ ಸಮುದ್ರ ಜ್ಞಾನ ನಿಲಯಕ್ಕೆ ಗುರುತು ಆದ್ದರಿಂದ ಅದನ್ನು ಪೂರ್ವದಲ್ಲಿ **'ಇಂದೂ ಮಹಾ ಸಮುದ್ರ'**ವಾಗಿ ಕರೆಯುತ್ತಿದ್ದರು. (**"ತ್ರೈತಾಕಾರ ರಹಸ್ಯ"** ಎಂಬ ಗ್ರಂಥದಲ್ಲಿ ಇದೆ.)

▶ ಭಾರತ ದೇಶ ಪೂರ್ವದಲ್ಲಿ ಜ್ಞಾನವಿರುವ ದೇಶ. ಆದ್ದರಿಂದ ಭಾರತದೇಶವನ್ನು ಇಂದೂ ದೇಶವೆಂದೂ, ಭಾರತೀಯರನ್ನು ಇಂದೂಗಳೆನ್ನುತ್ತಿದ್ದರು.

visit website : www.thraithashakam.org

1. ನಾಲ್ಕು ಅಧರ್ಮಗಳು ಶೇ. ಹತ್ತರಷ್ಟು ಮನುಷ್ಯರಲ್ಲಿರುವಾಗ, ಒಂದು ಮತವೆಂಬ ಅಧರ್ಮ 99 ರಷ್ಟು ಇದೆ.
2. ಯಜ್ಞ, ದಾನ, ವೇದ, ತಪಸ್ಸುಗಳು ನಾಲ್ಕು ಆದಾಗ, ಐದನೆಯ ಅಧರ್ಮ ಮತ.
3. ದೈವ ಮಾರ್ಗಕ್ಕೆ ದೊಡ್ಡ ಆತಂಕ ಮತ.
4. ಎಲ್ಲ ಅಧರ್ಮಗಳನ್ನು ಮೀರಿರುವುದು ಮತವೆಂಬ ಅಧರ್ಮ.
5. ಪ್ರಪಂಚ ಮಾರ್ಗದಲ್ಲಿ ಮತವಿದ್ದರೇ ದೈವ ಮಾರ್ಗದಲ್ಲಿ ಹತವಾಗಿ ಹೋಗುತ್ತೀಯ.
6. ಕಲಿಯುಗದಲ್ಲಿ ಹೊಸದಾಗಿ ಹುಟ್ಟಿ ಬಂದಿರುವ ಐದನೆಯ ಅಧರ್ಮವೇ ಮತ.

ಗೀತಾ ಪರಿಚಯ



ಪ್ರಬೋಧಾಶ್ರಮ (ಶ್ರೀಕೃಷ್ಣ ಮಂದಿರ)

ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರ (ಜಿಲ್ಲಾ), ಆಂಧ್ರಪ್ರದೇಶ್ ರಾಷ್ಟ್ರ

Author :

The Only GURU of Three Religions

The Spiritual Emperor, Thraitha Theorem Originator

Sri Acharya Prabodhananda Yogeeshwarulu